1986



ಖಾಸಗಿ ಪ್ರಸಾರಕ್ಕಾಗಿ

ಮಾನವಿ

ಸಂಪುಟ : 1 ಸಂಚಿಕೆ : 1

ಮಾರ್ಚಿ–ಏಪ್ರಿಲ್ 1986

ಸಂಪಾದಕೀಯ ಮಂಡಳಿ :

ಸಾವಿತ್ರಿ ಜಿ.ಕೆ , ಚಂಪಾವತಿ ಎಚ್.ಎಸ್., ರಾಜೇಶ್ವರಿ ಎಚ್.ಎಸ್., ಶಶಿಕಲಾ ಪಿ., ಶೈಲಜಾ ಕೆ.ಪಿ.

ಸಲಹೆ–ಸಹಕಾರ :

ವಿಜಯಾ

ವಿಳಾಸ : "ಮಾನವಿ"

ನಂ. 655/2 – ಎಲ್, ಮಹಡಿ
ಮಾರುತಿ ಕಲ್ಯಾಣ ಮಂಟಪ
ಬಾಣಸವಾಡಿ ಮುಖ್ಯ ರಸ್ತೆ
ಮಾರುತಿ ಸೇವಾನಗರ ಅಂಚೆ
ಬೆಂಗಳೂರು-560 033

ಸೂಚನೆ : ವಾರ್ಷಿಕ ಚಂದಾ : 15 ರೂ.
ಆಜೀವ ಚಂದಾ : 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಏಳು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ.ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ........

ಮುಖ ಪುಟ : ಕಲ್ಲಪ್ಪಮಕಾಳಿ
ಒಳಪುಟದ ಚಿತ್ರಗಳು : ಸರೋಜ್, ಬಿ.ಆರ್. ಪದ್ಮ, ನಿರ್ಮಲಾ ಆನವಟ್ಟಿ.

ಸುತ್ತಲಿನ ಸಮಾಜದಲ್ಲಿ ಹೆಣ್ಣಿಗೆ ಎರಡನೇ ಸ್ಥಾನ. ಬದುಕಿನ ಪ್ರತಿಗತಿಯಲ್ಲಿ ಸಿದ್ಧ ಪಾತ್ರಗಳು, ಸಿದ್ಧ ಸೂತ್ರಗಳು ಆಕೆಯನ್ನು ಕಾಡಿವೆ. ಜೀವಸೆಲೆ ಬತ್ತಿಸಿದೆ. ಹೆಣ್ತನದ ಚಿಪ್ಪೊಳಗೆ, ಬಿಗಿದ ಬಂಧದಲಿ ಆಕೆಯ ಸುಖ ದುಃಖ, ನೋವು ನಲಿವುಗಳು ತೊಡರಿಕೊಂಡಿವೆ. ಇತಿಹಾಸದಲ್ಲಿ ಆಕೆಯದೇ ಅನುಭವಗಳ ಅಭಿವ್ಯಕ್ತಿ ಇಲ್ಲ.

ಇಂತಹ ಅಭಿವ್ಯಕ್ತಿಗೆ "ಮಾಧ್ಯಮ"ವಾಗುವ ಆಶಯ "ಮಾನವಿ"ಯದು.

ಸಂಪಾದಕೀಯ

ಪುರುಷ ಪ್ರಧಾನ ಮೌಲ್ಯಗಳ, ದೃಷ್ಟಿ ಕೋನಗಳ ಹಿಡಿತದಲ್ಲಿ ಸಿಲುಕಿರುವ ಸಮೂಹ ಮಾಧ್ಯಮಗಳು ಹೆಣ್ಣನ್ನು ಮಗಳಾಗಿ, ಹೆಂಡತಿಯಾಗಿ, ತಾಯಿಯಾಗಿ ಅಥವಾ ಭೋಗದ ವಸ್ತುವನ್ನಾಗಿ ಮಾತ್ರ ಚಿತ್ರಿಸುತ್ತಿವೆ. ರೂಢಿಗತ ಮೌಲ್ಯಗಳನ್ನು ಉಳಿಸಿಕೊಂಡು ಬರುವಲ್ಲಿ ಪೂರಕ ಪಾತ್ರ ವಹಿಸುತ್ತಿವೆ. ಈ ಚೌಕಟ್ಟಿನಿಂದಾಚೆಗೆ ಹೆಣ್ಣಿನ ಬದುಕಿನ ನಾನಾ ಸ್ತರಗಳನ್ನು ಚಿತ್ರಿಸುವ ಯತ್ನಕ್ಕೆ "ಮಾನವಿ" ನಾಂದಿಯಾಗಲಿದೆ.

ಹೆಣ್ಣಿನ ಅನುಭವಗಳ ಆಯಾಮಗಳ ಅರಸುವಿಕೆ ನಮ್ಮ ಗುರಿ.

ಹೆಣ್ಣಿನ ಬದುಕುವ ಹಕ್ಕನ್ನೇ ಕಿತ್ತುಕೊಳ್ಳುವಂತಹ ಮೌಲ್ಯಗಳಿರುವ ಸಮಾಜದಲ್ಲಿ, ಗಂಡು-ಹೆಣ್ಣಿಗೆ ಸಮಾನ ಅವಕಾಶಗಳಿರುವಂತಹ ಹೊಸ ಸಾಂಸ್ಕೃತಿಕ ವಾತಾವರಣ ಸೃಷ್ಟಿಸುವ ಹೊಣೆಗಾರಿಕೆಯೂ ಪತ್ರಿಕೆಗಿದೆ. ಜಾತಿ, ವರ್ಗ, ಲಿಂಗ ಭೇದಗಳಲ್ಲಿ ತನ್ನನ್ನು ಗುರುತಿಸಿಕೊಳ್ಳುವ ಹೆಣ್ಣು, ಎಲ್ಲ ಪ್ರಗತಿಪರ ಚಳವಳಿಗಳ ಜತೆ ಸಂಬಂಧ ಸ್ಥಾಪಿಸಿಯೂ, ತನ್ನದೇ ವಿಶಿಷ್ಟ ಸಮಸ್ಯೆಗಳ ಹೋರಾಟಕ್ಕೆ ಮಹಿಳಾ ಚಳವಳಿ ರೂಪಿಸಬೇಕಿದೆ. ವೈಯಕ್ತಿಕವೆಂದು ಪರಿಗಣಿಸ್ಪಡುವ ಸ್ತ್ರೀಯರ ಸಮಸ್ಯೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳನ್ನು ನೀಡಬೇಕಿದೆ.

ಅಂತರಂಗದಲ್ಲಿ ಹೆಪ್ಪುಗಟ್ಟಿರುವ ಮೌನಕ್ಕೆ ಮಾತಾಗಲಿದ್ದಾಳೆ "ಮಾನವಿ"

ಹೊಸನೋಟದಲ್ಲಿ ಬದುಕ ಕಾಣಬಯಸುವ "ಮಾನವಿ" ಸ್ವಾತಂತ್ರ್ಯ ದಚಿಲುಮೆಯಲ್ಲಿ ಅನಂಭವಗಳ ವಿಶಿಷ್ಟತೆಯಲ್ಲಿ, ಕಲುವಂತಿಕೆಯಲ್ಲಿ "ತನ್ನತನ" ಮೂಡಿಸಲಿದ್ದಾಳೆ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳಿಗೆ ಧ್ವನಿಯಾಗಲಿದ್ದಾಳೆ.

ಆತ್ಮೀಯತೆಯ ನೆಲೆಯಲ್ಲಿ ಮಹಿಳೆಯರೊಂದಿಗೆ ಅರ್ಥಪೂರ್ಣ ಸಂವಾದಕ್ಕೆ ಚಾಲನೆಯಾಗಲಿದ್ದಾಳೆ.

ನಮ್ಮ ನಿಮ್ಮೆಲ್ಲರ ಹೋರಾಟದ ಸಂಕೇತವಾದ "ಮಾನವಿ" ಎಲ್ಲರ ಬದುಕಲ್ಲಿ ಹೊಸ ಹಾಡ ಹಾಡಲು; ನೊಂದ ಬದುಕುಗಳಲ್ಲಿ ಚೈತನ್ಯದ ಚಿಲುಮೆ ಉಕ್ಕಿಸಲು; ಹೊಸ ಸಂಸ್ಕೃತಿಯ ದಾಖಲೆಯಾಗಲು ನಿಮ್ಮೆಲ್ಲರ ಸಹಕಾರ ಕೋರುತ್ತಾಳೆ.

ಸಂಪಾದಕೀಯ ಮಂಡಳಿ.

ದಾಸ್ಯದ ಬೇಡಿಗಳಲ್ಲಿ ಹೆಣ್ಣು

ಮಹಿಳಾ ಚಳವಳಿಯ ಚಾರಿತ್ರಿಕ ಬೆಳವಣಿಗೆಯಲ್ಲಿ ಜಾನ್ ಸ್ಟುವರ್ಟ್ ಮಿಲ್‌ನ ಈ ಲೇಖನದ್ದು ಪ್ರಮುಖ ಪಾತ್ರ. ಪುರುಷರ ಗುಲಾಮರಾಗುವಂತಹ ಪಾತ್ರಗಳಿಗೆ ಮಹಿಳೆ ಒಪ್ಪಿಕೊಳ್ಳುವುದಕ್ಕೆ ಪ್ರಚಲಿತವಿರುವ ಸೂಕ್ಷ್ಮ ಸಾಮಾಜಿಕ ಸ್ಥಿತಿಗತಿಗಳೆ ಕಾರಣ ಎಂದು ಮಿಲ್ ಈ ಲೇಖನದಲ್ಲಿ ವಿಶ್ಲೇಷಿಸುತ್ತಾನೆ.



ಜಾನ್ ಸ್ಟುವರ್ಟ್ ಮಿಲ್

ಮೂಲ : ಜಾನ್ ಸ್ಟುವರ್ಟ್ ಮಿಲ್
ಸಂಗ್ರಹಾನುವಾದ : ಸಿ. ಜಿ. ಮಂಜುಳಾ

ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಮೊದಲಿನಿಂದಲೂ ರೂಪಿಸಿಕೊಂಡು ಬಂದ ನನ್ನ ಅಭಿಪ್ರಾಯಗಳನ್ನು ಆದಷ್ಟು ಸ್ಪಷ್ಟವಾಗಿ ವಿವರಿಸುವುದು ಈ ಪ್ರಬಂಧದ ಉದ್ದೇಶ. ಈ ಅಭಿಪ್ರಾಯಗಳು ದುರ್ಬಲಗೊಳ್ಳದೆ ಅಥವಾ ಬದಲಾಗದೆ ಬದುಕಿನ ಚಿಂತನೆ. ಅನುಭವಗಳಿಂದ ಸತತವಾಗಿ ಹೆಚ್ಚು ತೀವ್ರವಾಗುತ್ತಲೇ ಬಂದಿದೆ.

ಗಂಡು ಹೆಣ್ಣಿನ ಮಧ್ಯೆ ಪ್ರಸ್ತುತ ಸಾಮಾಜಿಕ ಸಂಬಂಧಗಳನ್ನು ನಿಯಂತ್ರಿಸುತ್ತಿರುವ ತತ್ವ – ಕಾನೂನುಬದ್ಧವಾಗಿ ಒಂದು ಲಿಂಗದ ಅಧೀನಕ್ಕೊಳಪಡುವಂತಹುದು ತೀರಾ ತಪ್ಪಾದ ವಿಚಾರ, ಮತ್ತೀಗ ಮಾನವ ಸುಧಾರಣೆಗೆ ಮುಖ್ಯ ಅಡ್ಡಿ; ಇದರ ಸ್ಥಾನದಲ್ಲಿ ಯಾರಿಗೂ ಯಾವುದೇ ಅಧಿಕಾರ ಅಥವಾ ಸವಲತ್ತು ನೀಡದೆ ಅಥವಾ ಮತ್ತೊಬ್ಬರ ಮೇಲೆ ಯಾವುದೇ ದುರ್ಬಲತೆ ಆರೋಪಿಸದಂತಹ ಪೂರ್ಣ ಸಮಾನತೆಯ ತತ್ವವನ್ನು ತರಬೇಕಿರುವುದು ಅತ್ಯಗತ್ಯ.

ಹಿಂದೆ, ಬಹು ಸಂಖ್ಯೆಯ ಪುರುಷರು ಗುಲಾಮರಾಗಿದ್ದರು. ಮಹಿಳೆಯರೂ ಸಹ ಅನೇಕ ಯುಗಗಳುರುಳಿದವು, ಕೆಲವು ಉನ್ನತ ಕೃಷಿಯ ಯುಗಗಳಾಗಿದ್ದವು. ಆದರೆ ಯಾವುದೇ ಬಗೆಯ ಗುಲಾಮತನದ ನ್ಯಾಯಬದ್ಧತೆ, ಇದು ಪೂರ್ಣ ಸಾಮಾಜಿಕ ಅಗತ್ಯವೇ ಎಂಬುದನ್ನು ಪ್ರಶ್ನಿಸುವಂತಹ ಧೈರ್ಯ ತೋರುವ ಯಾವ ಚಿಂತಕನೂ ಬರಲಿಲ್ಲ; ಹಂತ ಹಂತವಾಗಿ ಅಂತಹ ಚಿಂತಕರು ಬಂದರು; ಮತ್ತು (ಸಮಾಜದ ಸಾಮಾನ್ಯ ಪ್ರಗತಿಯೂ ಇದಕ್ಕೆ ಸಹಾಯಕವಾಗಿತ್ತು). ಪುರುಷರ ಗುಲಾಮತನ ಕನಿಷ್ಠ ಯೂರೋಪಿನ ಎಲ್ಲಾ ರಾಷ್ಟ್ರಗಳಲ್ಲಿಯೂ (ಒಂದು ರಾಷ್ಟ್ರದಲ್ಲಿ ಮಾತ್ರ ತೀರಾ ಇತ್ತೀಚೆಗೆ ಕೆಲವು ವರ್ಷಗಳ ಹಿಂದೆ) ನಿಧಾನವಾಗಿ ರದ್ದಾಯಿತು, ಮತ್ತು ಮಹಿಳೆಯ ಗುಲಾಮತನದ

ಅವಲಂಬನೆಯು ನಯವಾದ ಬಗೆಯ ಅವಲಂಬನೆಯಾಗಿ ನಿಧಾನವಾಗಿ ಬದಲಾಯಿತು. ಆದರೆ ಈ ಅವಲಂಬನೆ ಈಗ ಅಸ್ತಿತ್ವದಲ್ಲಿರುವಂತೆ ನ್ಯಾಯ ಹಾಗೂ ಸಾಮಾಜಿಕ ಸಂದರ್ಭಗಳಿಗನುಗುಣವಾಗಿ ಹೊಸದಾಗಿ ಆರಂಭವಾದ ಸ್ವೋಪಜ್ಞ ವ್ಯವಸ್ಥೆಯಲ್ಲ – ಇದು ಪ್ರಾಚೀನ ಗುಲಾಮಿ ಸ್ಥಿತಿಯನ್ನು ಉಳಿಸಿಕೊಂಡಿದೆ. ಆದರೆ ಎಲ್ಲಾ ಮಾನವೀಯ ಸಂಬಂಧಗಳನ್ನು ನ್ಯಾಯ ಮತ್ತು ಮಾನವೀಯತೆಯ ಪ್ರಭಾವದ ನಿಯಂತ್ರಣಕ್ಕೆ ತಂದಂತೆ, ಸಾಮಾನ್ಯ ನಡವಳಿಕೆಗಳನ್ನು ಮೃದುಗೊಳಿಸಿದ ಕಾರಣಗಳೇ ಹಂತ ಹಂತವಾಗಿ ಇದರಲ್ಲಿನ ಉಗ್ರತೆ ಮಿತವಾಗಿಸಿ ಮಾರ್ಪಾಡುಗೊಳಿಸಿದೆ. ತನ್ನ ಪಾಶವೀ ಮೂಲದ ಕಳಂಕವನ್ನಿನ್ನೂ ಇದು ಕಳೆದುಕೊಂಡಿಲ್ಲ.....

ಮಹಿಳೆಯರ ಮೇಲಿನ ಪುರುಷರ ಆಡಳಿತ ಬೇರೆಲ್ಲಾ ಬಗೆಗಳ ಆಡಳಿತಗಳಿಗಿಂತ ಭಿನ್ನ. ಇದು ಬಲಾತ್ಕಾರದ ಆಡಳಿತವಲ್ಲ ಎಂದು ಹೇಳಲಾಗುತ್ತದೆ; ಇದನ್ನು ಮಹಿಳೆಯರು ತಾವಾಗಿಯೇ ಒಪ್ಪಿಕೊಳ್ಳುತ್ತಾರೆ; ಈ ಬಗ್ಗೆ ಚಕಾರವೆತ್ತುವುದಿಲ್ಲ, ಇದಕ್ಕೆ ಮಹಿಳೆಯರ ಅಂಗೀಕಾರವೇ ಇರುತ್ತದೆ. ಆದರೆ ತಮ್ಮ ಬರಹದ ಮೂಲಕ (ಸಮಾಜದಿಂದ ಅಂಗೀಕಾರ ದೊರೆಯುವ ಏಕಮಾತ್ರ ಪ್ರಚಾರ) ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಾದಾಗಿನಿಂದಲೂ, ಬಹಳಷ್ಟು ಮಹಿಳೆಯರು ಸದ್ಯದ ಸಾಮಾಜಿಕ ಸ್ಥಿತಿಗತಿಯ ಬಗ್ಗೆ ಪ್ರತಿಭಟನೆಯನ್ನು ದಾಖಲಿಸಿದ್ದಾರೆ; ಮತ್ತು ಇತ್ತೀಚೆಗೆ ಸಾರ್ವಜನಿಕರಿಗೆ ಗೊತ್ತಿರುವಂತಹ ದಕ್ಷ ಮಹಿಳೆಯರ ನೇತೃತ್ವದಲ್ಲಿ ಸಾವಿರಾರು ಮಹಿಳೆಯರು ಪಾರ್ಲಿಮೆಂಟಿಗೆ ಮತ ಚಲಾಯಿಸುವ ಹಕ್ಕಿಗೆ ಅನುಮತಿ ನೀಡಬೇಕೆಂದು ಪಾರ್ಲಿಮೆಂಟಿಗೆ ಆಗ್ರಹಪಡಿಸಿದ್ದಾರೆ. ಒಟ್ಟಾಗಿ ಮಹಿಳೆಯರು ಶಿಕ್ಷಣ ಹೊಂದಬೇಕು. ಪುರುಷರಂತೆಯೇ ಜ್ಞಾನದ ಎಲ್ಲಾ ಶಾಖೆಗಳಲ್ಲೂ ಶಿಕ್ಷಣ ಹೊಂದಬೇಕೆಂಬ ಮಹಿಳೆಯರ ವಾದವನ್ನು ಹೆಚ್ಚಿನ ತೀವ್ರತೆಯಿಂದ ಒತ್ತಾಯಿಸಲಾಗುತ್ತಿದೆ. ಹೆಚ್ಚಿನ ಯಶಸ್ಸಿನ ಭವಿಷ್ಯವೂ ಕಾಣುತ್ತಿದೆ; ಈವರೆಗೆ ಮಹಿಳೆಯರಿಗೆ ಮುಚ್ಚಲಾಗಿದ್ದ ವೃತ್ತಿ, ಕೆಲಸಗಳಿಗೆ ಅವರ ಪ್ರವೇಶದ ಬೇಡಿಕೆ ಪ್ರತಿವರ್ಷವೂ ಹೆಚ್ಚು ತುರ್ತಿನದಾಗುತ್ತಿದೆ. ಅಮೆರಿಕದಲ್ಲಿರುವಂತೆ ಮಹಿಳೆಯರ ಹಕ್ಕಿಗಾಗಿ ಹೋರಾಡಲು ಆಗಾಗ್ಗೆ ಸಮಾವೇಶಗಳು ಮತ್ತು ಸಂಘಟಿತ ಪಕ್ಷಗಳು ಈ ರಾಷ್ಟ್ರದಲ್ಲಿ ಇಲ್ಲದಿದ್ದರೂ ರಾಜಕೀಯ ಮತದಾನದ ಹಕ್ಕನ್ನು ಪಡೆಯುವಂತಹ ಮಿತಿಯುಳ್ಳ ಉದ್ದೇಶಕ್ಕಾಗಿ ಮಹಿಳೆಯರಿಂದಲೇ ಸಂಘಟಿತವಾಗಿ ಆಡಳಿತಕ್ಕೊಳಪಟ್ಟಿರುವ ಅಸಂಖ್ಯ, ಕ್ರಿಯಾಶೀಲ ಸಮಾಜಗಳಿವೆ. ತಾವನುಭವಿಸುತ್ತಿರುವ ಅನ್ಯಾಯಗಳ ವಿರುದ್ಧ ಹೆಚ್ಚು ಕಡಿಮೆ ಸಾಮುದಾಯಿಕವಾಗಿ ಅಮೆರಿಕ ಮತ್ತು ನಮ್ಮ ರಾಷ್ಟ್ರಗಳಲ್ಲಿಯಷ್ಟೇ ಮಹಿಳೆಯರು ಪ್ರತಿಭಟಿಸಲು ಆರಂಭಿಸಿಲ್ಲ. ಇದೇ ಉದಾಹರಣೆಗಳು ಫ್ರಾನ್ಸ್, ಇಟಲಿ, ಸ್ವಿಟ್ಜರ್‌ಲ್ಯಾಂಡ್ ಮತ್ತು ರಷ್ಯಾಗಳಲ್ಲೂ ಕಂಡುಬಂದಿದೆ ಇಂತಹದೇ ಆಶೋತ್ತರಗಳನ್ನು ಮೌನವಾಗಿ ಹೊಂದಿರುವ

"ಸ್ತ್ರೀವಾದಿ ಮಿಲ್"

ಸಂತಾನಶಕ್ತಿ ನಿಯಂತ್ರಣದ ಮಾಹಿತಿಗಳನ್ನು ವಿತರಿಸುತ್ತಿದ್ದನೆಂಬ ಕಾರಣದಿಂದ ಜಾನ್ ಸ್ಟುವರ್ಟ್ ಮಿಲ್ (1806-1873), ತನ್ನ 17ನೆ ವಯಸ್ಸಿನಲ್ಲಿಯೇ ಲಂಡನ್ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ. 1865ರಲ್ಲಿ ಪಾರ್ಲಿಮೆಂಟಿಗೆ ಈತ ಆಯ್ಕೆಯಾದಾಗ, ಆಗಷ್ಟೇ ಸಂಘಟಿಸಲಾಗಿದ್ದ ಬ್ರಿಟಿಷ್ ಮಹಿಳೆಯರ ಮತ ಚಲಾವಣೆ ಹಕ್ಕಿನ ಚಳವಳಿಯ ರಾಜಕೀಯ ಧ್ವನಿಯಾದರು. 1867ರ ಸುಧಾರಣಾ ಮಸೂದೆಗೆ ಈತ ತಂದ ತಿದ್ದುಪಡಿ, ಮಹಿಳೆಯರ ಮತ ಚಲಾವಣೆ ಹಕ್ಕಿನ ಬಗ್ಗೆ ಪ್ರಥಮ ಬಾರಿಗೆ ಪಾರ್ಲಿಮೆಂಟನಲ್ಲಿ ಚರ್ಚೆಗೆ ಪ್ರಚೋದನೆ ನೀಡಿತು. ಅಲ್ಲದೆ ಪಾರ್ಲಿಮೆಂಟನಲ್ಲಿ ಆತ ಮಾಡಿದ ಪ್ರಸಿದ್ಧ ಭಾಷಣದಲ್ಲಿ, ಮತ ಚಲಾವಣೆ ಹಕ್ಕಿಗೂ ಆಚೆ ಮಹಿಳೆಯ ಪೂರ್ಣ ಸಾಮಾಜಿಕ ಸ್ವಾತಂತ್ರ್ಯದಂತಹ ಹೆಚ್ಚಿನ ಆಯಾಮದ ವಿಚಾರದ ಪರವಾಗಿ ವಾದಿಸಿದ್ದಾರೆ.

1861ರಲ್ಲೇ ಈ ಪ್ರಬಂಧ ಬರೆದಿದ್ದ. ಆದರೆ 1869ರ ವರೆಗೂ ಇದು ಪ್ರಕಟವಾಗಲೇ ಇಲ್ಲ. ಈ ತತ್ವಜ್ಞಾನಿಯ 20 ವರ್ಷಗಳ ಆತ್ಮೀಯ ಗೆಳತಿ, ನಂತರ ಪತ್ನಿಯಾದ ಹ್ಯಾರಿಯೆಟ್ ಟೇಲರ್‌ಳ ಪ್ರಭಾವ ಈ ಕೃತಿಯ ಮೇಲೆ ಅಚ್ಚೊತ್ತಿದೆ ಎಂದು ಹೇಳಲಾಗುತ್ತದೆ. ಈ ಲೇಖನದ ತೀರಾ ಪ್ರಮುಖ ಮತ್ತು ಆಳವಾದ ವಿಚಾರಗಳನ್ನು ಮಂಡಿಸುವ ಭಾಗಗಳಿಗೆಲ್ಲಾ ಆಕೆಯೊಡನೆ ನಡೆಸಿದ ಚರ್ಚೆಯೇ ಆಧಾರವೆಂದು ಮಿಲ್ ಹೇಳಿಕೊಂಡಿದ್ದಾನೆ. 1851ರಲ್ಲಿ ಮಿಲ್ ಹ್ಯಾರಿಯಟ್ ಟೇಲರ್‌ಳನ್ನು ವಿವಾಹವಾದಾಗ ಅಸ್ತಿತ್ವದಲ್ಲಿರುವ ವಿವಾಹದ ನಿಯಮಗಳ ವಿರುದ್ಧ ಪ್ರತಿಭಟನೆ ಸೂಚಿಸಿದ್ದ. ಇಂತಹ ನಿಯಮಗಳು ಪತ್ನಿಯ ಕಡೆಯವರ ಮೇಲೆ ಪತಿಗೆ ಹೆಚ್ಚಿನ ಅಧಿಕಾರ ನೀಡುತ್ತದೆ ಎಂಬುದು ಆತನ ಅಭಿಪ್ರಾಯವಾಗಿತ್ತು.

ಎಷ್ಟು ಮಹಿಳೆಯರಿರಬಹುದು, ಯಾರಿಗೂ ಗೊತ್ತಿರುವುದು ಸಾಧ್ಯವಿಲ್ಲ; ಇಂತಹ ಆಶೋತ್ತರಗಳನ್ನು ಹೊಂದಿರುವ ಬಗ್ಗೆ ಅಸಂಖ್ಯ ಗುರುತುಗಳಿವೆ, ಆದರೆ ಅದು ಹೆಣ್ಣಿಗೆ ಶೋಭಿಸುವುದಿಲ್ಲವೆಂದು ಹೊಸಕಿ ಹಾಕಿಕೊಳ್ಳುವುದನ್ನು ಕಷ್ಟಪಟ್ಟು ಕಲಿಸಲಾಗುವುದಿಲ್ಲವೆ....

ಸಾಮಾಜಿಕ, ಸ್ವಾಭಾವಿಕ ಈ ಎಲ್ಲಾ ಕಾರಣಗಳೂ ಪುರುಷರ ಅಧಿಕಾರದ ವಿರುದ್ಧ ಮಹಿಳೆಯರು ಸಾಮುದಾಯಿಕವಾಗಿ ಕ್ರಾಂತಿಯೇಳುವುದನ್ನು ಅಸಾಧ್ಯವಾಗಿಸುತ್ತದೆ. ಇತರ ಎಲ್ಲಾ ಅಧೀನಕ್ಕೊಳಪಟ್ಟ ವರ್ಗಗಳಿಗಿಂತ ತೀರಾ ಭಿನ್ನವಾದ ಸ್ಥಾನ ಇವರದು. ಇವರ ಒಡೆಯರಿಗೆ ಬರೀ ಸೇವೆಗಿಂತಲೂ ಹೆಚ್ಚಿನದಾದದ್ದು ಬೇಕಾಗಿದೆ. ಮಹಿಳೆಯರ ವಿಧೇಯತೆಯನ್ನಷ್ಟೇ ಪುರುಷರು ಬಯಸುವುದಿಲ್ಲ. ಅವರಿಗೆ ಅದರ ಅಂತಃಕರಣ, ಭಾವನೆಗಳೂ ಬೇಕು. ತೀರಾ ಮೃಗೀಯವಾದ ಕೆಲವರನ್ನು ಬಿಟ್ಟರೆ ಎಲ್ಲಾ ಪುರುಷರು ತಮ್ಮೊಡನೆ ಹೆಚ್ಚು ನಿಕಟ ಸಂಪರ್ಕವುಳ್ಳ ಮಹಿಳೆಯಲ್ಲಿ ಬಲವಂತದಿಂದಾದ ದಾಸಿಯನ್ನು ಇಷ್ಟಪಡುವುದಿಲ್ಲ, ತಾನೇ ಬಯಸಿ ದಾಸಿಯಾಗುವುದನ್ನು ಬಯಸುತ್ತಾರೆ. ಬರೀ ದಾಸಿ ಮಾತ್ರವಲ್ಲ, ಅಚ್ಚುಮೆಚ್ಚಿನವಳೂ ಆಗಬೇಕು. ಹೀಗಾಗಿ ಮಹಿಳೆಯ ಮನಸ್ಸನ್ನು ದಾಸ್ಯಕ್ಕೊಳಪಡಿಸುವಂತಹ ಎಲ್ಲವನ್ನೂ ಆಚರಣೆಗೆ ತಂದಿದ್ದಾರೆ. ಇತರ ಎಲ್ಲಾ ಬಗೆಯ ಗುಲಾಮರ ಒಡೆಯರು, ವಿಧೇಯತೆ ಕಾಪಾಡಿಕೊಳ್ಳಲು ಭೀತಿ ಸೃಷ್ಟಿಸುವುದನ್ನು ಅವಲಂಬಿಸುತ್ತಾರೆ ; ಇದು ಅವರದೇ ಹೆದರಿಕೆಯಾಗಬಹುದು ಅಥವಾ ಧಾರ್ಮಿಕ ಭೀತಿಯಾಗಬಹುದು. ಬರೀ ಸರಳ ವಿಧೇಯತೆಗಿಂತ ಹೆಚ್ಚಿನದು ಮಹಿಳೆಯರ ಒಡೆಯರಿಗೆ ಬೇಕಾಗಿತ್ತು. ಈ ಉದ್ದೇಶ ಸಾಧನೆಗೆ ಇಡೀ ಶಿಕ್ಷಣದ ಒತ್ತನ್ನೇ ಇದಕ್ಕೆ ತಕ್ಕಂತೆ ತಿರುಗಿಸಿದರು. ಬಾಲ್ಯದಿಂದಲೇ ಎಲ್ಲಾ ಮಹಿಳೆಯರಿಗೆ, ಪುರುಷರಿಗಿಂತ ತೀರಾ ಭಿನ್ನವಾದ ಸ್ವಭಾವದ ಆದರ್ಶ ಪರಿಕಲ್ಪನೆಯನ್ನು ತುಂಬಲಾಗುತ್ತದೆ ; ಸ್ವಂತಿಕೆಯನ್ನಲ್ಲ ಸ್ವನಿಯಂತ್ರಣವನ್ನಲ್ಲ, ಆದರೆ ಶರಣಾಗತಿ, ಇತರರ ನಿಯಂತ್ರಣಕ್ಕೆ ತನ್ನನ್ನೇ ತಲೆಬಾಗಿಸಿಕೊಳ್ಳುವುದು.

ಬೇರೆಯವರಿಗಾಗಿ ಬದುಕುವುದು ಹೆಣ್ಣಿನ ಕರ್ತವ್ಯವೆಂದು ಎಲ್ಲಾ ನೀತಿಗಳೂ ಹೇಳುತ್ತವೆ, ಚಾಲ್ತಿಯಲ್ಲಿರುವ ಭಾವನೆಗಳೆಲ್ಲಾ ಇದು ಅವರ ಸ್ವಭಾವವೆಂದು ಸಾರುತ್ತದೆ; ತನ್ನನ್ನೇ ತಾನು ಪೂರ್ಣ ಸಮರ್ಪಿಸಿಕೊಳ್ಳುವುದು, ಅವರ ಪ್ರೀತಿಯಿಲ್ಲದೆ ಬೇರೆ ಬದುಕೇ ಇಲ್ಲದಂತಾಗುವಂತಹದ್ದು. ಪ್ರೀತಿಯೆಂದರೆ, ಯಾರ ಜತೆ ಹೊಂದಲು ಸಮಾಜ ಅವಕಾಶ ನೀಡಿರುವವರ ಜತೆ ಮಾತ್ರ ಅವರಿಗೆ ಸಂಪರ್ಕವಿರುವ ಪುರುಷರೊಡನೆ, ಅಥವ ಹೆಣ್ಣು ಮತ್ತು ಗಂಡಿನ ಮಧ್ಯೆ ಹೆಚ್ಚಿನ, ಬಿಡದಂತಹ ಸಂಪರ್ಕ ಸಾಧಿಸುವ ಮಕ್ಕಳೊಡನೆ ಮಾತ್ರ ಇದು ಸಾಧ್ಯ. ಮೂರು ವಿಷಯಗಳನ್ನು ಒಟ್ಟುಗೂಡಿಸಿದಾಗ – ಮೊದಲನೆಯದಾಗಿ, ಗಂಡು – ಹೆಣ್ಣಿನ ಮಧ್ಯೆ ಸಹಜ ಆಕರ್ಷಣೆ; ಎರಡನೆಯದಾಗಿ, ಪತಿಯ ಮೇಲೆ ಪತ್ನಿಯ ಪೂರ್ಣ ಅವಲಂಬನೆ, ಆತನ ಕೊಡುಗೆಯಾಗಿ ಅಥವಾ ಆತನ ಇಚ್ಛೆಯನ್ನು ಪೂರ್ಣ ಅವಲಂಬಿಸಿ, ಆಕೆ ಹೊಂದುವ ಎಲ್ಲಾ ಪ್ರತಿಷ್ಠೆ ಅಥವಾ ಸಂತೋಷ; ಕಡೆಯದಾಗಿ, ಮಾನವ ಶೋಧನೆಯ ಮುಖ್ಯ ಗುರಿ, ಆಲೋಚನೆ, ಮತ್ತು ಸಾಮಾಜಿಕ ಮಹತ್ವಾಕಾಂಕ್ಷೆಯ ಎಲ್ಲಾ ತತ್ವಗಳನ್ನೂ ಆಕೆ ಆತನ ಮೂಲಕವೇ ಶೋಧಿಸಬೇಕಾಗುತ್ತದೆ ಅಥವಾ ಪಡೆಯಬೇಕಾಗುತ್ತದೆ. ಹೆಣ್ತನದ ಶಿಕ್ಷಣ ಮತ್ತು ಸ್ವಭಾವ ರೂಪಿಸುವಲ್ಲಿ ಪುರುಷರಿಗೆ ಆಕರ್ಷಣೀಯವಾಗಿರಬೇಕೆಂಬ ವಿಚಾರ ಧ್ರುವತಾರೆಯಾಗಿರದಿದ್ದರೆ ಅದೊಂದು ಪವಾಡವಾಗುತ್ತಿತ್ತು. ಮಹಿಳೆಯರ ಮನಸ್ಸಿನ ಮೇಲೆ ಇಂತಹ ಹೆಚ್ಚಿನ ಪ್ರಭಾವ ಸಾಧಿಸಿದ ನಂತರ,

ಸಾಮಾಜಿಕ, ಸ್ವಾಭಾವಿಕ ಈ ಎಲ್ಲಾ ಕಾರಣಗಳೂ ಪುರುಷರ ಅಧಿಕಾರದ ವಿರುದ್ಧ ಮಹಿಳೆಯರು ಸಾಮುದಾಯಿಕವಾಗಿ ಕ್ರಾಂತಿಯೇಳುವುದನ್ನು ಅಸಾಧ್ಯವಾಗಿಸುತ್ತದೆ. ಇತರ ಎಲ್ಲಾ ಅಧೀನಕ್ಕೊಳಪಟ್ಟ ವರ್ಗಗಳಿಗಿಂತ ತೀರಾ ಭಿನ್ನವಾದ ಸ್ಥಾನ ಇವರದು. ಇವರ ಒಡೆಯರಿಗೆ ಬರೀ ಸೇವೆಗಿಂತಲೂ ಹೆಚ್ಚಿನದಾದದ್ದು ಬೇಕಾಗಿದೆ. ಮಹಿಳೆಯರ ವಿಧೇಯತೆಯನ್ನಷ್ಟೇ ಪುರುಷರು ಬಯಸುವುದಿಲ್ಲ. ಅವರಿಗೆ ಅವರ ಅಂತಃಕರಣ, ಭಾವನೆಗಳೂ ಬೇಕು.

ಮಹಿಳೆಯರನ್ನು ಶರಣಾಗತ ಭಾವದಲ್ಲೇ ಇಟ್ಟು ಹೆಚ್ಚಿನ ಪ್ರಯೋಜನ ಪಡೆಯಲು ಪುರುಷರ ಸ್ವಾರ್ಥ ಪ್ರವೃತ್ತಿ ಕಾರಣವಾಯಿತು ಇದಕ್ಕಾಗಿ ಲೈಂಗಿಕ ಆಕರ್ಷಣೆಯ ಮುಖ್ಯ ಅಂಗವಾಗಿ ಮೃದುತನ, ವಿಧೇಯತೆ ಮತ್ತು ಪುರುಷನೊಳಗೆ ಎಲ್ಲಾ ಸ್ವಂತಿಕೆಗಳನ್ನು ಅಧೀನಕ್ಕೊಳ ಪಡಿಸಬೇಕಾದುದು ಅಗತ್ಯವೆಂದು ಪ್ರತಿನಿಧಿಸಲಾಯಿತು. ಆಧುನಿಕ ಕಾನೂನಿನಲ್ಲಿ ತಮ್ಮ ಹುಟ್ಟಿನ ದೆಸೆಯಿಂದಾಗಿಯೇ ಮಹಿಳೆಯರು ಸಮಾಜದಲ್ಲಿ ಅನಾನುಕೂಲತೆಗಳನ್ನೆದುರಿಸ ಬೇಕಿರುವುದು ಇದೊಂದೇ ಉದಾಹರಣೆ- ಮಾನವ ಜನಾಂಗದ ಅರ್ಧದಷ್ಟಿರುವ ಮಹಿಳೆಯರನ್ನು ಬಿಟ್ಟರೆ ಮತ್ತೆಲ್ಲೂ ಇಲ್ಲ, ಹುಟ್ಟಿನ ದೆಸೆಯಿಂದಾಗಿಯೇ ಉನ್ನತ ಸಾಮಾಜಿಕ ಕಾರ್ಯಗಳು ಅವರ ಪಾಲಿಗೆ ಮುಚ್ಚಿಹೋಗಿದ್ದು ಯಾವುದೇ ಪ್ರಯತ್ನ ಅಥವಾ ಪರಿಸ್ಥಿತಿ ಬದಲಾವಣೆ ಯಿಂದಲೂ ಇದನ್ನು ಮೀರಲು ಸಾಧ್ಯವಿಲ್ಲದಂತಹದ್ದು....

ಗಂಡು–ಹೆಣ್ಣಿನ ಸ್ವಭಾವವೇ ಸದ್ಯದ ಅವರಿಬ್ಬರ ಕಾರ್ಯ ವೈಖರಿ ಮತ್ತು ಸ್ಥಾನಮಾನ ನಿರ್ಧರಿಸಿದೆ. ಇದು ಅವರಿಗೆ ಸೂಕ್ತವೂ ಆಗಿದೆ ಎಂದು ಹೇಳುವುದರಿಂದಲೂ ಏನೂ ಪ್ರಯೋಜನವಿಲ್ಲ. ಸಾಮಾನ್ಯ ಜ್ಞಾನ ಮತ್ತು ಮನುಷ್ಯ ಮನಸ್ಸು ರೂಪು ತಳೆದಿರುವ ನೆಲೆಯಲ್ಲಿ ನಿಂತು ನೋಡಿದರೆ, ಈಗಿರುವಂತೆ ಗಂಡು–ಹೆಣ್ಣಿನ ಸಂಬಂಧದ ಹಿನ್ನೆಲೆಯಲ್ಲಿ ಮಾತ್ರ ನೋಡಿ ಯಾರಾದರೂ ಗಂಡು ಹೆಣ್ಣಿನ ಸಂಬಂಧ ಗೊತ್ತಿದೆ ಅಥವಾ ಗೊತ್ತಾಗುತ್ತದೆ ಎಂದರೆ ಅದನ್ನು ನಾನು ಅಲ್ಲಗಳೆಯುತ್ತೇನೆ.

ಸಮಾಜದಲ್ಲಿ ಮಹಿಳೆಯರಿಲ್ಲದೆ ಪುರುಷರು ಎಂದಾದರು ಇದ್ದಿದ್ದರೆ, ಅಥವಾ ಪುರುಷರಿಲ್ಲದೆ ಮಹಿಳೆಯರು ಇದ್ದಿದ್ದರೆ ಅಥವಾ ಪುರುಷರ ನಿಯಂತ್ರಣದಲ್ಲಿ ಮಹಿಳೆಯರು ಇರದಂತಹ ಮಹಿಳೆಯರು ಪುರುಷ ಸಮಾಜವಿದ್ದಿದ್ದರೆ, ಇಬ್ಬರ ಸ್ವಭಾವದಲ್ಲೂ ಅಂತರ್ಗತವಾಗಿ ಇರುವ ಮಾನಸಿಕ ಮತ್ತು ನೈತಿಕ ಭಿನ್ನತೆಗಳ ಬಗ್ಗೆ ಸ್ವಲ್ಪವಾದರೂ ತಿಳಿಯುತ್ತಿತ್ತು. ಈಗ ಮಹಿಳೆಯರ ಸ್ವಭಾವವೆಂದೇನು ಕರೆಯುತ್ತೇವೊ ಅದು ಪೂರ್ಣ ಕೃತಕವಾದದ್ದು – ಕೆಲ ದಿಕ್ಕುಗಳಲ್ಲಾದ ಬಲವಂತದ ದಮನ, ಇನ್ನು ಕೆಲವೆಡೆ ಅಸ್ವಾಭಾವಿಕ ಉದ್ದೀಪನದ ಪರಿಣಾಮ. ತನ್ನೊಡೆಯರ ಸಂಪರ್ಕದಿಂದ ತನ್ನ ಸ್ವಾಭಾವಿಕ ಪ್ರಮಾಣವನ್ನು ಮೀರಿ ಯಾವ ಅವಲಂಬಿತ ವರ್ಗದ ಸ್ವಭಾವವೂ ಇಷ್ಟೊಂದು ಇಡಿಯಾಗಿ ವಿರೂಪಗೊಂಡಿಲ್ಲನೆಂದು ಪ್ರತಿಪಾದಿಸಬಹುದು

ತಾವು ಹೇಳಬೇಕಾದುದೇನು ಎಂಬುದನ್ನು ಮಹಿಳೆಯರು ಹೇಳುವವರೆಗೆ, ಮಹಿಳೆಯರ ಬಗ್ಗೆ ಪುರುಷರು ಪಡೆದುಕೊಂಡಿರುವ ಜ್ಞಾನ ಅಸಂಪೂರ್ಣ ಮತ್ತು ಮೇಲು ಮೇಲಿನದು ಎಂದು ಸುರಕ್ಷಿತವಾಗಿ ಪ್ರತಿಪಾದಿಸಬಹುದು.

ಗಂಡು–ಹೆಣ್ಣಿನ ಮಧ್ಯದ ಸಹಜ ಭಿನ್ನತೆಗಳೇನು ಎಂಬ ಬಹು ಮುಖ್ಯ ಪ್ರಶ್ನೆಗೆ ಸದ್ಯದ ಸಾಮಾಜಿಕ ಸ್ಥಿತಿಯಲ್ಲಿ ಪೂರ್ಣ ಸರಿಯಾದ ಜ್ಞಾನ ಹೊಂದುವುದು ಅಸಾಧ್ಯ.

ತಾವು ಹೇಳಬೇಕಾದುದೇನು ಎಂಬುದನ್ನು ಮಹಿಳೆಯರು ಹೇಳುವವರೆಗೆ, ಮಹಿಳೆಯರ ಬಗ್ಗೆ ಪುರುಷರು ಪಡೆದುಕೊಂಡಿರುವ ಜ್ಞಾನ ಅಸಂಪೂರ್ಣ ಮತ್ತು ಮೇಲು ಮೇಲಿನದು ಎಂದು ಸುರಕ್ಷಿತವಾಗಿ ಪ್ರತಿಪಾದಿಸಬಹುದು.

ಆದರೆ ಈ ಕಾಲ ಇನ್ನೂ ಬಂದಿಲ್ಲ; ಹಂತ ಹಂತವಾಗಿಯಲ್ಲದೆ ಆದಾಗಿ ಬರುವುದೂ ಇಲ್ಲ. ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ ಅರ್ಹತೆಗಳಿಂದಲೊ ಅಥವಾ ಸಮಾಜದಿಂದ ಅಂಗೀಕಾರ ದೊರೆತೊ ಸಾರ್ವಜನಿಕರಿಗೆ ಏನನ್ನಾದರೂ ಮಹಿಳೆಯರು ಹೇಳತೊಡಗಿರುವುದು ತೀರಾ ಇತ್ತೀಚಿನ ವಿದ್ಯಮಾನ. ತಮ್ಮ ಸಾಹಿತ್ಯಕ ಯಶಸ್ಸಿಗಾಗಿ ಅವಲಂಬಿಸಿಕೊಂಡಿರುವ ಪುರುಷರು ಕೇಳಲಿಚ್ಛಿಸದ್ದನ್ನು ಹೇಳಲು ಈಗಲೂ ಎಲ್ಲೊ ಕೆಲ ಮಹಿಳೆಯರು ಮಾತ್ರ ಧೈರ್ಯ ಹೊಂದಿದ್ದಾರೆ....

ತನ್ನ ಅತ್ಯುತ್ತಮ ರೂಪವಾದ ಕುಟುಂಬವನ್ನು ಸಹಾನುಭೂತಿ, ಮಾರ್ದವತೆಯ ಶಾಲೆ ಮತ್ತು ತನ್ನತನದ ಪ್ರೀತಿಯ ಮರೆವನ್ನುಂಟು ಮಾಡುವಂತಹದ್ದು ಎಂದು ಆಗಾಗ್ಗೆ ಹೇಳಲಾಗುವುದಾದರೂ, ಇದು ಈಗಲೂ ಕೆಲವೊಮ್ಮೆ ಕುಟುಂಬದ ಮುಖ್ಯಸ್ಥನಿಗೆ ಸಂಬಂಧಿಸಿ ಹೇಳುವುದಾದರೆ ಹಠಮಾರಿತನ, ಅಧಿಕಾರಬಲದ, ಮಿತಿಯಿಲ್ಲದ ಸ್ವಾರ್ಥತೆಯ ತೃಪ್ತಿ ಪಡಿಸುವಿಕೆಯ ಮತ್ತು ದ್ವಿಮುಖ ಬಣ್ಣದ ಹಾಗೂ ತ್ಯಾಗವೂ ಒಂದು ನಿರ್ದಿಷ್ಟ ರೂಪ ಮಾತ್ರವಾಗಿರುವ ಆದರ್ಶೀಕರಿಸಲ್ಪಟ್ಟ ಸ್ವಾರ್ಥದ ಶಾಲೆ; ಪುರುಷನದೇ ಹಿತಾಸಕ್ತಿ ಮತ್ತು ಆಸ್ತಿಯ ಭಾಗವಾಗಿಯಷ್ಟೇ ಪತ್ನಿ ಮತ್ತು ಮಕ್ಕಳ ಬಗೆಗಿನ ಕಾಳಜಿಯಾಗಿರುತ್ತದೆ, ಆತನ ಚಿಕ್ಕ ಚಿಕ್ಕ ಆಯ್ಕೆಗಳಿಗಾಗಿ ಪ್ರತಿ

ರೂಪದಲ್ಲೂ ಅವರ ವೈಯಕ್ತಿಕ ಸಂತೋಷಗಳನ್ನು ಬಲಿಗೊಡಲಾಗುತ್ತದೆ.

ಈಗ ಅಸ್ತಿತ್ವದಲ್ಲಿರುವ ಈ ವ್ಯವಸ್ಥೆಯ ರೂಪದಲ್ಲಿ ಹೆಚ್ಚಿನ ಒಳ್ಳೆಯದೇನನ್ನು ನಿರೀಕ್ಷಿಸಲಾಗುತ್ತದೆ ?— ತಾನು ಜೊತೆಗೇ ವಾಸಿಸುವ ಇನ್ನೊಬ್ಬ ಮಾನವ ಜೀವಿಯ ಮೇಲೆ ಸದ್ಯದ ಸಾಮಾಜಿಕ ವ್ಯವಸ್ಥೆಗಳು ಪುರುಷನಿಗೆ ನೀಡುವ ಮಿತಿಯಿಲ್ಲದ ಅಧಿಕಾರ–– ಈ ಅಧಿಕಾರ ಆತನ ಸ್ವಭಾವದ ಮೂಲೆ ಮೂಲೆಗಳಲ್ಲಿ ಅವ್ಯಕ್ತವಾಗಿರುವ ಸ್ವಾರ್ಥತೆಯ ಅಂಶಗಳನ್ನೂ ಕೆರಳಿಸುತ್ತದೆ— ಆದರ ಸಣ್ಣ ಕಿಡಿಗಳು, ಒಳಗೊಳಗೆ ಹೊಗೆಯಾಡುವ ಕೆಂಡಕ್ಕೆ, ಗಾಳಿ ಬೀಸುತ್ತದೆ— ಇತರ ಬೇರೆಲ್ಲಾ ಸಂಬಂಧಗಳಲ್ಲೂ ಮುಚ್ಚಿಟ್ಟುಕೊಳ್ಳುವುದು ಅಗತ್ಯವಾದಂತಹ ಮೂಲ ಗುಣಗಳ ತೃಪ್ತಿ ಪಡಿಸುವುದಕ್ಕೆ ಲೈಸೆನ್ಸ್ ನೀಡುತ್ತದೆ.


ಕುಟುಂಬವೆನ್ನುವುದು ನಿರಂಕುಶ ಪ್ರಭುತ್ವದ ದಬ್ಬಾಳಿಕೆಯ ಶಾಲೆ, ಇದರಲ್ಲಿ ನಿರಂಕುಶ ಪ್ರಭುತ್ವದ ಗುಣಗಳಲ್ಲದೆ ದೋಷಗಳನ್ನೂ ಪೋಷಿಸಲಾಗುತ್ತದೆ— ವಿವಾಹದಲ್ಲಿನ ದಾಸ್ಯದ ನಿಯಮ ಆಧುನಿಕ ಪ್ರಪಂಚದಲ್ಲಿನ ಎಲ್ಲಾ ತತ್ವಗಳಿಗೂ ವಿಲಕ್ಷಣ ವೈರುಧ್ಯವಾಗಿದೆ. ವಿವಾಹವೊಂದೇ ನಮ್ಮ ಕಾನೂನಿಗೆ ಗೊತ್ತಿರುವ ವಾಸ್ತವ ದಾಸ್ಯ. ಪ್ರತಿ ಮನೆಯ ಯಜಮಾನಿ ಬಿಟ್ಟರೆ, ಕಾನೂನುಬದ್ಧ ಗುಲಾಮರ್ಯಾರೂ ಈಗ ಉಳಿದಿಲ್ಲ.

ಅರಿವಿದೆಯೆ...?

ನನ್ನ ಜೀವನದ ಅಧ್ಯಾಯ
ನೀ ಮುಗಿಸಿದೆ
ಇದು ನಿನಗೆ ಗೊತ್ತೆ ?
ನೀ ಹೇಳಿದಂತೆ ನಾ ಕುಣಿದೆ

ನನಗರಿವಿಲ್ಲದೆ ನನ್ನ ವ್ಯಕ್ತಿತ್ವವನ್ನು
ನಿನಗರಿವಿದ್ದೂ ಕೊಂದೆಯಾ ?
ಕತೆ ಬರೆಯುವ ಮುನ್ನವೆ
ಮುನ್ನುಡಿ ಇಲ್ಲದ
ಕಾದಂಬರಿಯಾಗುವಂತೆ ನೀ
ನನ್ನ ಮಾಡಿದೆ.

ಇದು ನಿನಗರಿವಿದೆಯೇ
ಭವಿಷ್ಯದ ಮುನ್ನುಡಿಯಲ್ಲಿ



ಕರಿ ಮೋಡ ಮುಸುಕಿದಂತೆ
ನಿಟ್ಟುಸಿರು ಬಿಡುತ್ತಿರುವೆ.

ಉಷಾ

ಕೂಗಲಾರದ ಹೆಣ್ಣು

—ವೈದೇಹಿ

ಮತ್ತೆ ಸಿಕ್ಕಿದಳಿಂದು ತಲೆ ತುಂಬ ಹೂವು
ಪ್ಲಾಸ್ಟಿಕ್ಕಿನದು ಕಿವಿಗೆ ಅಂಗಡಿಯ ಝುಮುಕಿ
ಬೇಕೆಂದೇ ಮುಖವಲ್ಲಾಡಿ ಕುಲುಕಿ
ಉಂಗುರದ ಭ್ರಮೆ ಸುರಿದ ಗಂಟು ಬೆರಳುಗಳಲ್ಲಿ
ನೆಟಿಗೆಗಳ ಕುಟ್ಟಿ.

ಬಸ್ಸನೇರಿ ದೂರ ಪಯಣಿಸುವವಳಂತೆ
ಕುಳಿತೆ ಬಿಟ್ಟಳು ಹುಡುಗಿ, ನಿಶ್ಚಿಂತೆ !

ಭೂಗೋಲವೊಂದು ಜನ ಮಾತು ತೇಯುವ ಕಲ್ಲು
ಮಾತುಗಳಿಗಂತೂ ಬೇಕಿಲ್ಲ ಹಲ್ಲು
'ಕಡಿಮೆಯೇ ಈ ಹುಚ್ಚಿ ಸುಖಕೆ ?'
'ಹೊರಟೆಯಾ ರಾಧೆ ಅಭಿಸಾರಿಕೆಗೆ?'
'ನೋಡವಳ ನಾಜೂಕು ! ಮೊಗ ಮುಡಿಯ ಶೋಕು !'

ಪರಿಚಿತರಂತೆ ನೋಡಿ ನಗುವವರು
ಇಳಿದು ನಡೆವರು ಮರೆತು ಕಲ್ಪ ಕಳೆದಂತೆ

ಹುಚ್ಚಿ ಹುಡುಗಿ ಎಲ್ಲರೆದುರು ಮೈ ಮುಚ್ಚಿ
ಅಲ್ಲಾಡವೆ ಕುಳಿತು ಕಿಟಕಿಗೊತ್ತಿ
ಮುಟ್ಟಿಕೊಂಡಳು ಹೊಟ್ಟೆ
ಮುತ್ತಿಟ್ಟುಕೊಂಡಳು ತನ್ನ ಬೆಟ್ಟುಗಳನ್ನೆ !

ಹೊಟ್ಟೆಯುಬ್ಬಿನ ಚರ್ಮ ಮಿನುಗುತ್ತಿತ್ತು
ಬಸಿರ ಮೂಡಣ ದಿಕ್ಕು ಬೆರಗಿನಿಂದಿತ್ತು !
ಯಾವ ಚಿಗುರಿನ ಕುಡಿಯೊಡೆಯುವುದು ಹುಡುಗೀ ?
ಯಾವ ಬೀಜದ ಕರ್ಮ ಯಾವ ಮರದಡಿಯಲ್ಲಿ
ಯಾವ ರಾತ್ರಿಯಲಿ....ಶ್—ಶ್—
'ಹೊಟ್ಟೆಕಿಚ್ಚಿನ ಗಂಡ ಹೊಟ್ಟೆಗೆ ಕೈ ಹಾಕಿ ಕಂಡಾ'
ಆಕಳಿಸಿ ಬಾಗಿ ಶಬ್ದ ಶಿಲೆಗಳ ನುಂಗಿ
ನಗೆ ತಲ್ಪದಲಿ ಆಕೆ ಕೈ ದಿಂಬಿಗೊರಗಿದ ಭಂಗಿ !




ಹುಚ್ಚಿಯೆಂದೂ ಬಿಡದೆ ರೇಸಿ ಬಸಿದುಂಡವನೆ
ಹಗಲು ಹೊತ್ತಿನ ಮಾಯ ರಾಕ್ಷಸನೆ
ಹೊರಗೆ ಬಾ ಇಡಿಯ ಸ್ತ್ರೀ ಕುಲ ನಿನ್ನ
ಮೆಟ್ಟಿ ಸುಲಿವುದು ಬಿಸುಟು ಇಬ್ಭಾಗವಾಗಿ
ಮತ್ತೆ ಹುಟ್ಟಿ ಬರದಂತೆ

ಉರಿವ ಕೂಗಿನ ಎದುರು ಹುಚ್ಚಿ ನಕ್ಕಳು ಬಿಕ್ಕಿ
ಕಂಬನಿಯ ಮಣಿ ಚೆಲ್ಲಿ, ಹೆಕ್ಕಿ
ಹಾಡಿದಳು ತಾರಕದ ವಿಕಾರ ಕಕ್ಕಿ
ಪುರುಷರೆಲ್ಲ ಪುರುಷರಲ್ಲ
ಗೋಡೆಗಳಿಗೆಲ್ಲ ಮಾಡಿಲ್ಲವಲ್ಲ !
ಹೆಂಗಸರ ತೋಳ್ಗಳಲಿ ತಿರುಳಿದೆ ಸರಳಿಲ್ಲ
ಹುಚ್ಚಿ ಹಾಡನು ಕೇಳುವವರಿಲ್ಲ.

ಊರಿನವರಿಗೆಲ್ಲ ಗೊತ್ತಿರುವ ಈ ಹೆಣ್ಣು
ಹುಡುಕುತಿರುವಳು ದಿನವೂ ಯಾವ ಮೃಗವನ್ನು ?
ಎಲ್ಲಿ ಮಡಗುವಳೀಕೆ ಬ್ರಹ್ಮಾಂಡದಲ್ಲೆಲ್ಲೂ
ಜಾಗವಿಲ್ಲದ ಪಿಂಡವನ್ನು ?

ವಿಷ ವರ್ತುಲದಲಿ ಮರೆಯಾದ ಸಿಸಿಲಿಯಮ್ಮ



ದಿನಾಂಕ 13-1-1986 ರಂದು ಪ್ರೀತಿಯ ಸೆಲೆಯೆತ್ತ ಹಂಬಲಿಸುತ್ತಿದ್ದ ಸಿಸಿಲಿಯಮ್ಮನನ್ನು ಗಂಡ ಜಾನ್ ಸ್ಪೈಕಾಟ್‌ನ ಪಾಶವೀ ಪ್ರವೃತ್ತಿಯು ಬಲಿತೆಗೆದುಕೊಂಡಿತು, ಕುರಿವೇಷದಲ್ಲಿ ಸಿಸಿಲಿಯಮ್ಮನ ಮನೆ ಮನವನ್ನು ಹೊಕ್ಕು ಜಾನ್ ನೀಡಿದ ಮಾರ್ಫಿನ್ ಇಂಜೆಕ್ಷನ್ ಸಿಸಿಲಿಯಮ್ಮನ ಕೊನೆಯುಸಿರೆಳೆದುಕೊಂಡಿತು. ಕೊಲೆಯ ಆರೋಪದ ಮೇಲೆ ಈಗ ಜಾನ್‌ನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ

ಚಂಪಾವತಿ ಎಚ್. ಎಸ್.

ಬೆಚ್ಚಗಿದ್ದ ಹೆಣ್ಣು
ಬರಿದು ತಣ್ಣಗಾಗಿದ್ದಾಳೆ.
ಹಾಸು ಹೊಕ್ಕಾದ ಬದುಕಿನ
ಯಾವ ಪಕ್ಕೆಲುಬುಗಳಲ್ಲಿ
ಯಮಧರ್ಮರಾಯ ಹೊಕ್ಕಿದ್ದನೋ ?

ಬೇಡಿದನೋ – ಕಾಡಿದನೋ ?
ಬೆದರಿಸಿದನೋ ?

ಹೆಣ್ಣ–ಗಂಡ ತೃಷೆಯಾಗಿ
ಹಾಡಿದನೋ ?
ಮುಗ್ಧಗಂಗಳ ಆರೆ ಒಡಲ
ಬಯಸಿ ಬೇಡಿದನೋ ?
ಶಹನಾಯಿಯ ನಾದ
ಊದಿ ಕರೆದನೋ ?
ನಿದ್ರೆ – ಅತಿನಿದ್ರೆ – ಎಚ್ಚರಗಳಲ್ಲಿ
ತಬ್ಬಲಿತನವಾಗಿ ಕಾಡಿ ಬೇಡಿದನೋ ?

ಬೇಡಿ ಬಯಸಿದ್ದ
ನಾಡಿ – ಕಚ್ಚಿದ್ದ
ಹಾವಾಡಿಗನ–ಗಾರುಡಿತನಕ್ಕೆ
ಮಡಿಲ ಬೆಂಕಿ ನಂದಿ
ಒಡಲ ಉರಿ ತಣ್ಣಗಾಯಿತೋ ?

ಬೆಚ್ಚಗಿದ್ದ ಹೆಣ್ಣು
ಬರಿದು ತಣ್ಣಗಾಗಿದ್ದಾಳೆ.
ನೆನಪುಗಳು, ಕಿತ್ತು ತಿನ್ನುವ ನೆನಪುಗಳು.

(ದಿನಚರಿ ಪುಟದಿಂದ)

ನೆನಪುಗಳು - ಕಿತ್ತು ತಿನ್ನುವ ನೆನಪುಗಳು

ನಿಂತು ಚಲಿಸುವ ರೈಲಿನಲ್ಲಿ ಸಿಸಿಲಿಯಮ್ಮ ಹೇಳುತ್ತಿದ್ದಾರೆ – 'ಚಂಪಾ. ನನಗೆ ನಿಮ್ಮ ರೀತಿಯ ಮಗಳಿರಬೇಕು. ನಾನು ಶಾನಿಗೆ, – ಮತ್ತೆ ಮಕ್ಕಳಿಗೆಲ್ಲ ಹೇಳುತ್ತೇನೆ. ನಿಮ್ಮ ರೀತಿ ಇರಬೇಕು ಎನ್ನುತ್ತೇನೆ. ರೋಸಲೀನ್ silent ಹುಡುಗಿ. ಶಾನಿ ನಿಮ್ಮ ತರಾನೇ ಆಗ್ತಾಳೆ.'

ಹಳೆಯ ಕಟ್ಟಡವೊಂದನ್ನು ಕೆಡುವುತ್ತಿರುವ ಬೃಹದಾಕಾರದ ಯಂತ್ರದ ಗಿವಿಗಿಟ್ಟುವ ಶಬ್ದಗಳಲ್ಲಿ ವೈನ್ ಹಿಡಿದ ಸಿಸಿಲಿಯಮ್ಮ ಕೇಳುತ್ತಿದ್ದಾರೆ, 'ನೀವು ಈ ರೀತಿಯ ಮನೆಯಲ್ಲಿ ಮಾಡಿದ ವೈನ್ ಕುಡಿದಿಲ್ಲ ಅಲ್ಲ ? ನಿಮಗೋಸ್ಕರವೇ ತಂದೆ. ನೀವು ಕೇರಳದ ಬಾಳೆ ಹಣ್ಣು ತಿಂದಿಲ್ಲ ಅಲ್ಲ ? ನಾನು ಕೊಟ್ಟಾಯಂ ತಲುಪಿದ ಕ್ಷಣವೇ ನಿಮಗೆ ಬಾಳೆ ಹಣ್ಣು ತೆಗೆದುಕೊಡ್ತೇನೆ.'

ಏರಿ ಬರುತ್ತಿರುವ ತೆರೆಗಳಲ್ಲಿ, ಕೊರೆಯುವ ಚಳಿಯಲ್ಲಿ ಚಿಲ್ಲೆನ್ನುತ್ತಿರುವ ದೇಹದ ರೋಮ, ರೋಮಗಳಲ್ಲಿ, ತಣ್ಣನೆಯ ಹೆಣ್ಣಿನ ನೆನಪುಗಳಲ್ಲಿ ಸಿಸಿಲಿಯಮ್ಮ ಹೇಳುತ್ತಿದ್ದಾರೆ, 'ಚಂಪಾ ನನಗೆ ಕೆಲವು ಸಲ ಕೆಟ್ಟ ಹಟ ಬರುತ್ತೆ. ನನಗೇನೋ ನಲವತ್ತು ವರ್ಷ ನಿಜ. ಆದರೆ ಅವನು ನನ್ನ lifeನೊಟ್ಟಿಗೆ ಚಲ್ಲಾಟ ಆಡುವ ರೀತಿಯಲ್ಲಿ ಅವನಿಗೆ ಸುಮ್ಮನೇ ಬಿಡಬಾರದು. ಒಂದು ಸಲ ಕಂಬಿ ಎಣಿಸಿದರೆ ಅವನಿಗೆ ಬುದ್ಧಿ ಬರುತ್ತೆ.'

ಮಂಜುಗಟ್ಟಿದ ನದಿಗಳಲ್ಲಿ ಸ್ಕೇಟಿಂಗ್ ಆಡುತ್ತಿರುವ ಮಕ್ಕಳ ಮಧ್ಯದಲ್ಲಿ ಸಿಸಿಲಿಯಮ್ಮ ತುಂಬಿದ ಕಣ್ಣುಗಳಲ್ಲಿ ಕೇಳುತ್ತಿದ್ದಾರೆ, 'ಚಂಪಾ ಲೇಖನ ಬರೆದಿರಾ? ನಿಮಗೆ ಬಿಡುವಿಲ್ಲ ಅಲ್ವಾ ? ನನಗೆ ಕುತೂಹಲ. ನೀವು ಏನೆಲ್ಲ ನನ್ನ ಬಗ್ಗೆ ಬರೀಬಹುದು ಅಂತ. ನನ್ನದೊಂದು ದೊಡ್ಡ ಕತೆ ರಾಮಾಯಣವೇ ಆಗ್ತದೆ ಅಲ್ಲಾ ? : ಭ್ರಮೆಗಳು

ಗೊತ್ತಿಲ್ಲ – ಸಾವಿರಾರು ಮೈಲುಗಳಾಚೆ ಕುಳಿತು ಸಿಸಿಲಿಯಮ್ಮನ ತಣ್ಣನೆಯ ದೇಹದ ಮೂಲೆ ಮೂಲೆಗಳನ್ನು ಮುಟ್ಟಲು ಪ್ರಯತ್ನಿಸುತ್ತಿದ್ದೇನೆ. ನಾನು ಬರೆಯಬೇಕೆಂದುಕೊಂಡಿದ್ದ – 'ನಾನು ಕಂಡ ಕೇರಳದ ಹೆಣ್ಣು, ಸಿಸಿಲಿಯಮ್ಮ' ಲೇಖನದಲ್ಲಿ ಮೂಡಬಹುದಾಗಿದ್ದ ಬೆಚ್ಚನೆಯ ಶಬ್ದಗಳಾಚೆ ಧ್ವನಿ ಮೂಡುತ್ತಿಲ್ಲ.
ಈಗ ಬರೆಯುತ್ತಿದ್ದೇನೆ. – ಓದಲು, ಓದಿ ಖುಷಿ ಪಡಲು ಸಿಸಿಲಿಯಮ್ಮ – ಇನ್ನಿಲ್ಲ.

ಕನಸುಗಳು – ಮೃತ್ಯುವಿನ ಮಡಿಲೊಳಗೆ ತೆಕ್ಕೆ ಹಾಕಿಕೊಂಡಿವೆ.

ನಾಲ್ಕಾರು ದಿನಗಳು ನನಗೆ ಗೊತ್ತಿರದ ವೇದನೆಯ ಮೂಲೆಯಲ್ಲಿ ಎಲ್ಲಿಯೋ ಸಿಸಿಲಿಯಮ್ಮನ ಬಗ್ಗೆ ಬರೆಯಬೇಕು, ಅವರಿಗೆ ಖುಷಿಯಾಗಬಹುದು – ಇತ್ಯಾದಿ ಅನ್ನಿಸುತ್ತಿದ್ದ ತೀವ್ರ ಬಯಕೆಗಳಲ್ಲಿ ಅವರ ಟೇಪ್ ಮಾಡಿದ ಧ್ವನಿಯನ್ನು ಕೇಳಿ ಪುಳಕಿತಳಾದ ನೆನಪು. ಯಾ ತರಂಗಗಳಲ್ಲಿ ಸಾವಿನಂಚಿನ ಧ್ವನಿಯನ್ನು ಸಿಸಿಲಿಯಮ ನನ್ನಲ್ಲಿ ಮೂಡಿಸಿದ್ದರೋ ? ಹಾಲೆಂಡಿನ ಸೌಂದರ್ಯ ಇದ್ದಕ್ಕಿದ್ದ ಹಾಗೆ ಕರಾಳ ಮೃತ್ಯುವಾಗಿ ಸಮುದ್ರದ ತೆರೆಗಳಲ್ಲಿ ತಾಂಡವ ನೃತ್ಯ ಆಡುತ್ತಿದೆ.

1984ರ ಕೊನೆಯಲ್ಲಿ ಸಿಸಿಲಿಯಮ್ಮನ ಗಂಡನ ವಿಳಾಸ ಪತ್ತೆ ಮಾಡಲು ಸಿಸಿಲಿಯಮ್ಮನೊಟ್ಟಿಗೆ ನಾಲ್ಕು ದಿನಗಳು ಕೇರಳಕ್ಕೆ ಪ್ರಯಾಣ ಮಾಡಿದ ನೆನಪು. ಗಿಜಿಗುಟ್ಟುವ ರೈಲ್ವೆ ಕಂಪಾರ್ಟ್‌ಮೆಂಟವೊಂದರ ಮೇಲುಗಡೆ ಬರ್ತ ಮೇಲೆ ಕುಳಿತು ಸಿಸಿಲಿಯಮ್ಮ ನಾನು ರಾತ್ರಿಯೆಲ್ಲ ಹರಟಿದ ನೆನಪು. **ಹುಡುಗಿಯರು ಹೋರಾಟ ಮಾಡದೇ ಅಥವಾ ಹೋರಾಡಲಿಕ್ಕೆ ಹಣ ಇಲ್ಲದೇ ಹೇಗೆ ಬಲಿಯಾಗಿ ಬಿಡ್ತಾರಲ್ಲ–** ಎಂದು ಮತ್ತೆ ಮತ್ತೆ ಅವರು ಹೇಳುತ್ತಿದ್ದ ಮಾತುಗಳ ನೆನಪು.

'ಶಾನಿ ಶಾಲೆಯಲ್ಲಿ ತುಂಬಾ ಮುಂದು :

'ರೋಸಲೀನ್ ಏನು ಮಾಡಿದರೆ ಒಳ್ಳೆಯದು ? ಆಕೆ B.s.c. ಮಾಡಿದರೇ ಒಳ್ಳೆಯದು ಎನ್ನುತ್ತೀರಾ ? ಕೆಲಸ ಅಂತ ಇದ್ದರೆ ಒಳ್ಳೇದಲ್ವ ? ನಾನೇನೋ ಆರ್ಥಿಕವಾಗಿ ದುಡೀತೀನಿ ಅಂತ ಕೋರ್ಟ್-ಕಛೇರಿ ಅಂತ ಓಡಾಡ್ತೀನಿ. ಅವರ ಭವಿಷ್ಯ ಏನಾಗುತ್ತೋ ? ಓದಿಸಿ ಕೆಲಸ ನೋಡಿದರೆ ಅವರ ಜೀವನಕ್ಕೆ ಒಳ್ಳೇದಲ್ವಾ ?

ಮಕ್ಕಳ ವಿದ್ಯಾಭ್ಯಾಸದ ಬಗ್ಗೆ, ತಮ್ಮ ಹೋರಾಟದ ಬಗ್ಗೆ ಕೇರ ದಲ್ಲಿದ್ದ ನಾಲ್ಕು ದಿನ ಸದಾ ನನ್ನಲ್ಲಿ ಸಿಸಿಲಿಯಮ್ಮ ಮಾತನಾಡಿದ್ದರು. ನನ್ನ ಹೋರಾಟಕ್ಕೆ ಜಯವಾಗುವ ತನಕ ನಾನು ಹಣದ ಮುಖ ನೋಡೊಲ್ಲ ಎಂದಿದ್ದರು. **ಒಮ್ಮೆ ಜೈಲಿನಲ್ಲಿ ಅವನನ್ನು ನೋಡಿದರೆ ಸಮಾಧಾನ ಎಂದಿದ್ದರು.**

ಕೊಟ್ಟಾಯಂ, ಕೊಚ್ಚಿನ್ ಹಾಗೂ ಇತರ ಮೂರು ಕೇರಳದ ಹಳ್ಳಿಗಳಲ್ಲಿ ರಬ್ಬರ್ ಗಿಡಗಳ ಮಧ್ಯೆ, - ತೆಂಗಿನ ಮರಗಳ ಮಧ್ಯೆ, ಕಣ್ಣಿಗೆ ತಂಪು ನೀಡುವ ಸೌಂದರ್ಯದ ಮಧ್ಯೆ ಸಿಸಿಲಿಯಮ್ಮ ನಕ್ಕಿದ್ದರು, ಅತ್ತಿದ್ದರು, ಕನಸು ಕಂಡಿದ್ದರು. ಹಲವಾರು ಮನೆಗಳಲ್ಲಿ, ಪೋಸ್ಟ್ ಆಫೀಸ್‌ಗಳಲ್ಲಿ - ಅಂಗಡಿಗಳ ಕಟ್ಟೆಗಳಲ್ಲಿ - ರಸ್ತೆಗಳ ಮಧ್ಯದಲ್ಲಿ ತಮ್ಮ ಗುರುತಿನವರೊಟ್ಟಿಗೆ ತಮ್ಮ ಕತೆಯನ್ನು ಹೇಳುತ್ತಾ ನಡೆದಿದ್ದರು. ಹೀಗೆ ತಾಸುಗಟ್ಟಲೆ ತಮ್ಮ ಕತೆ ಹೇಳುತ್ತಾರಲ್ಲ - ಇವರಿಗೆ ಬೇಸರವಾಗುವುದಿಲ್ಲವೇ - ಎನಿಸಿತ್ತು ನನಗೆ. ಕೇರಳದ ಮೂಲೆಯಲ್ಲಿನ ಹಳ್ಳಿಯೊಂದರ ಪುಟ್ಟ ಮನೆಯಲ್ಲಿ ಮೀನು ತಿನ್ನುತ್ತಾ - 'ನಿಮ್ಮ ಹುಡುಗಿಗೆ ಕೆಲಸ ಕೊಡಿಸುತ್ತೇನೆಂದು ನನ್ನ ಗಂಡ ಏನೆಲ್ಲ ಮಾಡಿದ ನೋಡಿದಿರಾ ? ನಿಮ್ಮ ಹಣ ತಿಂದು ಹಾಕಿದ. ಅವನು ಬರೆದ ಪತ್ರಗಳಿದ್ದರೆ ಕೊಡಿ. ಕೇಸಿಗೆ ಸಹಾಯಕವಾಗಬಹುದು. ಮತ್ತೆ ಇತರ ಹೆಣ್ಣು ಮಕ್ಕಳಿಗೆ ಅವನು ಹಾಗೆ ಮಾಡಬಾರದು ಅಲ್ವಾ ?' ಆ ಮನೆಯವರು ಹುಡಂಕಿ ತೆಗೆದು ಕೊಟ್ಟ ಒಂದು ಹಳೆಯ ಪತ್ರವನ್ನು ನನಗೆ ತೋರಿಸಿ. - 'ಕೇಸಿಗೆ ಸಹಾಯಕವಾಗುತ್ತೆ ಅಲ್ವಾ ?' - ಎಂದಿದ್ದರು. 'ಸಾಕ್ಷಿ ಹೇಳಲು ನೀವು ಬೆಂಗಳೂರಿಗೆ ಬರಲು ಸಾಧ್ಯವಾಗುತ್ತಾ ? ಖರ್ಚಿನ ಮುಖ ನೋಡಬೇಡಿ ಅದೆಲ್ಲ ನಾನು ನೋಡಿಕೊಳ್ಳುತ್ತೇನೆ :- ಆ ಮನೆಯವರಲ್ಲಿ ನುಡಿದಿದ್ದರು. 'ಈಗ ಮದುವೆಯಾಗಿರುವ ಹೆಂಗಸು ಆವನ ಜೊತೆ ಅದೆಷ್ಟು ಸುಖ ಪಡ್ತಾಳೆ ? ಅವಳ ಬಾಳೂ ಹಾಳಲ್ವ ? -ಎನ್ನುತ್ತಿದ್ದರು.

'ನೀವು ಸುಳಿವು ಸಿಕ್ಕಲ್ಲಿ ನನಗೆ ಬರೆಯಬೇಕು. ಒಂದು ಹೆಣ್ಣಿನ ಜೀವನಕ್ಕೆ ಉಪಕಾರ ಮಾಡಿದ ಹಾಗೆ ಆಗುತ್ತದೆ. ಅಷ್ಟು ಉಪಕಾರ ಮಾಡಿದರೆ ಜೀವನ ಪೂರ್ತಿ ನಿಮ್ಮ ನೆನಪು ಇಡ್ತೇನೆ.' ಪೋಸ್ಟ್‌ನವನ ಹತ್ತಿರ, ಪಾದ್ರಿಗಳ ಬಳಿ, ಮೈದುನರ ಹೆಂಡತಿಯರಲ್ಲಿ, ರಸ್ತೆಯಲ್ಲಿ ಕಂಡ ಗುರುತಿನವರಲ್ಲಿ ಸಿಸಿಲಿಯಮ್ಮ ಗೋಗರೆದಿದ್ದರು.

'ನೀವು ಮಲೆಯಾಳಂ ಮಾತನಾಡುವುದಿಲ್ಲ ಅಲ್ವಾ? ನೀವು ಸುಮ್ಮನೇ ಇರುವುದು, ಇಂಗ್ಲಿಷ್ ಮಾತನಾಡುವುದು ಇದೆಲ್ಲ ನೋಡಿ ನೀವು ಸಿ.ಐ.ಡಿ ಎಂದು ಕೊಂಡಿದ್ದಾರೆ ಇವರೆಲ್ಲ; ಇಬ್ಬರು ನಕ್ಕಿದ್ದೆವು.

ಕೊಚ್ಚಿನ್ ಬಂದರುಗಳನ್ನು – ಸಮುದ್ರವನ್ನು ವೀಕ್ಷಿಸುತ್ತಾ, 'ಚಂಪಾ, ನಾವು ಬಂದದ್ದು ಒಳ್ಳೇದಾಯ್ತು ದಲ್ಲ ? ಒಂಥರಾ ಭಯ ಹುಟ್ಟಿಸಿದ ಹಾಗೆ, ಅವನು ಈ ಊರುಗಳಿಗೆ ಕಾಲಿಟ್ಟರೆ ಅವರೆಲ್ಲ ಹೇಳ್ತಾರೆ. ಅವನಿಗೆ ಭಯ ಹುಟ್ಟಿಕೊಳ್ತದೆ ಅಲ್ವಾ ?

ಸಿಸಿಲಿಯಮ್ಮ ಮರಣ ಹೊಂದಿರುವುದು ಎಲ್ಲರಿಗೂ ಆಶ್ಚರ್ಯ ಮತ್ತು ದಿಗ್ಭ್ರಮೆಯಾಗುವ ಕಾರಣವೇ ಇಲ್ಲ. ಏಕೆಂದರೆ ಅವರು ಭಾರತೀಯ ಸ್ತ್ರೀಯಾದ ಕಾರಣ ಅವರಲ್ಲಿ ಎಷ್ಟೇ ಆತ್ಮವಿಶ್ವಾಸವಿದ್ದರೂ ತನ್ನ ಪತಿಯಾದವನು ಬೀದಿ ಭಿಕಾರಿಯಾಗಿ ಕಣ್ಣಿನ ಮುಂದೆ ಅಲೆದಾಡಿದಾಗ, ಅದಕ್ಕೆ ಊರ ಜನರ ಪ್ರಶ್ನಾರ್ಥಕ ನೋಟ ಎದುರಾದಾಗ, ಸುಮಾರು ನಾಲ್ಕು ಐದು ವರ್ಷಗಳು ಗಂಡ ಬಿಟ್ಟವಳು ಎಂದು ಅನಿಸಿಕೊಂಡಾಗ ಆದ ಅನುಭವಕ್ಕೆ ಅವನನ್ನು ಮನೆಗೆ ಸೇರಿಸಿಕೊಳ್ಳುವುದೇ ಮೇಲು ಎನಿಸಿರಬೇಕು, ಮತ್ತೆ ಈಗ ಎರಡನೆ ಹೆಂಡತಿಯನ್ನು ಬಿಟ್ಟು ಬಂದಿರುವುದರಿಂದ ಕೊನೆಗೂ ನನ್ನ ಹತ್ತಿರವೇ ಬಂದನೆಂಬುದನ್ನು ಅವರು ಅರಿತಿದ್ದಿರಬೇಕು. ನನ್ನನ್ನು ಮನೆಗೆ ಸೇರಿಸ್ಕೊ ಎಂದು ಕಾಡಿ ಬೇಡುತ್ತಿರುವಾಗಲೆ ಒಂದಾಗಿ ಅವನಿಗೆ ತನ್ನ ನಿಜವಾದ ಪತ್ನಿತ್ವವನ್ನು ತೋರಿ ಅಮೃತದ ಹಾಲೆರೆದು ನನ್ನವನನ್ನಾಗಿ ಮಾಡಿಕೊಳ್ಳಬೇಕು ಎಂದು ಇನ್ನು ಮುಂದಾದರೂ ನನ್ನ ಮಕ್ಕಳು ಮತ್ತು ಪತಿಯೊಡನೆ ಸುಖ ಸಂಸಾರ ಮಾಡಬೇಕು ಎಂದು ಎಷ್ಟು ಸುಂದರವಾದ ಕಲ್ಪನೆಗೆ ಒಳಗಾಗಿದ್ದರೊ, ಅವರು ಈ ತೊಳಲಾಟದಲ್ಲಿರುವಾಗಲೆ ಸಮಯ ಸಾಧಿಸಿ ಮನೆಗೆ ಸೇರಿಕೊಂಡ ಗಂಡನೆಂಬ ವಿಷಜಂತುವನ್ನು ಪ್ರೀತಿ ಮಮತೆಗಳಿಂದ ಆದರಿಸಿ ಅವರ ಸಮಾಧಿಯನ್ನು ಅವರೇ ತೋಡಿ ಕೊಂಡರು- ಅವನ ಒಳ ವಿಷವರ್ಮವನ್ನರಿಯದೆ ಪ್ರೀತಿಯ ಲೇಪನದ ವಿಷವನ್ನುಂಡು ಮಕ್ಕಳಿಂದ ಜನರಿಂದ ದೂರ ಬಹು ದೂರವಾಗಿ ಸಾವಿನಂಚಿಗೆ ತಲುಪಿದರು. ಈ ಸ್ಥಾನದಲ್ಲಿ ಬೇರೆ ಯಾವ ಹೆಣ್ಣು ಇದ್ದಿದ್ದರೂ ಇದೇ ಮಾಡುತ್ತಿದ್ದರೇನೊ. ಇದಕ್ಕೆ ಕಾರಣ ಜನಸಾಮಾನ್ಯರು ಗಂಡನನ್ನು ಮನೆಗೆ ಸೇರಿಸದಿದ್ದರೆ ಅಬ್ಬ ಎಂತಹ ಹೆಂಗಸು, ಗಂಡ ಕಾಲು ಹಿಡಿದರೂ ಮನೆಗೆ ಸೇರಿಸದ ರಾಕ್ಷಸಿ ಯಾವನನ್ನೊ ಇಟ್ಟುಕೊಂಡಿರುವಳು ಈ ತರಹದ ಕತ್ತಿಗಿಂತ ಹರಿತವಾದ ಮಾತುಗಳಿಂದ ಇರಿದಾಗ ಅನುಮಾನದ ಕಣ್ಣುಗಳಿಂದ ಈಟಿಗಿಂತ ಮೊನಚಾಗಿ ಅವರನ್ನು ಚುಚ್ಚಿದಾಗ ಅವರು ಬದುಕಲು ಸಾಧ್ಯವಿತ್ತೆ? ಗಂಡ ಬಿಟ್ಟವರಿಗೆ ಜನರು ಸಹಾಯ ಮಾಡುವುದು ಬೇಡ ಅವರಿಗೆ ಈ ತರಹದ ಅಪನಿಂದನೆಗಳಿಗೆ ಗುರಿ ಮಾಡದೇ ತಮ್ಮ ಪಾಡಿಗೆ ತಾದಿದ್ದರೆ ಈ ತರಹದ ಪ್ರಕರಣಗಳು ಸ್ವಲ್ಪವಾದರೂ ಕಡಿಮೆಯಾಗಬಹುದು.

—ವೇದ

‘ಸಿಸಿಲಿಯಮ್ಮ’ನ ನೋಡಿದರೆ ನಮ್ಮಲ್ಲಿ ಒಂಥರಾ ಸ್ಫೂರ್ತಿ ಉಕ್ಕುತ್ತದೆ’ ಗೆಳತಿಯೊಬ್ಬಳು ನುಡಿದ ಮಾತು ನೆನಪಾಗುತ್ತದೆ. ಆ ಸ್ಫೂರ್ತಿ ಇನ್ನಿಲ್ಲ. ಯಾಕೋ ಕಣ್ಣು – ಮನಸ್ಸುಗಳು ನಂಬುತ್ತಿಲ್ಲ. ಎದೆಗಟ್ಟಿ ಮಾಡಿಕೊಳ್ಳಬೇಕಾಗಿದೆ. ಬೆಚ್ಚನೆಯ ಸ್ಫೂರ್ತಿಯ ತಣ್ಣನೆಯ ದೇಹದ ಹೆಣ್ಣಿನ ನೆನಪುಗಳಲ್ಲಿ ಉಕ್ಕುವ ಕಣ್ಣೀರಿನ ಮಧ್ಯ ಯಾಕೋ ಬಂದೂಕು, ಪಿಸ್ತೂಲುಗಳು ನೆನಪಾಗುತ್ತಿವೆ. ಕೆಟ್ಟ ಕನಸುಗಳು !

ಅವರ ಬಗ್ಗೆ ಬರೆಯಬೇಕೆಂದು, ಅವರದೇ ಆದ ಮಾತುಗಳಲ್ಲಿ ಬರೆಯಬೇಕೆಂದು ಹಾಲೆಂಡಿಗೆ ಬರುವಾಗ ಜೂನ್ – 1985ರಲ್ಲಿ ಟೇಪ್ ಮಾಡಿದ ಅವರ ಶಬ್ದಗಳು, ಧ್ವನಿಯನ್ನು, ಸ್ಫೂರ್ತಿಯನ್ನು ಅವರದೇ ರೀತಿಯಲ್ಲಿ ಇಲ್ಲಿ ಮೂಡಿಸುತ್ತಿದ್ದೇನೆ.

° ° ° ° ° ° °

1965 ಜೂನ್ 7ನೇ ತಾರೀಖು ನನ್ನ ಮದುವೆ ಯಾಗಿದ್ದು. ಮದುವೆಯಲ್ಲಿ ಸಾಮಾನ್ಯವಾಗಿ ಎಲ್ಲಾ ಮದುವೆಗಳೂ ನಡೆಯೊ ತರಹ ದಲ್ಲಾಳಿಗಳು ಕರೆದು ಕೊಂಡು ಬಂದಿರೊ ಮದುವೆ ಇದು. ಮದುವೆಯಲ್ಲಿ ವರದಕ್ಷಿಣೆ ಮತ್ತು ಒಡವೆಯೆಲ್ಲ ಇಷ್ಟು ಅಂತ ಇಟ್ಟು ಮಾಡಿದ್ದು. ಆಮೇಲೆ ಏನಾಯ್ತು ಅಂದರೆ, ಈ ಪೂರ್ತಿ ಹಣ ಐದು ಸಾವಿರ ರೂಪಾಯಿ ಮತ್ತು ಹತ್ತು ಸಾವಿರ ಒಡವೆ ನಗದು ಕೊಡ್ಬೇಕು ಅಂತ ಡಿಮಾಂಡ್ ಮಾಡಿದರು ನನ್ನ ಗಂಡನ ಮನೆಯವರು. ಅಷ್ಟು ದುಡ್ಡು ಕೊಡೋದಿಲ್ಲ ನಾನು, ಮೂರು ಸಾವಿರ ರೂಪಾಯಿಯನ್ನೇ ಕೊಡೋದು ಅಂತ ಹಟ ಹಿಡಿದರು. ಹಟ ಹಿಡಿದಾಗ, ಈ ಮದುವೆ ಬೇಡವೆ ಬೇಡ ಅಂತ ಅವರೇ ಹೊರಟರು ನಮ್ಮ ತಂದೆಯವರು ಈ ಮದುವೆ ಬಿಲ್ಕುಲ್ ಬೇಡವೇ ಬೇಡ ಅಂತ ನಿಶ್ಚಯ ಮಾಡ್ಬಿಟ್ಟರು. ಆಮೇಲೆ, ಇವರೇ, ಮತ್ತೆ ಮೇಲು ಬಿದ್ದು ಬಂದು, ಸರಿ ಎಷ್ಟು ಕೊಡ್ತೀರೋ ಅಷ್ಟೇ ಸಾಕು ಅಂತ ಮದುವೆ ನಿಶ್ಚಿತಾರ್ಥ ಮಾಡಿಬಿಟ್ಟರು. ಮದುವೆಯಾಯ್ತು. ಒಂದು ಮೂರು ತಿಂಗಳು ಸುಮಾರಾಗಿದ್ದರು. ಆದರೂ ಚುಚ್ಚು ಮಾತುಗಳು. ನೀನು ನನಗೆ ಕೊಟ್ಟರೋ ಒಡವೆಗಳೆಲ್ಲ ಹಳೆ ಮಾದರಿ ಇದೆ. ಹೊಸ ಡಿಸೈನ್ ಇಲ್ಲ. ಹಾಗೆ, ಹೀಗೆ ಅಂತ ಎಲ್ಲ ಹೇಳಿಕೊಂಡು, ಇವರ ಮನೆಯಲ್ಲಿ ಇವರಿಗೆ ಜಾಸ್ತಿ ಕೊಡೋರು ತುಂಬಾ ಕ್ಯೂ ನಿಲ್ತಾ ಇತ್ತು ಅಂತ ಹೇಳಿಕೊಂಡು, ಅಕ್ಕ ಮತ್ತು ಗಂಡನ ಮನೆಯವರೆಲ್ಲಾನೂ, ಗಂಡನೂ ಮೊದಲುಗೊಂಡು ಹೀಯಾಳಿಸೋದು, ಬಂದ ನೆಂಟರಿಷ್ಟರ ಕೂಡ ನನ್ನನ್ನು ತುಂಬಾ ಅವಮಾನ ಮಾಡ್ತಿದ್ದರು. ಹೀಗೆ ಅವರು ಮಾಡ್ತಿರೋ ಕಿರುಕುಳ ಎಲ್ಲಾ ನಾನು ಸಹಿಸಿಕೊಂಡು ಇದ್ದರು. ನಂತರ ಇವರು ಬಾಕಿ ಎರಡು ಸಾವಿರ ರೂಪಾಯಿ ಕೊಟ್ಟರೇನೇ, ಕೊಡೋ ತನಕ ನನ್ನನ್ನ ಕೆಲಸಕ್ಕೆ ಕಳಿಸೋದೋ ಇಲ್ಲ ಅಂತ ಕೆಲಸಕ್ಕೆ ಹೋಗೋದನ್ನ ನಿಲ್ಲಿಸಿ ಬಿಟ್ಟಿದ್ದರು. ಹಾಗೇ ಮೊದಲನೇ ಮಗು ಆಯ್ತು. ಮೊದಲು ಮಗು ಹುಟ್ಟಿವಾಗ ತಾಯಿ ಮನೆಗೆ ಕರೆದುಕೊಂಡು ಹೋಗಿದ್ದ ಸಮಯದಲ್ಲಿ ಇವರೇನು ಡಿಮ್ಯಾಂಡ್ ಮಾಡಿದ್ದು ಎಂದರೆ, ಮಗೂಗೆ ಇವರು ಕೇಳಿದಷ್ಟು ಒಡವೆಗಳು, ಮಿಕ್ಕಿದ ಎರಡು ಸಾವಿರ ರೂಪಾಯಿ ವರದಕ್ಷಿಣೆ, ಹಣ ಎಲ್ಲಾ ಕೊಟ್ಟು ನಂತರ ಮನೆಗೆ ಬೇಕಾದ ಫರ್ನಿಚರ್ ಸಾಮಾನುಗಳು ಎಲ್ಲಾ ಒಂದಿಗೇ ಬರಬೇಕು, ಇಲ್ಲದಿದ್ದರೆ ನನ್ನ ಮನೆಗೆ ಕಾಲಿಡಕೂಡದು ಅಂತ ಕಟ್ಟಪ್ಪಣೆ ಮಾಡಿದರು ನನ್ನ ಗಂಡ. ಆಮೇಲೆ ನಾನು ಗಂಡನ ಕಡೇನೂ ಮಾತಾಡೋಕಾಗಲ್ಲ, ತಂದೆ–ತಾಯಿ ಕಡೆನೂ ಮಾತಾಡೋಕಾಗಲ್ಲ ಆ ತರಹ. ತಂದೆ–ತಾಯಿಗಳು ಬೇಕಾದ್ರೆ ಅವರು ಕರೆದುಕೊಂಡು ಹೋಗಲಿ, ಇಲ್ಲದೇ ಇದ್ದರೆ ನಾನೇ ಎಲ್ಲಾದರೂ ಕೆಲಸಕ್ಕೇ ಸೇರಿಸ್ತೀವಿ, ಒಂದು ಮಗು ತಾನೆ ಇರೋದು, ನಮಗೇನೂ ಭಾರ ಅಲ್ಲ ಅಂತ ಅವರು. ಇವರುಗಳು ಹಾಗೆಯೇ ಒಂದು ಒಂಭತ್ತು ತಿಂಗಳ ಕಾಲ ಅವರಿಗೂ ಇವರಿಗೂ ಫೈಟಿಂಗ್ ಆಯ್ತು. ಅವರಿವರ ಮಾತಿನ ಘರ್ಷಣೆ ನಡುವೆ ನಾನು ಅಸಹಾಯಕಳಾಗಿ ಕುಳಿತುಕೊಂಡಿದ್ದು. ಆಮೇಲೆ. ನನ್ನ ಗಂಡ ಬಂದ್ಬಿಟ್ಟು ನನ್ನ ಹೆಂಡ್ತಿನ ಕಳಿಸೋದಿಲ್ಲ ಅಂತ ಬಂಧು ಬಳಗದಲ್ಲೆಲ್ಲಾ ನ್ಯಾಯ ಪಂಚಾಯಿತಿ ಒಪ್ಪಿಸಿ ಮತ್ತೆ ಅವರೆಲ್ಲ ರಿಸೆ ನಮ್ಮ ತಂದೆಗೆ ಒತ್ತಾಯಿಸಿ ಮತ್ತೆ ಮಗೂಗೆ ಒಡವೆಗಳನ್ನೆಲ್ಲ ಮಾಡಿಸಿ ಕೊಟ್ಟರು.

ಆಮೇಲೆ ನಮ್ಮ ತಂದೆ ಎರಡು ಸಾವಿರ ರೂಪಾಯಿ ಮಾತ್ರ ಕೊಡ್ಲಿಲ್ಲ. ಚಿನ್ನದ ಒಡವೆಗಳೆಲ್ಲ ಮಾಡಿಸಿ ಕೊಟ್ಟಿದ್ದರು. ಬಂದರೆ ಇವರುಗಳು, ಇವರಿಗೆ ಸಾಕಾದಷ್ಟು ಕೊಟ್ಟಿದ್ದಲ್ವಾ, ಅದಕ್ಕೆ ಮತ್ತಷ್ಟು ಕಿರುಕುಳ ತಿರುಗ್ತಾ ಶುರುವಾಯ್ತು. ನನ್ನ ಗಂಡ ಸದಾ ಊರಲ್ಲಿ ಇರ್ತಾ ಇರ್ಲಿಲ್ಲ. ಅಲ್ಲಿ ಇಲ್ಲಿ ನರ್ಸಿಂಗ್ ಹೋಂ ಇಡೋ ನೆಪ ಮಾಡ್ಕೊಂಡು ಒಂದೊಂದು ಒಡವೆ ನನ್ನ ಕಡೆಯಿಂದ ಇಸ್ಕೊಂಡು ಬೇರೆ ಬೇರೆ ಊರುಗಳಿಗೆ ಹೋಗ್ತಾ ಇದ್ದರು. ಮೂರು ತಿಂಗಳಿಗೆ, ನಾಲ್ಕು ತಿಂಗಳಿಗೇ, ಹೀಗೆ ಇಷ್ಟ

ಬಂದಾಗ ಬರೋದು, ಒಂದು 8 ದಿವಸ ಅಥವಾ 15 ದಿವಸ ಊರಲ್ಲಿ ಉಳುಕೊಳ್ಳೋದು. ಅಲ್ಲಿ ಇಲ್ಲಿ ನೆಂಟರಿಷ್ಟರ ಮನೆಗಳಿಗೆ ಹೋಗೋದು, ಮಾಡೋದು, ಇವರ ಸರಿಯಾದ ನಡವಳಿಕೆ ಬಗ್ಗೆ ನನಗೆ ಗೊತ್ತಿರಲಿಲ್ಲ. ಆದರೆ ಊರಿನಲ್ಲಿ ಎಲ್ಲರೂ ಹೇಳಿಕೊಳ್ತಾ ಇದ್ದರು. 'ಈತ ಹುಡುಗಿರನಾ ಕರ್ನಾಟಕಕ್ಕೆ ಸಾಗಾಣಿಕೆ ಮಾಡ್ತಾ ಇದ್ದಾನೆ, ಇವನ ನಡವಳಿಕೆ ಸರಿ ಇಲ್ಲ ಅಂತ'

ಆದರೆ ನಮ್ಮ ಅತ್ತೆ ಅದನ್ನು ಯಾರಾದರೂ ಆ ರೀತಿ ಹೇಳಿದ್ದು, ಅವರ ಕಿವಿಗೆ ಬಿದ್ದರೆ, ಊರವರನ್ನೇ ಸಿಕ್ಕಾ ಪಟ್ಟೆ ಬಯ್ಕೊಳ್ತಾ ಇದ್ದರು. ನನ್ನ ಮಗನ ಬಗ್ಗೆ ಹಾಗೆ, ಹೀಗೆ ಹೇಳಿದರೆ ನಾನು ಸುಮ್ಮನೆ ಬಿಡೋದಿಲ್ಲ ಅಂತ ಎಲ್ಲಾರ್ನು ಇವರು ಒಂಥರಾ ಜೋರು ಮಾಡ್ತಾ ಇದ್ದರು. ಹೀಗೇ ಅತ್ತೆ ಮನೇನಲ್ಲಿ ನಾನು ಉಳಿದುಕೊಂಡದ್ದು. ಆ ನಡುವೆ ಇನ್ನೊಂದು ಮಗು ಕೂಡಾ ಹುಟ್ಟಿತು. ಈ ಎರಡನೇ ಮಗು ಗರ್ಭಿಣಿ ಇದ್ದಾಗ್ಲೇನೇ ಇವರು ಮನೇನಲ್ಲಿ ಒಂದು ನಾಟಕ ಹೂಡಿದರು, ಎಲ್ಲರೂ ಸೇರಿ ನನಗೆ ವರದಕ್ಷಿಣೆ ಹಣ ಬಾಕಿ ಸಿಕ್ಕದೇ ಇರೋ ಕಾರಣದಿಂದ ನನಗೆ ಆ ಮನೇನಲ್ಲಿ ಏನೂ ಹಕ್ಕಿಲ್ಲ. ನನ್ನ ಗಂಡ ಎಲ್ಲಿಗೆ ಹೋಗಿದ್ದಾನೆ ಅಂತ ಗೊತ್ತಿಲ್ಲ. ಸರಿ, ಗಂಡ ಎಲ್ಲಿದ್ದಾನೋ ಅಲ್ಲಿಗೇ ಹೋಗಬೇಕು, ಈ ಮನೆಯಲ್ಲಿ ನಿನಗೇನೂ ಇರಬೇಕಾದ ಹಕ್ಕಿಲ್ಲ. ಅಂತ ಅತ್ತೆ ಹೇಳಿದ್ದರು.

ಈ ಮಧ್ಯೆ ಒಂದು ನರ್ಸಿಂಗ್ ಹೋಂನಲ್ಲಿ ನನಗೆ ಕೆಲಸ ಸಿಕ್ಕಿತು. ನನ್ನ ಒತ್ತಾಯದಿಂದ ನನ್ನನ್ನ ಕೆಲಸಕ್ಕೆ ಕಳುಹಿಸಿದರು, ಅತ್ತೆ ಮನೆಯವರು. ಆದರೆ ಆ ಕೆಲಸ ಮಾಡ್ತಾ ಇರೊ ಟೈಮ್‌ನಲ್ಲಿ ನನಗೆ ಇವರು ಇನ್ನೂ ಜಾಸ್ತಿ ಕಿರುಕುಳ ಕೊಡ್ತಿದ್ದರು. ಸರಿಯಾಗಿ ಆಹಾರ ಕೊಡ್ತಾ ಇರಲಿಲ್ಲ. ನನ್ನ ಸಂಬಳದಲ್ಲಿ ಒಂದು ರೂಪಾಯಿ ಇಟ್ಟುಕೊಳ್ಳೋದಕ್ಕೆ ನನಗೆ ಬಿಡ್ತಾ ಇರ್ಲಿಲ್ಲ. ಆದರೆ ಆ ಆಸ್ಪತ್ರೆಯಲ್ಲಿ ಡಾಕ್ಟರು ನನ್ನನ್ನ ಇಟ್ಟುಕೊಂಡಿದೆ ಅಂತ ನನ್ನನ್ನ ದಿವಸ ಕೆಟ್ಟ ಮಾದರಿಯಿಂದ ಬಯ್ಯೋಳೋದು, ಅತ್ತೆ ಮತ್ತು ಗಂಡ. ಹೀಗೆ ಇವರ ಬಯ್ಗುಳ ಕೇಳಿ ಸಾಕಾಗಿಬಿಟ್ಟು ನಾನು ಕೆಲಸಕ್ಕೆ ರಾಜೀನಾಮೆ ಕೊಟ್ಟುಬಿಟ್ಟೆ. ಹಾಗೇ ರಾಜೀನಾಮೆ ಕೊಡುವಾಗ ನಾನು ಎರಡನೇ ಮಗುವಿನ ಐದು ತಿಂಗಳ ಗರ್ಭಿಣಿ ಇದ್ದೆ. ಆಗ ನನ್ನ ಗಂಡನಿಗೆ ಸರಿಯಾದ ಏನೂ ಕೆಲಸ ಇರಲಿಲ್ಲ. ಗರ್ಭಿಣಿ ಇದ್ದ ನನ್ನನ್ನು ಮನೆಯಿಂದ ಹೊರಗಡೆ ಓಡಿಸಿಬಿಟ್ಟರು ಇವರು. ನಾನು ಸ್ವಲ್ಪ ದಿವಸ ತಂದೆ ಮನೆಯಲ್ಲಿ ಹೋಗಿ ಇದ್ದರು. ಆವಾಗ ತಂದೆ ಮನೇನಲ್ಲಿ ಎಲ್ಲರೂ ಚುಚ್ಚು ಮಾತು ಶುರುವಾಯ್ತು. ಮೊದಲನೇ ಮಗು ಇದ್ದಾಗಲೇ ಹೇಳ್ತಿಲ್ವಾ ಎಲ್ಲಾದರೂ ಕೆಲಸಕ್ಕೆ ಸೇರಿಸ್ತೀನಿ ಅಂತ, ಗಂಡನ ಮಾತು ಕಟ್ಟಿಕೊಂಡು ಹೋಗಿದ್ದೆಯಲ್ಲ, ಈಗ ಅನುಭವಿಸು ಅಂತ ಚುಚ್ಚು ಮಾತು ಶುರುವಾಯ್ತು. ಆಗ ನನಗೆ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಯಿತು. ನಾನು ಏನು ಮಾಡಿದೆ ಮಕ್ಕಳೆರಡನ್ನು ಎತ್ತಿಕೊಂಡು ಕಲ್ಲಿಕೋಟೆ ಸೆಂಟ್ ವಿಂಟ್‌ಸೆಂಟ್ ಹೋಂ ಆರ್ಫನೇಜ್‌ನಲ್ಲಿ ಆಶ್ರಯ ಪಡೆದು, ಎರಡು ವರ್ಷಗಳ ಕಾಲ ಅಲ್ಲಿ ಬದುಕಿದೆ. ಆವಾಗ ನನ್ನ ಗಂಡ ಗೋವದಲ್ಲಿ ಇದ್ದರಂತ ಹೇಳಲಾಗಿದೆ.

ನನ್ನ ಗಂಡ ಎಲ್ಲಿದ್ದಾನೆ ಅಂತ ಗೊತ್ತೆ ಇಲ್ಲ ಅಂತ ನಮ್ಮತ್ತೆ ಹೇಳಿದವರು, ನಾನು ಮಕ್ಕಳನ್ನು ಕರೆದುಕೊಂಡು ಆ ಆರ್ಫನೇಜ್‌ನಲ್ಲಿ ಆಶ್ರಯ ಪಡೆದ ನಂತರ, ನಾವು ಆರ್ಫನೇಜ್‌ನಲ್ಲಿ ಇದ್ವಲ್ವಾ, ಅಲ್ಲಿಗೆ ಗಂಡನನ್ನು ಕಳಿಸಿದರು ಅಲ್ಲಿ ಇವರು ಮದರ್ ಸುಪೀರಿಯರ್ ಹತ್ತಿರ ಹೀನಾಮಾನವಾಗಿ, "ಅತ್ತೆಗೆ ಹೊಡೆದು ಬಂದಿರೋದು, ಮನೆಯಿಂದ ಕದ್ದು ಓಡಿ ಬಂದಿರೋದು" ಅಂತ ಅಪಪ್ರಚಾರ ಮಾಡಿ, ಅವರಿಗೂ ನನ್ನ ಮೇಲೆ ಒಂಥರಾ ಕೆಟ್ಟ ಭಾವನೆ ಉಂಟಾಗುವ ಹಾಗೆ ಮಾಡಿದರು. ಮಂಡ್ಯದಲ್ಲಿ ಪ್ರಾಕ್ಟೀಸ್ ಮಾಡುತ್ತಿರುವುದಾಗಿ ಜೋರು ಜೋರಾಗಿ ಹೇಳಿದರು. ಮದರ್ ಸುಪೀರಿಯರ್, 'ಇದು ಅನಾಥಾಶ್ರಮ ಇಲ್ಲಿ ಬಡವರು ಮಾತ್ರ ಇರೋದು ಗಂಡ ಇರುವವರನ್ನೆಲ್ಲ ಅವರ ಗಂಡಂದಿರೇ ನೋಡಿಕೊಳ್ಳಬೇಕು' ಅಂತ ಅವನಿಗೆ ಅಡ್ವೈಸ್ ಮಾಡಿ ನಮ್ಮಿಬ್ಬರನ್ನು ಮತ್ತೆ ಒಂದುಗೂಡಿಸಿ ಕಳುಹಿಸಿಕೊಟ್ಟರು. ಆಮೇಲೆ ಅಲ್ಲಿಂದ ಕರೆದುಕೊಂಡು ಬಂದಿದ್ದು ಹಾರೋಹಳ್ಳಿಗೆ. ಇವರ ಜೊತೆನಲ್ಲಿ ವಾಸ ಶುರುವಾದ ಮೇಲೆ ಗೊತ್ತಾಯಿತು. ಇವರಿಗೆ ತುಂಬಾ ಕೆಟ್ಟಚಟಗಳಿವೆ. ರೌಡಿ ಗ್ಯಾಂಗ್‌ಗಳನ್ನು ಇಟ್ಟು ಕೊಂಡಿದ್ದಾರೆ. ಇವರು ದಿನಾ ಮದ್ಯಪಾನ ಮಾಡ್ತಿರೋದು ಉದ್ಯೋಗ ಕೊಡಸ್ತೀನಿ ಅಂತ ನೆಪ ಮಾಡಿಕೊಂಡು ಹುಡಿಗಿಯರನ್ನು ಮತ್ತು ಹುಡುಗರನ್ನು ಕರೆದುಕೊಂಡು ಬಂದು ಅವರಿಂದ ಹಣ ಕಿತ್ತುಕೊಂಡು, ಅವರಿಗೆ ರೋಪ್ ಹಾಕಿ ಕಳಿಸೋದು- ಈ ತರಹ ಎಲ್ಲಾ ಸಮಾಜದ್ರೋಹ ಕೆಲಸಗಳೆಲ್ಲ ನನ್ನ ಗಂಡ ಮಾಡ್ತಾನೆ ಅಂತನನಗೆ ಗೊತ್ತಾಯಿತು. ಆದರೆ ಪ್ರತಿಭಟಿಸೋ ಶಕ್ತಿ ಇಲ್ವಲ್ಲಾ ನನ್ನಲ್ಲಿ.

ದಿವಸಾ ರಾತ್ರಿಯಾಯಿತು ಅಂದರೆ ರೌಡಿಗಳನ್ನು

ಕರೆದುಕೊಂಡು ಬಂದು ಮನೆಯಲ್ಲಿ ಇಟ್ಟು ಕೊಂಡು ಮದ್ಯ ಕೊಡೋದು. ಇವರೆಲ್ಲ ಸೇರಿ ರಾತ್ರಿ ಮನೆಯಲ್ಲಿ ಒಂದು ಗಂಟೆ ತನಕ ಪಾರ್ಟಿ ನಡೆಸೋದು ಎಲ್ಲಾ ಇತ್ತು. ಹೀಗೇ ಹೆದರಿಕೆ ಹುಟ್ಟಿಸೋ ವಾತಾವರಣದಲ್ಲಿ, ನಾನ ಮಕ್ಕಳು ತುಂಬಾ ಭಯದಿಂದ, ಭಯದ ನೆರಳಲ್ಲೇ ಇದ್ವಿದ್ವಿ. ನಮಗೆ ನ್ಯಾಯವಾಗಿ ಬಟ್ಟೆಯಾಗಲಿ, ಆಹಾರವಾಗಲಿ ನಮ್ಮ ಅವಶ್ಯಕತೆಗೆ ಯಾವುದೂ ಕೊಡ್ತಾ ಇರ್ಲಿಲ್ಲ. ಕೇವಲ ಗುಲಾಮರಿಗಿಂತ ಕಡೆಯಾಗಿ ನನ್ನನ್ನು, ಮಕ್ಕಳನ್ನು ನೋಡಿಕೊಂಡು ಇದ್ದಿದ್ದು. ಹುಡುಗಿಯರನ್ನ ಕರೆದುಕೊಂಡು ಬರೋದು ಶುರುವಾಯ್ತು. ನರ್ಸ್ ಟ್ರೈನಿಂಗ್ ಅಡ್ಮಿಶನ್ ಕೊಡಿಸ್ತೀನಿ, ಬಿ.ಇಡಿ. ಅಡ್ಮಿಶನ್ ಕೊಡಸ್ತೀನಿ, ಅಥವಾ ಉದ್ಯೋಗ ಕೊಡಸ್ತೀನಿ ಈ ತರಹ ಭರವಸೆ ಕೊಟ್ಟು, – ಅವರ ತಂದೆ ತಾಯಿ ಅಥವಾ ಗಾರ್ಡಿಯನ್ ಜೊತೆ ಕರೆದುಕೊಂಡು ನೇರವಾಗಿ ಮನೆಗೆ ಬರೋದು. ಅವರನ್ನ ಅಲ್ಲಿ-ಇಲ್ಲಿ ಓಡಾಡಿಸೋದು. ಕೇರಳದಿಂದ ಬರುವವರಿಗೆ ಕನ್ನಡ ಅಥವಾ ಇಂಗ್ಲಿಷ್ ಅಷ್ಟು ಸರಿ ಗೊತ್ತಿರೋದಿಲ್ವಲ್ಲ. ಅಲ್ಲಿ ಇಲ್ಲಿ ಆಫೀಸ್‌ಗಳಿಗೆ ಹೋಗೋ ತರಹ ನಟನೆ ಮಾಡಿ ಅವರ ಕಡೆಯಿಂದ ದುಡ್ಡು ಕಸಿಯೋದು. ಆ ದುಡ್ಡು ಕಸಿದು 15 ದಿನ ಅಥವಾ ತಿಂಗಳು ಅವರ ಖರ್ಚಿನಲ್ಲಿ ಟ್ಯಾಕ್ಸಿ ಮುಂತಾದವುಗಳಲ್ಲಿ ಓಡಾಡೋದು. ಬಸ್ಸುಗಳಲ್ಲಿ ಓಡಾಡೋದಿಲ್ಲ. ಈ ರೀತಿ ಅವರಿಗೆ ತುಂಬಾ ಖರ್ಚು ಮಾಡಿಸೋದು. ಸಾಕು ಮಾಡಿಸಿಬಿಡುವುದು. ಅನಂತರ ತುಂಬಾ ಹತ್ತಿರದ ಒಂದು ಡೇಟ್ ಹೇಳಿಬಿಡ್ತಾನೆ. Appointment ಎಲ್ಲ ರೆಡಿ, ನಾನು ಕರೆದುಕೊಂಡು ಹೋಗಿ ಅಡ್ಮಿಟ್ ಮಾಡ್ತೀನಿ. ನೀವು ಯಾಕೆ ಕೊಳೀ ಬೇಕು ಅಂತ ಅವರಿಗೆ ಸಭ್ಯನ ಹಾಗೆ ಹೇಳಿಬಿಡ್ತಾನೆ. ಮೇಲ್ನೋಟಕ್ಕೆ ಈತ ಸಭ್ಯನ ಹಾಗೆ ವರ್ತಿಸಿ ದುಡ್ಡೆಲ್ಲ ಕಸೀತಾನೆ. ಹೀಗೆ ಹುಡುಗಿಯರನ್ನ ಒಂದು ತಿಂಗಳು, ಎರಡು ತಿಂಗಳು ಅಮ್ಮಮ್ಮಾ ಅಂದರೆ ಮೂರು ತಿಂಗಳು ಇಟ್ಟುಕೊಂಡು ಏನೇನೋ ನೆಪ ಹೇಳಿ ಕಳಿಸಿ ಬಿಡ್ತಾ ಇದ್ದರು. ಕಡೆಗೆ ಒಂದು ಹುಡುಗೀನ ಕರೆದುಕೊಂಡು ಬಂದರು. ಆ ಹುಡುಗಿ ಕೇರಳದ ಎರ್ನಾಕುಲಂ ಜಿಲ್ಲೆಯ ಮಾವಾಟ್ಟುಪುರ-ತೇಡಪುರ ತಾಲೂಕಿನ ಒಂದು ಹುಡುಗಿ. ಆ ಹುಡುಗಿ ಐದು attempt ಕಟ್ಟಿ S.S.L.C. ಪಾಸಾಗಿತ್ತು.

ಸ್ವಲ್ಪ ವಯಸ್ಸಾಗಿತ್ತು. ಆ ಹುಡುಗೀನಾ ಸೆಂಟ್ ಮಾರ್ಥಾಸ್‌ನಲ್ಲಿ ನರ್ಸ್ ಟ್ರೈನಿಂಗ್‌ಗೆ ಅಪಾಯಿಂಟ್‌ಮೆಂಟ್ ಕೊಡಸ್ತೀನಿ ಅಂತ ಮನೇನಲ್ಲಿ ಇಟ್ಟುಕೊಂಡರು. ಮನೆಯಲ್ಲಿ ಇಟ್ಟುಕೊಂಡು ಹುಡುಗಿಗೆ ಇಂಗ್ಲಿಷ್ ಸರಿಯಾಗಿ ಬರೋದಿಲ್ಲ ಟ್ಯೂಷನ್ ತಾನೇ ಹೇಳಿ ಕೊಡ್ತೀನಿ ಅಂತ ನೆಪ ಮಾಡಿಕೊಂಡು ದಿವಸಾ ಅವರು ಶಾಪಿನ ರೂಮಿನಲ್ಲಿ ಅನೈತಿಕ, ಅಕ್ರಮ ಸಂಬಂಧ ಪ್ರಾರಂಭವಾಯಿತು. ಹೀಗೆ ಒಂದು ದಿವಸ ನನಗೆ ಅನುಮಾನವಾಗಿ ಚಿಲಕದ ಬೋಲ್ಟ್ ಸ್ಕ್ರೂ ಎಲ್ಲ ತೆಗೆದು ಹಗಲು ಹೊತ್ತು ಮಲಗಿದ್ದೆ. ನಾನು ಮಲಗಿ ನಿದ್ದೆ ಹೋಯ್ತು ಅಂತ ಅವರು ಅನೈತಿಕ ಸಂಬಂಧ ಶುರು ಮಾಡಿದಾಗ ನಾನೇ ಹೋಗಿ ನೋಡಿಬಿಟ್ಟೆ. ನಾನು ಕೋಪ ತಡೆಯಲಾರದೆ ಬಯ್ದೆ. **ಬಯ್ದಾಗ ನಿನ್ನನ್ನು ಮುಗಿಸಿಬಿಡ್ತೀನಿ, ನಿನ್ನ ಮುಗಿಸಿಬಿಟ್ಟರೆ ಒಂದು ನಾಯಿನೂ ಕೇಳೋದಿಲ್ಲ. ಸಬ್ ಇನ್ಸ್‌ಪೆಕ್ಟರಿಗೆ, ಅಥವ ಸರ್ಕಲ್ ಇನ್ಸ್‌ಪೆಕ್ಟರಿಗೆ ಒಂದು ಎರಡೋ ಮೂರೋ ನೋಟು ಬಿಸಾಕಿದರೆ ಸಾಕು. ಅವು ಬಾಯಿ ಮುಚ್ಚಿಕೊಂಡು ಬಿದ್ದಿರ್ತದೆ. ನನಗೂ ಪೋಲೀಸ್‌ನವರೆಲ್ಲ ಪಾರ್ಟಿ ಕೊಡಿಸಿದವರೇನೇ. ಯಾರೂ ಏನೂ ಮಾಡೋಲ್ಲ. ಬಾಯಿ ಮುಚ್ಕೊಂಡು ಬಿಟ್ರೆ ನಿನ್ನ ಪ್ರಾಣ ಉಳಿದುಕೊಳ್ತದೆ. ಇಲ್ಲದೆ ಇದ್ದರೆ ನಿನ್ನ ಮುಗಿಸಿಬಿಡ್ತೀನಿ ಅಂತ ಉತ್ತರ ಕೊಟ್ಟರು.** ಆಮೇಲೆ ನಾನು ಕನಕಪುರದ ಮದರ್‌ಸುಪೀರಿಯರ್ ಇದಾರೆ ಅವರೊಂದಿಗೆ ಈ ವಿಷಯ ಹೇಳಿ ಅವರ ಸಹಾಯ ಪಡೆದು ನಂತರ ಅವಳನ್ನು ಮದರ್ ಸುಪೀರಿಯರ್ ಅಲ್ಲೊಂದು ಹೆರಿಗೆ ಆಸ್ಪತ್ರೆಯಲ್ಲಿ ಇರಿಸಿದರು. ಅದರೊಳಗಾಗಿ ಗರ್ಭಿಣಿಯಾಗಿದ್ದ ಈ ಹುಡುಗೀನ ಎಲ್ಲೋ ಕರೆದುಕೊಂಡು ಹೋಗಿ ನನ್ನ ಗಂಡನೇ ಅಬಾರ್ಷ ಮಾಡಿಸಿದ್ದರು. ಅಷ್ಟರೊಳಗೆ ಈ ಹುಡುಗಿಗೆ ಎಲ್ಲೋ ಒಂದು ಪ್ರೈವೇಟ್ ಚಿಟ್‌ಫಂಡ್‌ನಲ್ಲಿ ಕೆಲಸ ಕೊಡಿಸಿ, ಅವಳನ್ನು ರಿಜಿಸ್ಟರ್ ಮಾಡಿಕೊಂಡು, ರೂಮು ಮಾಡಿ, ಬೆಂಗಳೂರಿನಲ್ಲಿಯೇ ಇಟ್ಟುಕೊಳ್ಳೋ ಏರ್ಪಾಟು ಆಗಿತ್ತು. ಆವಾಗ ಹುಡುಗಿಯ ತಂದೆ ಅವರ ಕಡೆಯವರಿಗೆ ಅನುಮಾನವಾಯಿತು. ಒಂದೂವರೆವರ್ಷದಲ್ಲಿ ಅವರಿಂದ 7 ಸಾವಿರ ರೂಪಾಯಿಯವರೆಗೆ ಈತ ಇಸಿದುಕೊಂಡಿದ್ದರು. ಇವನು ಕೊಟ್ಟರೋ ಭರವಸೆಯೆಲ್ಲಾ ಸುಳ್ಳು ಎಂದು ಅವರಿಗೆ ಅನುಮಾನವಾಗಿ ಅವರಾಗೇ ಬಂದು ಈ ಕೂಡಲೇ ಹುಡುಗೀನ ಕಳಿಸಿಕೊಡಬೇಕೆಂದು ಹಟ ಹಿಡಿದರು. ಉಪಾಯಮಾಡಿ ಅವರ ಹುಡುಗಿನ ಕರೆದುಕೊಂಡು ತಮ್ಮ ವಶಪಡಿಸಿಕೊಂಡರು. ನಂತರ ದುಡ್ಡಿನ ವಿಷಯಕ್ಕೆ ಮತ್ತೆ ಹಾರೋಹಳ್ಳಿಗೆ

ಬಂದರು. ನನ್ನ ಗಂಡನಿಗೂ, ಅವರಿಗೂ ಮಾತಿಗೆ ಮಾತಾಗಿ ಜಗಳ ನಡೀತು. ತುಂಬಾ ಜಗಳ ನಡೆದು, ಕನಕಪುರ ಬ್ಯಾಂಕಿನಲ್ಲಿ ನನ್ನ ದುಡ್ಡು ಇದೆ ತಂದು ಕೊಡ್ತೀನೆ ಎಂದು ಆವಾಗ ಹೋದ ವ್ಯಕ್ತಿ ಮತ್ತೆ 1 ತಿಂಗಳು 23 ದಿವಸದ ಮೇಲೆ ವಾಪಸ್ಸು ಬಂದಿರೋದು, ಹಾರೋಹಳ್ಳಿಗೆ. ಈ ಹುಡುಗಿ ಕಡೆಯವರು ಆರು ದಿವಸ ನಮ್ಮ ಮನೆಯಲ್ಲೇ ಸತ್ಯಾಗ್ರಹ ಕೂತ್ಕೊಂಡು, - ಸಾಕಾಗಿ, - ವಾಪಸ್ಸು ಹೊರಟು ಹೋದರು. ನನ್ನ ಗಂಡ ತವರ ಮನೆಗೆ ಹೋಗಿರೋದು ಗೊತ್ತಾಗಿ ಆ ಹುಡುಗಿ ಕಡೆಯವರು - ಒಂದು ಬೆಳಿಗ್ಗೆ 6 ಗಂಟೆಯ ಸಮಯದಲ್ಲಿ, ನನ್ನ ಗಂಡ ಇನ್ನೂ ಮಲಗಿರೋ ಹೊತ್ನಲ್ಲಿ ಮನೆಗೆ ಬಂದು ತುಂಬಾ ಗಲಾಟೆ ಮಾಡಿದರು ಕೊಟ್ಟಿರೋ ಹಣಕ್ಕೆ.

ಆ ನಂತರ ನಾನು ಆ ಹುಡುಗೀಗೆ ಬರೆದ ಪತ್ರ ಅವರ ಅಪ್ಪನಿಗೆ ಸಿಕ್ಕಿ - ಅವರಿಗೂ - ನನ್ನ ಗಂಡನಿಗೂ ತುಂಬಾ ಗಲಾಟೆ ನಡೆಯಿತು. ಆವಾಗಿನಿಂದ ಅವನು ನನ್ನ ಮೇಲೆ ಸೇಡು ತೀರಿಸಿಕೊಳ್ಳೋದು ಮೊದಲಿಗಿಂತ ಜಾಸ್ತಿ ಆಯ್ತು. ಮನೆಯಲ್ಲೇ ನನಗೂ - ಅವನಿಗೂ ಸವಾಲು ಶುರುವಾಯ್ತು. ನನ್ನ ಮನೆ ನಾನಿಷ್ಟ ಬಂದ ಹಾಗೆ ಮಾಡ್ತೀನಿ, ನೀನು ನನ್ನನ್ನು ಕೇಳೋ ಹಕ್ಕಿಲ್ಲ ಎಂದು ಇವನು ನನಗೆ ಬೆದರಿಸೋದು ಶುರುವಾಯ್ತು. ಆಮೇಲೆ ನಾನೂ ಸವಾಲು ಹಾಕ್ದೆ. ನೀನು ಇನ್ನು ಮೇಲೆ ಯಾವುದೇ ಹುಡುಗಿ ಕರೆದುಕೊಂಡು ಬರಲಿ, ಬಂದ ತಕ್ಷಣ ಅವರ parentsಗೆ ನಾನೇ ಅವರ ಎದುರಿಗೇ ಹೇಳಿಬಿಡ್ತೀನಿ - ನೀನು ಮೋಸಗಾರ, ನಿನ್ನ ಜೊತೆಯಲ್ಲಿ ಯಾವುದೂ ವ್ಯವಹಾರ ನಡೆಸಬೇಡ ಅಂತ ನಾನೇ ಹೇಳ್ತೀನಿ ಅಂತ - ಎದುರಿಗೇ - ನನಗೂ, ಅವನಿಗೂ ಸವಾಲಾಯ್ತು. **ಇವನು - ಆ ಕ್ಷಣ ಈ ಮನೆಯಿಂದ ನಿನ್ನ ಹೆಣ ಎತ್ತುತೀನಿ, ನಿನ್ನ ಹೆಣ ಎತ್ತುದೋಕೆ ಪೆಟ್ಟಿಗೆ ಕೂಡಾ ನಾನು ಏರ್ಪಾಟು ಮಾಡಿದೀನಿ. ನಾನೇನು ಪುಕ್ಕಟೆ ನಿನ್ನ ಮಗ ಅಲ್ಲ ಅಂತ ತನ್ನಷ್ಟಕ್ಕೇ ತಾನು ಜಂಬ ಕೊಚ್ಚಿ ಕೊಳ್ತಾ ಇತ್ತು.** ಹೀಗೆ ವ್ಯವಹಾರ ನಡೀತಿದ್ದ ಹಾಗೆ, ಒಂದು ದಿವಸ ಹೋದ ವ್ಯಕ್ತಿ - ಮೂರನೇ ದಿನ ನನ್ನ ತಂಗಿಯೊಂದಿಗೆ ಬಂದಿಳಿದರು. ರಾತ್ರಿ ಸುಮಾರು 10 ಗಂಟೆಯಾಗಿತ್ತು. ನನಗೆ ತುಂಬಾ ಸೀರಿಯಸ್ ಆಗಿ ನಾನು ಸೆಂಟ್ ಮಾರ್ಥಾಸ್‌ಗೆ ಅಡ್ಮಿಟ್ ಆಗಿದೀನಿ ಅಂತ ಕರೆದುಕೊಂಡು ಬಂದ. ನನ್ನ ತಂಗೀನ ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸಿದ. ಆಗದಿದ್ದಾಗ - ಅವಳನ್ನು ಕೆಡಿಸಬೇಕಂತ ಒಂದು ರಾತ್ರಿ ಪ್ರಯತ್ನಿಸಿದಾಗ - ಆಕೆ ಪ್ರತಿಭಟಿಸಿ ಹೊರಗೆ ಓಡಿಹೋದಳು. ಆ ರೋಷದಲ್ಲಿ ಅವನು ನನ್ನನ್ನು ಮನೆಯಿಂದ ಆಚೆ ತಳ್ಳಿದ. ನನ್ನ ತಂಗೀಗೆ ಪಕ್ಕದ ಮನೆಯವರು ರಕ್ಷಣೆ ಕೊಟ್ಟರು. ನಾನು-ಮಕ್ಕಳು ಎಲ್ಲ ಮಳೆಯಲ್ಲಿ ಈಚೆನೇ ಕೂತ್ಕೊಂಡಿದ್ವಿ.

ಮೂರು ಗಂಟೆ ಹೊತ್ತಿಗೆ ಮಳೆಯಲ್ಲಿ ಕೂತು ಸಾಕಾಗಿ ಮಕ್ಕಳು ಪೊಲೀಸ್ ಸ್ಟೇಷನ್‌ಗೆ ಹೋದರು. ಪೊಲೀಸರು ಕೊನೆಗೆ ಬಂದಾಗ 3-30 ಅಥವಾ 4 ಗಂಟೆಯಾಗಿತ್ತು. ಪೊಲೀಸರು ಹೇಳಿದರೆ, – ಅವಳು ಯಾಕೆ ಆಚೆ ನಿಂತಿರೋದು ಅಂತ ಅವಳನ್ನೇ ಕೇಳು. ನಿಮ್ಮ ಹೆಂಡ್ತೀದಿರು ಕಂಡವನ ಹತ್ತಿರ ಹೋಗಿ, ಇಷ್ಟ ಬಂದಾಗ ಮನೆಗೆ ಬಂದರೆ ಮನೆಗೆ ಸೇರಿಸ್ತೀಯ ? ಅವಳು ಕೋರ್ಟಿಗೆ ಹಾಕಲಿ. ಕೋರ್ಟ್ ಉಂಟು, ಅವಳುಂಟು. ಮನೆ ಅವಳಿಗೆ ಬಂದರೆ ಅವಳದು, ನನಗೆ ಬಂದರೆ ನಂದು, ಹೀಗೆ ಸವಾಲಾಕಿ ಬಾಗಿಲು ಹಾಕಿಕೊಂಡರು. ಕೊನೆಗೆ ಪಕ್ಕದ ಮನೆಯವರೆಲ್ಲ ಬಂದು ರಾಜಿ ಮಾಡಿ, ನಾವು ಒಳಗೆ ಹೋದೆವು. ಹೀಗೆ ಹಲವಾರು ದಿವಸದ ಪ್ರಸಂಗಗಳು ಆಯಿತು.

ಈ ರೀತಿ ಮೋಸ ಮಾಡಿ, ಕೇರಳದಿಂದ ಹುಡುಗಿಯರನ್ನು ಕರೆದುಕೊಂಡು ಬರುವುದಾದರೆ, ಎಲ್ಲಾ ಮಲೆಯಾಳ ಪೇಪರುಗಳಿಗೂ ನಿನ್ನ ಫೋಟೋ ಸಹಿತ ಅಡ್ವರ್ಟೈಸ್‌ಮೆಂಟ್ ಕೊಡ್ತೀನಿ, ನೀನು ಮೋಸಗಾರ ಅನ್ನೋದು ಎಲ್ಲಾ ಜನಕ್ಕೆಲ್ಲ ತಿಳೀಲಿ ನೀನು ಕೇರಳಕ್ಕೆ ಕಾಲಿಡದ ಹಾಗೆ ಮಾಡ್ತೀನಿ ಅಂತ ನಾನೂ ಅವನಿಗೆ ಸವಾಲು ಹಾಕಿದೆ. ಆಗ ಅವರು ಹೇಳಿದರು, ಕನಕಪುರ ಚರ್ಚಿಗೆ ನಿನ್ನ ಹೆಣ ಎತ್ತುತೀವಿ ಎಂದರು. ಹೀಗೆ ಇದ್ದಾಗ ಆಮೇಲೆ ಒಂದಷ್ಟು ದಿನದ ಮೇಲೆ ಪರಾರಿಯಾದರು. ಪರಾರಿಯಾದವರು ಎಷ್ಟೋ ದಿನದ ಮೇಲೆ ಬಂದರು. ಆಮೇಲೆ ಹೇಳಿದರು ಕರ್ನಾಟಕ ಮೆಡಿಕಲ್ ಅಸೋಸಿಯೇಷನ್‌ನಿಂದ ನಾನು ಆಲ್ ಇಂಡಿಯಾ ಟೂರ್‌ಗೆ ಹೋಗ್ತೀನಿ. ಸ್ವಲ್ಪ ದಿನಗಳ ನಂತರ ಬರೋದು ಅಂತ ಹೇಳಿ ಹೋದವರು, ಆರು ತಿಂಗಳ ಮೇಲೆ ಬಂದರು. ಮಧ್ಯಪ್ರದೇಶದ ಯದುಗಲ್‌ಪುರ ಬಿಷಪ್‌ನ ಆಶ್ರಮದ ಆಸ್ಪತ್ರೆ ಇದೆ. ಅಲ್ಲಿ ನನಗೆ ಕೆಲಸ ಸಿಕ್ಕಿದೆ. ಅಲ್ಲಿ ಬಹಳ ಸುಖವಾಗಿ

ಇದೆ. ಅಲ್ಲೇ ಇರ್ತೀನಿ ಅಂದರು. ಹೋದವರು ಕಾಗದ ಪತ್ರ ಏನೂ ಬರೀಲಿಲ್ಲ. ನಾನು ಬರೆದ ಪತ್ರಗಳಿಗೆ ಉತ್ತರ ಬರೀಲಿಲ್ಲ. ಬಹಳಷ್ಟು ದಿನಗಳ ನಂತರ ಮತ್ತೆ ಬಂದರು. ಚಂಬಲ್ ಕಣಿವೆಯ ದರೋಡೆಕೋರರ ತರಹ ಅವರು ನನಗೆ ಅನ್ನಿಸುತ್ತಿತ್ತು - ನೋಡಿದರೆ. ಮತ್ತೆ ಹೋಗುವಾಗ, – ಇಲ್ಲಿ ಮನೆ ಎಲ್ಲ ಮಾರಿಬಿಡೋಣ ಮಧ್ಯಪ್ರದೇಶಕ್ಕೆ ಹೋಗಿಬಿಡೋಣ, ಅಲ್ಲಿ ಕಲೆಕ್ಷನ್ (collection) ಚನ್ನಾಗಿದೆ. ಪ್ರಾಕ್ಟೀಸ್ ಚನ್ನಾಗಿದೆ. ಒಂದು ದಿನಕ್ಕೆ 500/600 ಕಲೆಕ್ಷನ್ ಇದೆ. ಮಕ್ಕಳನ್ನೆಲ್ಲ ಇಲ್ಲಿ ಬೆಂಗಳೂರು ಕಾಲೇಜಿಗೆ ಸೇರಿಸಿ ಹಾಸ್ಟೆಲ್‌ಗೆ ಸೇರಿಸೋಣ. ನಾನು ಅಲ್ಲಿ ಸೈಟ್ ತೆಗೆದು ಕೊಂಡಿದೀನಿ. ಹಾಗೆ-ಹೀಗೆ ಎಲ್ಲ ಹೇಳಿ - ಭರವಸೆ ಕೊಟ್ಟು ಹೋದರು. ಮದ್ರಾಸ್ - ವಿಶಾಖಪಟ್ಟಣ ರಿಸರ್ವ್ ಮಾಡಿದ ಟಿಕೆಟ್ ಕೂಡಾ ನನಗೆ ಕೊಟ್ಟು ಹೋದರು. ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗಬೇಕೆಂತನೂ ಬಂದಿದ್ದರು.

ಆದರೆ ಕನಕಪುರ ಚುನಾವಣೆ ಮುಖ್ಯ ಚುನಾವಣೆ - ರಾಮಕೃಷ್ಣ ಹೆಗಡೆ ನಿಂತಿದ್ದರಲ್ಲ ಆ ಚುನಾವಣೆಯಲ್ಲಿ ಓಟು ಹಾಕದೇ ನಾನು ಬರೋದೇ ಇಲ್ಲ ಅಂತ ಹೇಳಿದೆ. ಯಾಕೆಂದರೆ ಅಲ್ಲಿನ ಜನತಾ ಪಕ್ಷದವರು ನಮಗೆ ವ್ಯಕ್ತಿಗತವಾಗಿ ಉಪಕಾರ ಮಾಡಿದ್ದಾರೆ. ಆದರಿಂದ ಓಟು ಹಾಕದೇ ನಾನು ಬರೋದೇ ಇಲ್ಲ. ನೀವೂ ಓಟು ಹಾಕಿ ಹೋಗಿ ಅಂದರೆ - ಓಟನಿಂದ ನನಗೇನು ಆಗ್ಬೇಕು. ನನ್ನ ಪ್ರಾಕ್ಟೀಸ್ ಹಾಳಾಗಿ ಹೋಗ್ತಿದೆ ಅಂತ ಓಟು ಮೂರು ದಿನ ಇದ್ದ ಹಾಗೆ ಹೊರಟುಹೋದರು. ಎಲೆಕ್ಷನ್ ಆಗಿ ಮೂರನೇ ದಿನಕ್ಕೆ ಸರಿಯಾಗಿ ಒಂದು ಪತ್ರ ತಲುಪಿತು – ಜಗದಲ್‌ಪುರದ ಬಿಷಪ್-ನಜರತ್ ಆಶ್ರಮದ ಆಸ್ಪತ್ರೆಯ ಗುರುಗಳಿಂದ. ಇದು, ನೀವು ಈ ಕಾಗದವನ್ನು ಓದಿ ಬೆರಗಾಗಬೇಡಿ, ಅಥವಾ ನೀವು ದುಃಖ ಪಡಬೇಡಿ. ಮುಂದಿನ ಕ್ರಮ ಏನು ಅಂತ ನೋಡಿಕೊಳ್ಳಿ. ತಿಳಿಸೋ ವಿಚಾರ ಏನೆಂದರೆ, ನಿಮ್ಮ ಯಜಮಾನರು - ಡಾಕ್ಟರ್ ಜಾನ್ ಪಾಯ್ ಕಾಟರು ಒಂದು ಹುಡುಗಿ - ಅಂದಾಜು 30-35 ವರ್ಷದ ಮಲೆಯಾಳಿ ಯುವತಿಯನ್ನು ಅಗಸ್ಟ್‌ನಲ್ಲಿ ತಮ್ಮ ಹೆಂಡತಿ ಎಂದು ಕರೆತಂದರು. ಹೆಸರು ಮೇರಿ ಎಂದು. ಕೊಟ್ಟಂ, ಪಾಲಂ, ರಾಮಪುರಂ ಕಡೆಯವರು ಅಂತಾರೆ. ಆಕೆ ನಿಜವಾದ ಹೆಂಡತಿ ಅಲ್ಲ ಅಂತ ಗೊತ್ತಾಗಿದೆ. ಅವನು ಅಲ್ಲಿ ಜಗಳ ಮಾಡಿಕೊಂಡು ಮಧ್ಯಪ್ರದೇಶದ ಸುಗಮ – ಒರಿಸ್ಸಾ – ಆಂಧ್ರಪ್ರದೇಶ ಮೂಲೆಯಲ್ಲಿ ಈ ಟೌನ್ ಬರ್ತದೆ, ಅಲ್ಲಿ ವಿಜಯ ಎಂಬ ಹೆಸರಿನಲ್ಲಿ ನರ್ಸಿಂಗ್ ಹೋಂ ಓಪನ್ ಮಾಡಿ ಈ ಹೆಂಗಸಿನೊಟ್ಟಿಗೆ ಇರುವುದಾಗಿಯೂ ಬಿಷಪ್ ಪತ್ರ ಬರೆದರು. ನಾನು ನೊಂಡು ಧೈರ್ಯ ಮಾಡಿಕೊಂಡು, ಮಕ್ಕಳನ್ನೆಲ್ಲ ಕರೆದುಕೊಂಡು – ಮಧ್ಯಪ್ರದೇಶದಲ್ಲಿ ನನ್ನ ಗಂಡ ಇರೋ ಕಡೆಗೆ ಹೋದೆ. ಎರಡನೇ ಹೆಂಡತಿಗೆ ಹೆರಿಗೆ ತವರು ಮನೆಗೆ ಬಿಟ್ಟು ಬಂದಿದ್ದಾರೆ. ನಮ್ಮನ್ನು ನೋಡಿ ಭಯ ಗಾಬರಿ – ಭಯ – ಒಂಥರಾ ಆಯ್ತು. ಮದುವೆಯಾಗೇ ಇಲ್ಲ ಅಂತ ಹೇಳಿದ. ಆ ಊರಿನವರೆಲ್ಲ ಸುಳ್ಳು ಹೇಳ್ತಾರೆ ಎಂದರು. ನಮಗೆಲ್ಲ ಗೊತ್ತಾಯ್ತು ಎಂದ ಮೇಲೆ, ಕೊನೆಗೆ ಅಲ್ಲಿದ್ದ ಆವಳ ಫೋಟೋ ತೋರಿಸಿ ಆ ಫೋಟೋ ತೆಗೆದುಕೊಂಡು ಹೋಗಿ ಪೂಜೆ ಮಾಡಿಕೋ ನಾನು ಅವಳನ್ನು ಮದುವೆಯಾಗಿದ್ದೀನಿ, ನನ್ನ ಹೆಂಡ್ತೀನ ಯಾರೂ ಏನೂ ಕಿತ್ತುಕೊಳ್ಳೋದಿಲ್ಲ ಎಂದರು. ಯಾರಿಗಾದರು 100-200 ಕೊಟ್ಟು ಮುಗಿಸಿಬಿಟ್ಟರೆ ಕಷ್ಟ ಆಗ್ತಾದಲ್ಲ ಎಂದು ನಾವು ಅಲ್ಲಿಂದ ವಾಪಸ್ ಬಂದು ಬಿಟ್ವಿ. ಅಲ್ಲಿಂದ ಅವರು ಗಂಟೂಮೂಟೆ ಕಟ್ಟಿಕೊಂಡು ಕೇರಳಕ್ಕೆ ಹೋದರು. ಬೆಂಗಳೂರಿಗೆ ಹೋಗ್ತೀನಿ ಅಂತ ಅಲ್ಲಿಯ ಜನಕ್ಕೆ ಹೇಳಿ.

ಬೆಂಗಳೂರು ಅಡ್ರೆಸ್ ಕೊಟ್ಟಿದ್ದರು. ಕೇರಳಕ್ಕೆ ಹೋಗಿ 2ನೇ ಹೆಂಡ್ತಿ ಮನೆಯಲ್ಲಿ ಕೂತುಕೊಂಡು ಎರಡು ಮೂರು ಬೆದರಿಕೆ ಪತ್ರ ಬರೆದರು. ಮನುಷ್ಯನಿಗೆ ನಾಚಿಕೆ ಯಾಗುವ ರೀತಿಯಲ್ಲಿ ಪತ್ರ ಬರೆದರು. ನನ್ನ ಮೇಲೆ ಕಳ್ಳತನದ ಆರೋಪ ಹೊರಿಸಿ, 3 ಪತ್ರ ಬರೆದರು. ಪೋಸ್ಟ್ ಮೇಲೆ ಕೊಟ್ಟಾಯಂ, ರಾಮಪುರಂ ಸೀಲು ಇತ್ತು. ನಾನು ಎರಡನೇ ಹೆಂಡ್ತಿಗೆ ಪತ್ರ ಬರೆದೆ. ನನ್ನ ಗಂಡನನ್ನ ನನಗೆ ದಾನ ಮಾಡಿ ಎಂದೆಲ್ಲ ಬರೆದೆ. ಅವರೂ ನನಗೆ ಬೆದರಿಕೆ ಪತ್ರ ಬರೆದರು. ಈ ಮಧ್ಯ ಸಂಧಾನಕ್ಕೆ ಬಹಳ ಶ್ರಮ ನಡೆಯಿತು. ಆ ನಂತರ ನಾನು ಲಾಯರ್ ನೋಟೀಸ್ ಕಳಿಸಿದೆ. ಅಷ್ಟರಲ್ಲಿ ಅವನು ಅಲ್ಲಿಂದ ಓಡಿ ಹೋಗಿದ್ದ. ಗೋವಾದಲ್ಲಿದ್ದಾನೆ ಎಂದು ಗೊತ್ತಾಯಿತು. ನಾವು ಕೇಸ್ ಫೈಲ್ ಮಾಡಿದ ನಂತರ, ಅಲ್ಲಿ, ಇಲ್ಲಿ ಬಂದು ನಮ್ಮ ರೂಟ್ ತಪ್ಪಿಸೋದು ಶುರುವಾಯ್ತು. ತುಂಬಾ ಉಪಕಾರ ಮಾಡುವ ಹಾಗೆ ಬಹಳಷ್ಟು ಜನ ಕೇಸಿನ ಸಂಬಂಧದಲ್ಲಿ ನನಗೆ ಮೋಸ ಮಾಡಿದರು. ಕೊನೆಗೆ ಕಲಾವತಿ ಅವರಿಂದ ವಿಮೋಚನಾ ಅಡ್ರೆಸ್ ದೊರೆ ಯಿತು. ಅವರ ಸಹಾಯ ಪಡೆದೆ. ಮೊದಲು ಜೀವ-

ನಾಂಶ ಕೇಸ್ ಹಾಕಿದ್ವಿ. ನಂತರ ನಮಗೆ ಸೋಲಾಯಿತು—ಆ ರೀತಿ ಯಾವ ಲಾಯರ್ ಕೋರ್ಟ್ ಸಹಾಯ ಮಾಡೋದಿಲ್ಲ. ಕೊನೆಗೆ ಜೀವನಾಂಶದ ಜೊತೆಗೆ ಬಿಗಮಿ ಕ್ರಿಮಿನಲ್ ಕೇಸ್ ಹಾಕಿದಾಗ ಬೇರೆ ತಿರುವು ಸಿಕ್ಕಿತು. ನಂತರ ಕರ್ನಾಟಕ ಪೋಲೀಸಿನವರ ಸಹಾಯದಿಂದ ಅವರು ಕೋರ್ಟಿಗೆ ಸರೆಂಡರ್ ಆದರು. ಎಲ್ಲಾ ಸುಳ್ಳು ಆಪಾದನೆಗಳು ಅಂತ ಕೋರ್ಟಿನಲ್ಲಿ ಹೇಳಿಕೆ ಕೊಟ್ಟರು. ರಿಜಿಸ್ಟರ್ ಮದುವೆಯಾದ ದಾಖಲೆ ದೊರೆತ ಮೇಲೆ ಜುಲೈ ಮೂರರಂದು ಮತ್ತೆ ಕನಕಪುರದಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಕರೆಸಿಕೊಂಡರು. ಆ ಡೇಟ್‌ಗೆ 15 ದಿನ ಮೊದಲು ಬಂದು ಅವರೆಲ್ಲ ಕನಕಪುರದಲ್ಲಿ ಕ್ಯಾಂಪು ಮಾಡಿಕೊಂಡಿದ್ದಾರೆ. ಕ್ಯಾಂಪು ಮಾಡಿಕೊಂಡಿರೋ ವ್ಯಕ್ತಿ ಕನಕಪುರದ ಚರ್ಚಿನ ಗುರುಗಳಿದ್ದಾರೆ ವಿಚಾರಣಾ ಸ್ವಾಮಿಗಳು ಆ ವಿಚಾರಣಾ ಸ್ವಾಮಿಗಳನ್ನು ನಮ್ಮ ಮನೆಗೆ ಕಳಿಸಿ—ಈ ರೀತಿ ನಿಮ್ಮ ಯಜಮಾನರು ಬಂದಿದ್ದಾರೆ ತಾವು ಮಾಡಿರೋದೆಲ್ಲ ತಪ್ಪುಅಂತ ಪಶ್ಚಾತ್ತಾಪ ಪಡ್ಕೊಂಡಿದ್ದಾರೆ ಎರಡನೆ ಹೆಂಡ್ತೀನ ಬಿಟ್ಬಿಟ್ಟು ನಾನು ಮೊದಲನೇ ಹೆಂಡ್ತಿಯೊಂದಿಗೆ ಕೂಡಿ ಬಾಳೋದಕ್ಕೆ ಇಷ್ಟಪಡುತ್ತಾ ಇದ್ದೀನಿ. ನನ್ನಿಂದೆಲ್ಲ ತಪ್ಪಾಯ್ತು. ನನ್ನನ್ನು ಕ್ಷಮಿಸಬೇಕು ಅಂತ ಹೇಳಿ ಪತ್ರ ಬರೆದಿದ್ದಾರೆ. ಈ ತರಹ ನನ್ನ ಗಂಡ ಬಂದಿದ್ದಾರೆ, ಭೇಟಿಯಾಗಿದ್ದರು ಅಂತ ಗುರುಗಳು ಹೇಳಲಿಲ್ಲ. ಆತನಿಂದ ನನಗೊಂದು ಪತ್ರ ಬಂದಿದೆ. ಅಂತ ಹೇಳಿದರು. ಆದರೆ ಪತ್ರ ಬಂದಿದೆ ಎಂದರೆ ನಮಗೆ ನಂಬೋದಕ್ಕೇ ಸಾದ್ಯವಾಗಲಿಲ್ಲ. ನನಗೆ ಅನುಮಾನವಾಯ್ತು. ಕೇಸು ಇನ್ನು ಮೂರು ನಾಲ್ಕು ದಿನ ಮಾತ್ರ ಕೇಸಿನ ತಾರೀಕು ಇರೋದು. ಆ ಸಮಯದಲ್ಲಿ ಪತ್ರ ಬರೆಯೋದೇ ಇಲ್ಲ ಅನ್ನೋದು ನನಗೆ ಖಂಡಿತಾ ಗೊತ್ತಿತ್ತು ಪತ್ರ ಬರೆದಿಲ್ಲ, ಪತ್ರ ಬಂದಿದೆ ಎಂದು ಗುರುಗಳು ಸುಳ್ಳು ಹೇಳಿದರು. ಬಂದು ಎದರು-ಬದರು ನಿಂತು ಮಾತಾಡಲಿ ಗುರುಗಳ ಬಳಿ ರಾಜಿಯಾಗಲಿ....

○ ○ ○ ○ ○ ○ ○

ಸಿಸಿಲಿಯಮ್ಮ ತೀರಾ ಮುಗ್ಧ ಹೆಂಗಸಾಗಿರಲಿಲ್ಲ. ಪ್ರಪಂಚ ಗೊತ್ತಿದ್ದ ಹೆಂಗಸು. ರಾಜಕೀಯ ಬಲ್ಲ ಹೆಂಗಸು. ಕೋರ್ಟು, ಕಛೇರಿ, ಪೋಲಿಸ್ ಠಾಣೆಗಳಲ್ಲಿ ತಲೆಯೆತ್ತಿ ನಿಂತು ಮಾತನಾಡಬಲ್ಲ ಧೈರ್ಯಸ್ಥೆಯಾಗಿದ್ದರು ನೂರಾರು ಮಹಿಳೆಯರ ನೋವುಗಳನ್ನು —ಕಾಳಜಿಯಿಂದ, ಕಳಕಳಿಯಿಂದ, — ಆಸ್ಥೆಯಿಂದ ಗುಣಪಡಿಸುತ್ತಿದ್ದ ಹೋಮಿಯೋಪತಿ ಬಲ್ಲ ವೈದ್ಯ ಹೆಂಗಸು ಅವರೊಡನೆ ಒಡನಾಡಿದ ಪ್ರತಿಯೊಬ್ಬರಲ್ಲೂ ಹೋರಾಟದ ಚಿಲುಮೆಯನ್ನು ಉಕ್ಕಿಸುತ್ತಿದ್ದ ಹೆಣ್ಣು. ಗೊತ್ತಿಲ್ಲ—ಈ ಹೋರಾಟದ ಚಿಲುಮೆ ಯಾವ ಕ್ಷಣದಲ್ಲಿ ಅವರಲ್ಲಿ ಮಂಕಾಯಿತೋ ? ಯಾಕಾಗಿ ಸಿಸಿಲಿಯಮ್ಮ ತಾವಾಗಿಯೇ ಮೃತ್ಯವನ್ನು ಆಹ್ವಾನಿಸಿದರೋ ? ಬದುಕಿದ್ದಾಗ ಅವರಿಗೆ ಸಿಕ್ಕದಿದ್ದ ನ್ಯಾಯ ಈಗ ಮೃತ್ಯುವಿನ ಮಡಿಲಿನಲ್ಲಿ ಸಿಗುತ್ತದೆಯೇ ? ಕಾನೂನು ಎಲ್ಲ ಸೂಕ್ಷ್ಮ ಅಂಶಗಳನ್ನು ಗಮನಿಸಿ, ಅವರಿಗೆ ನ್ಯಾಯ ಒದಗಿಸುತ್ತದೆಯೇ ? ಶಾನಿ, ರೋಬಿ, ರೋಸಲೀನ್‌ರ ಭವಿಷ್ಯ ಏನು ? ಕಾನೂನಿನ ಯಾವ ಕಕ್ಷೆಯಲ್ಲಿ ಈ ಅನಾಥ ಮಕ್ಕಳು ರಕ್ಷಣೆ ಪಡೆಯುತ್ತಾರೋ ಕಾದು ನೋಡಬೇಕು.

(ಮಳೆಯಾಳಂ ಭಾಷೆಯ ಹಿನ್ನೆಲೆಯಲ್ಲಿ ಕನ್ನಡ ಮಾತನಾಡುತ್ತಿದ್ದ ಸಿಸಿಲಿಯಮ್ಮನ ಕನ್ನಡ ಭಾಷೆಯನ್ನು ಹಾಗೆಉಳಿಸಿ ಕೊಂಡಿದ್ದೇನೆ. ಕೆಲವು ಕಡೆ, ಪುನರಾವರ್ತಿತವಾದ ಕೇಸ್‌ಗೆ ಸಂಬಂಧಪಟ್ಟ ವಿವರವಾದ, ಹಾಗೂ ಕೆಲವು ಭಾಗಗಳನು ನನ್ನ ಭಾಷೆಯಲ್ಲಿ ಸಂಕ್ಷಿಪ್ತಗೊಳಿಸಿದ್ದೇನೆ. ಕೆಲವು ಚಿಕ್ಕ ಪುಟ್ಟ ಬದಲಾವಣೆಗಳನ್ನು ಬಿಟ್ಟರೆ ಉಳಿದ ಭಾಗವೆಲ್ಲಾ ಸಿಸಿಲಿಯಮ್ಮನ ಮಾತಿನಲ್ಲಿಮೂಡಿ ಬಂದದ್ದು.)

ಆಡು—ಮಾತಾಡು—

ಕೇಳುತ್ತ,
ಭರವಸೆಗಳ ಸೋಲು,

ಒಳಗೆ ರೋದಿಸಿ,
ಹೊರಗೆ ಮೂಕಿಯಾದವಳಿಗೆ

ಆಡು, ಮಾತಾಡೆಂದರೇನಾಡಿಯಾಳು
ವಿಷಾದದ ಹಾಡ ಬಿಟ್ಟು ?

ಜಿ ಪಿ. ಶೈಲಜ

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮೊದಲ ಬಾರಿಗೆ ಬರೆಯಲು ಯತ್ನಿಸುವ ಲೇಖಕಿ-ಲೇಖಕರಿಗಾಗಿ " ಮೌನ ಮಾತಾದಾಗ " ಅಂಕಣವಿದೆ. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನ ವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗೂ ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿ ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

ಸಂ. ಮಂಡಳಿ

ಹೀಗೊಂದು ಪಯಣದಲಿ

ಜನಜಂಗುಳಿಯಿಂದ ನರಳುತ್ತಿರುವ ಬಸ್ಸು ನಿಲ್ದಾಣದಲ್ಲಿ ಬದುಕಿನ ನಾನಾ ರೂಪಗಳು ಬಟ್ಟಬಯಲಾಗುತ್ತಿವೆ. ಅವರವರ ಉಸಾಬರಿ ಅವರವರಿಗೆ. ಬಸ್ಸಿನಲ್ಲಿ ಸೀಟು ಹಿಡಿಯುವುದು ಒಬ್ಬನ ಚಿಂತೆ, ಬಸ್ಸು ಹೊರಡುವುದರಲ್ಲಿ ನಾಲ್ಕು ಕಾಸು ಮಾಡಿಕೊಳ್ಳಲು ಮತ್ತೊಬ್ಬನ ಚಿಂತೆ. ಜೀವನ ಪಯಣದಲಿ ಮತ್ತೊಂದು ಮಜಲು ಅರಸಿ ಹೊರಟವಳಿಗೆ ಬಸ್ಸು ಹೊರಡದೇ ಎನ್ನುವ ಚಿಂತೆ. ಬಸ್ಸು ಹೊರಟರೇ ತನ್ನವರಿಂದ ದೂರವಾಗಿ, ಒಂಟಿಯಾಗಿ ಜೀವನ ಹೋರಾಟವನ್ನು ಎದುರಿಸಲು ಪಯಣಿಸಬೇಕೆಂದವಳ ಚಿಂತೆ.

ಈ ಎಲ್ಲರ ನಡುವೆ ಮೂಕಿಯಂತೆ ನಿಂತು ಭೂತವನ್ನು ಕಲಕುತ್ತಿರಲು "ಕ್ಷಮಿಸಿ" ಅನ್ನುವ ಮಾತು ವಾಸ್ತವಕ್ಕೆ ಎಳೆಯಿತು. ಒಂಟಿ ಪಯಣ ಬೆಳೆಸಿದ ಹುಡುಗಿಯಿಂದ ಕಾಣದೂರಿನ ವಿಚಾರಣೆ. ತಮಿಳುನಾಡಿನ ಮೂಲೆಯಿಂದ ಆಂಧ್ರದ ಮತ್ತೊಂದು ಮೂಲೆಗೆ ಕೆಲವು ದಿನ ಉದರನಿಮಿತ್ತ ಬಂದಿಳಿದ ತರುಣಿ ಮರಳಿ ಮನೆಗೆ ಸೇರುವ ಪರಿ ತಿಳಿಯದ ಭಾಷೆ, ಅರಿಯದ ಊರು, ಸ್ಥಿರವಲ್ಲದ ಕೆಲಸ, ನೆರವಿಲ್ಲದ ಬದುಕು.

ಅವಕಾಶ ದುರುಪಯೋಗಪಡಿಸಿಕೊಳ್ಳಲು ಹೊಂಚಿರುವ ಹುಲಿ, ಸಿಂಹಗಳ ನಡುವೆ ನಿಸ್ಸಹಾಯಕ ಸ್ಥಿತಿ, ನಿಜಸ್ಥಿತಿ ತಿಳಿಸಿ ಸಹಾಯ ಪಡೆಯಲೇ ಬೇಕು, ವಿಧಿಯಿಲ್ಲ. ತಿಳಿಸಿದರೆ ಮೇಲೆರಗಬಹುದಾದ ಆಪತ್ತಿನ ಭಯ. ಗೊಂದಲದಲ್ಲಿ ಸಿಲುಕಿ, ಭಾವನೆಗಳ ಮನದಲ್ಲಿ ತುಳಿದು, ಗಾಂಭೀರ್ಯದ ಮುಸುಕಿನಲ್ಲಿ ಭವಿಷ್ಯಕ್ಕಾಗಿ ಪರದಾಡುವವಳನ್ನು ಕಂಡು ''ಅಯ್ಯೋ ಹೆಣ್ಣೇ !'' ಎನಿಸಿತು.

ಸ್ವತಂತ್ರ ಜೀವನ ಹಂಬಲಿಸಿ, ಪಟ್ಟು ಹಿಡಿದು. ವಿದ್ಯೆಯ ಚಿನ್ನಟ್ಟಿದಳು ರೂಪ. ಅರ್ಹತೆ ಪಡೆದರೂ ಕೆಲಸ ಸಿಗದು, ಕೊಯಂಬತ್ತೂರಿನಿಂದ ಕೇವಲ ಕೆಲವು ದಿವಸ " ವಿಜಿಟಿಂಗ್ ಲೆಕ್ಚರರ್ " ಕೆಲಸಕ್ಕಾಗಿ ಅನಂತಪುರದ ಸತ್ಯಸಾಯಿ ಕಾಲೇಜಿಗೆ ಭೇಟಿ ನೀಡಿ ಪರಿಚಯಸ್ಥರ ಹಂಗಿನಲ್ಲಿ ಆತಿಥ್ಯ ಪಡೆದು ಮನೆಗೆ ಹೊರಟವಳಿಗೆ ಬಸ್ಸು, ರೈಲುಗಳ ಪರಿಚಯವಿಲ್ಲ, ವಿಚಾರಿಸಲು ಭಾಷೆ ತಿಳಿಯುವುದಿಲ್ಲ, ಅನಂತಪುರದಿಂದ ಬಸ್ಸು ಹಿಡಿದು, ಅಲ್ಲಿಂದ ಮತ್ತೊಂದು ರೈಲುಹಿಡಿದು ನಿಜಸ್ಥಳ ತಲುಪುವ ಯೋಚನೆ ಸಣ್ಣ ಊರಿನಲ್ಲಿ ಸಣ್ಣ ಬುದ್ಧಿಯವರ, ದೊಡ್ಡ ಪೇಟೆಯಲ್ಲಿ " ದೊಡ್ಡ ಮನುಷ್ಯರ " ಹಾವಳಿ. ಹತ್ತಿದ ಬಸ್ಸು ಇಳಿಯುವ ವೇಳೆಗೆ ಸರ್ವದೃಷ್ಟಿ ಕೇಂದ್ರವಾಗಿ, ಸ್ವಂತ ಊರಿನ ರೈಲು ಹಿಡಿದು ನಿಟ್ಟುಸಿರು ಬಿಡುವವರೆಗೂ ದುಗುಡ. ಕೂಲಿಯವರಿಂದ ಪೊಲೀಸಿನವರಿಗೂ ಕಾಲು ಜಾರಿಸುವ ಪ್ರಸಂಗ. ಮಾಡದ ತಪ್ಪಿಗೆ ಭಯ, ಆಡುವ ಮಾತಿನಲ್ಲಿ ಅಂಜಿಕೆ. ಅಳೆದು, ತೂಗಿ, ಹೆಜ್ಜೆ ಇಟ್ಟರೂ, ದಿಟ್ಟವಾಗಿ ಕಾಲೂರಲು ನಿಶ್ಶಕ್ತಿ. ಕಟ್ಟುಪಾಡಿನ ಆವರಣದಲ್ಲಿ ಹಿಂದಕ್ಕೇ ಸೆಳೆತ.

ಯೋಚಿಸಿದಂತೆ ಎಲ್ಲವೂ ನಡೆದರೆ ಕ್ಷೇಮವಾಗಿ ಸೂರು ಸೇರಬಹುದು. ಏತನ್ಮಧ್ಯೆ ತೊಂದರೆ ಉಂಟಾದರೆ ಎಲ್ಲಿ ನಿಲ್ಲಬೇಕು ? ಬರಬೇಕಾದ ರೈಲು ಬಾರದೆ ಹೋದರೆ, ಬಂದದ್ದು ಕೆಟ್ಟು ನಿಂತರೆ, ಅಪಘಾತವಾದರೆ, ಪಯಣ ಅರ್ಧಕ್ಕೆ ನಿಂತರೆ— ನೂರೆಂಟು ಸಂಶಯಗಳು. ಪರಿಹಾರವಿಲ್ಲದ ಸಂಶಯಗಳು, ನೆನೆದರೆ, ಮೈಯಲ್ಲಿ ರಕ್ತ ಹೆಪ್ಪುಗಟ್ಟುತ್ತದೆ.

ಎ. ಶೈಲಜಾ

ಬರೀ ಎರಡೇ ಮಾತಿನ ನೆರವಿಗೆ ರೂಪಾಳ ಕೈ ಜೋಡಿಸುವ ವಿನಯಕ್ಕೆ, ನಿಸ್ಸಹಾಯಕತೆ ಧ್ವನಿಸಿ, ಅವಳ ಕಣ್ಣಲ್ಲಿ ಅಸ್ಪಷ್ಟವಾಗಿ ಕದಲಾಡುವ ತೇವಕ್ಕೆ ನನ್ನ ತಲೆ ತಗ್ಗಿಸುವಂತಾಯಿತು. ನನ್ನವರ ಪರಕೀಯ ಅಸ್ತಿತ್ವವನ್ನು ಕಂಡು ಎದೆ ಭಾರವಾಗಿ ಮನೆ ತಲುಪುವಾಗ ಬದುಕು ಬೇಸರವೆನಿಸಿತು.

ಆಮೂಲಾಗ್ರ ಬದಲಾವಣೆ

ರಾತ್ರಿ ಹೊತ್ತಿನಲ್ಲೂ ಮಹಿಳೆಯರು ನಿರ್ಭಯವಾಗಿ ಒಂಟಿಯಾಗಿ ಹೋಗಬಹುದಾದ ವಾತಾವರಣ ನಿರ್ಮಾಣವಾಗಬೇಕಾದ ಅವಶ್ಯಕತೆಯನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದ್ದನ್ನು ಪತ್ರಿಕೆಯಲ್ಲಿ ಓದಿದ ನೆನಪು. ನಿಜ ನೂರಕ್ಕೆ ನೂರು ನಿಜ. ಮೊನ್ನೆ ಊರಿನ ಮನೆಯಿಂದ ನಾನಿರುವ ವಿದ್ಯಾನಗರಕ್ಕೆ ಹೊರಟಿದ್ದೆ. ಹೊರಡುವಾಗಲೇ ಅನಿವಾರ್ಯವಾಗಿ ಮುಸ್ಸಂಜೆಯಾಗಿತ್ತು. ನಾನೊಬ್ಬಳೇ ಇದ್ದೆ. ಗಂಡಸರೇ ತುಂಬಿರುವ ಆ ತಂಗುದಾಣದಲ್ಲಿ ಕತ್ತಲೆಮುಸಿಯಂತೆ ಆವರಿಸುತ್ತಿತ್ತು. ನನ್ನ ಮನಸ್ಸು ಆತಂಕ, ಕಳವಳಗಳ ನೆಲೆವೀಡಾಯಿತು. ಬಸ್ಸಿನ ವೇಳೆ ಮೀರಿದಾಗ ಮಾನಸಿಕ ಉದ್ವೇಗ ಹೆಚ್ಚುತ್ತಿದ್ದಂತೆ ಬಸ್ಸು ಬಂತು. ಬಸ್ಸಿನುದ್ದಕ್ಕೂ ಬಸ್ಸಿಳಿದು ಮನೆಗೆ ತಲಪುವರಗಿನ ಸುರಕ್ಷತೆ ಬಗ್ಗೆ ಕಳವಳ. ಅಂತೂ ಸುರಕ್ಷಿತವಾಗಿ ಮನೆಗೆ ತಲುಪಿದೆನಾದರೂ ಆ ಕೆಲವು ಗಂಟೆಗಳಲ್ಲಿ ಇತ್ತ ನಾನು, ಅತ್ತ ಬಿಡಾರದಲ್ಲಿ ಒಂಟಿಯಾಗಿದ್ದ ಅಮ್ಮ ಅನುಭವಿಸಿದ ಆತಂಕ ಕಳವಳಗಳು 'ಛೇ, ನಾನು ಗಂಡಾಗಿದ್ದರೆ!' ಎಂದು ಯೋಚಿಸುವಂತೆ ಮಾಡಿದ್ದವು.

ಇದು ಮಾತ್ರವಲ್ಲ. ಅಲ್ಲಿ ಇಲ್ಲಿ ವಿಚಾರ ಸಂಕಿರಣಗಳು, ಸಾಹಿತ್ಯ ಗೋಷ್ಠಿಗಳು ನಡೆಯುತ್ತಿರುತ್ತವೆ. ಇದು ಮುಸ್ಸಂಜೆಯ ಹೊತ್ತಿನಲ್ಲಿ ಅಥವ ರಾತ್ರಿಯ ಹೊತ್ತಿನಲ್ಲಿ ಆಗಿದ್ದರೆ ಆಸಕ್ತಿ ಅಭಿರುಚಿಗಳಿದ್ದರೂ ಸುರಕ್ಷಿತವಾಗಿ ಮನೆಗೆ ತಲುಪುವ ಕಾಳಜಿ ಇರುವ ಒಂಟಿ ಹೆಣ್ಣಾದ ನಾನು ಭಾಗವಹಿಸುವಂತಿಲ್ಲ. ಹೀಗೆ ಹತ್ತು ಹಲವು ಸಂದರ್ಭಗಳಲ್ಲಿ 'ನಾನು ಗಂಡಾಗಿದ್ದರೆ!' ಎಂದು ವ್ಯರ್ಥ ಹಂಬಲಿಸಿದ್ದೇನೆ. ಹೆಣ್ಣಿಗೆ ಪ್ರಸ್ತುತ ಸಮಾಜದಲ್ಲಿರುವ ಸ್ಥಾನಮಾನಗಳು, ಅವಳ ಮಿತಿಗಳು–ಇವು ಈ ಯೋಚನೆಯನ್ನು ಹುಟ್ಟು ಹಾಕುತ್ತವೆ. ಸಾಹಿತಿ ಬರಗೂರರ ಮಾತು ಓದಿದಾಗ 'ಹೌದಲ್ಲ' ಎನಿಸಿ ಖುಷಿಯಾಯಿತು.

ಆದರೆ ಭಿನ್ನ ಮಾನಸಿಕ ಸ್ಥಿತಿಗಳನ್ನು ಅಧ್ಯಯನ ಮಾಡಿದವರಿಗೆ ಅದು ವಾಸ್ತವಕ್ಕಿಳಿಸಲಾಗದ ಆದರ್ಶದ ಮಾತೆಂದು ತೋರದಿರದು. ರಾತ್ರಿ ಹೊತ್ತಿನಲ್ಲಿ ಒಂಟಿ ಹೆಣ್ಣನ್ನು ಕಂಡಾಗ ಪುರುಷರಲ್ಲಿ ಮೃಗೀಯ ಪ್ರವೃತ್ತಿ ಯಾಕೆ ಜಾಗೃತವಾಗುತ್ತದೆ? ಅದನ್ನು ನಿಯಂತ್ರಣದಲ್ಲಿಡಲು ಸಾಧ್ಯವೇ ಎಂದು ಯೋಚಿಸಿದಾಗ ಸಮಸ್ಯೆ ಆಳಕ್ಕಿಳಿಯುತ್ತಾ ಹೋಗುತ್ತದೆ. ಅತ್ಯಾಚಾರದಂತಹ ಪ್ರಕರಣಗಳಲ್ಲಿ ಮರಣ ದಂಡನೆಯಂತಹ ಕ್ರೂರ ಶಿಕ್ಷೆಗಳನ್ನು ಜಾರಿಯಲ್ಲಿರಿಸಿದರೆ ಒಂದು ಹತೋಟಿಗೆ ತರಬಹುದೇನೋ ಎಂದೊಮ್ಮೆ ಅನಿಸಿದರೂ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಆಗಬೇಕಾದ ಆಮೂಲಾಗ್ರ ಬದಲಾವಣೆಯೇ ಸಾಕಷ್ಟು ಯೋಗ್ಯ ಪರಿಹಾರವೆಂದು ಕಾಣುತ್ತದೆ.

ಮಹೇಶ್ವರಿ. ಯು

ಆಟದ ನೆಲೆಯಲ್ಲಿ ಶತಮಾನದ ಬೆಳಕು

ಅಸ್ತಿತ್ವದ ಸಾರ್ಥಕತೆಯನ್ನು ನಿರಂತರ ಹುಡುಕುವ ಕಣ್ಣು, ತನ್ನ ಹೊಳಪನ್ನು ಬತ್ತಿಸಿಬಿಡುವಂಥ ಮಾಮೂಲೀತನವನ್ನು ನಿರ್ಲಕ್ಷಿಸುತ್ತದೆ. ಬದುಕಿನ ಹೆದ್ದಾರಿಯಲ್ಲಿ ಕ್ರಿಯಾತ್ಮಕತೆಯ ಹೊಸ ಚಿಗುರ ಹಂಬಲಿಸಿ ಓಡುವ ಹೃದಯ ತರಗೆಲೆಯಂಥ ನಿರ್ಜೀವತ್ವವನ್ನು ತಿರಸ್ಕರಿಸುತ್ತದೆ — ಈ ಸತ್ಯ, ಆಟಗಾತಿ ಬೇಬ್ ಡಿಡ್ರಿಕ್‌ಸನ್‌ಳ ಹೃದಯದ ಚಿರಕಿರಣ. ಬಾಲಕಿಯರಿಗಿಂತ ಬಾಲಕರೊಂದಿಗೇ ಹೆಚ್ಚು ಆಡಿರುವ 18 ವರ್ಷದ ಲಾಸ್‌ಏಂಜಲೀಸ್ ಬಾಲೆ ಬೇಬ್ ಡಿಡ್ರಿಕ್‌ಸನ್ (1932) ತಾನು ಭಾಗವಹಿಸಿದ ಒಟ್ಟು 634 ಸ್ಪರ್ಧೆಗಳಲ್ಲಿ ಸೋತಿದ್ದು ಕೇವಲ ಎರಡರಲ್ಲಿ ಮಾತ್ರ. ಇವಳ ಆಟಗಳ ಪರಿಧಿ, ಬಾಕ್ಸಿಂಗ್, ಹುಟ್ಟು ಹಾಕುವುದು, ಗುರಿಹೊಡೆಯುವುದು, ಕುದುರೆ ಏರುವುದು ಬೇಸ್‌ಬಾಲ್, ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್ ಪೋಲೋ, ಬಿಲಿಯರ್ಡ್ಸ್ ಗೋಲ್ಫ್, ಟೆನ್ನಿಸ್, ಹಾಕಿ, ಎಲ್ಲವನ್ನೂ ಆವರಿಸಿ ಕೇಳುವ ಕಿವಿಗಳನ್ನು ಬೆರಗುಗೊಳಿಸಿತ್ತು. ಕುತೂಹಲದ ಕಟ್ಟೆಯೊಡೆದ ಪತ್ರಕರ್ತನೊಬ್ಬ ''ನೀವು ಆಡದಿರುವ ಆಟವಾವುದಾದರೂ ಇದೆಯೇ'' ಎಂದು ಪ್ರಶ್ನಿಸಿದಾಗ, '' ಇದೆ, ಗೊಂಬೆಯಾಟ '' ಎಂಬ ಉತ್ತರ, ಅವಳ ನಗುವಿನೊಂದಿಗೇ ಕಳೆತು ಜಿಗಿದಿತ್ತು !

(ಆಧಾರ)

ಜಿ. ಕೆ. ಸಾವಿತ್ರಿ



ಸಂವೇದನೆ

"ನೀವು ಹೀಗೆ ಹೆದರ್ತಾ ಹೋದ್ರೆ ಮುಗಿದೇ ಹೋಯ್ತು. ಸ್ವಲ್ಪ ಧೈರ್ಯ ತಂದುಕೋ ಬೇಕು. ಇಲ್ದೆ ಇದ್ರೆ ಮೇಣದ ಬತ್ತಿ ಕರಗಿ ಹೋದ ಹಾಗೆ ನೀವು ಕರಗಿ ಹೋಗ್ತೀರಾ" ಅಪರಿಚಿತಳ ಆ ಮಾತುಗಳು ಕಿವಿಯಲ್ಲಿ ಮೊರೆಯಿಡುತ್ತಿವೆ. ಮನಸ್ಸಿನಲ್ಲಿ ಭರವಸೆಯ ರಂಗೋಲೆಯನ್ನು ಬಿಡಿಸುತ್ತವೆ.

ಅಂದು ಬೆಳಿಗ್ಗೆ ಎಚ್ಚರವಾಗುತ್ತಲೇ ಮನಸ್ಸು ಪ್ರಕ್ಷುಬ್ಧತೆಯಿಂದ ಕೂಡಿತ್ತು. ನಮ್ಮೂರಿನಲ್ಲಿರುವಂತೆ ಹಕ್ಕಿಪಕ್ಷಿಗಳ ಚಿವ್‌ಗುಡುವ ಸದ್ದಾಗಲೀ, ಕಾಗೆಗಳ ಎಚ್ಚರಿಕೆಯ ಧ್ವನಿಯಾಗಲೀ, ವಿಚಿತ್ರ ಗುಟ್ಟುಗಳನ್ನು ಹೇಳಿ ಮೈ ಚುಂಬಿಸುವ ಬೆಳಗಿನ ಎಳೆಗಾಗಿ ಬೀಯು ತ್ತಿರುವ ಬೆಂಗಳೂರಿನಲ್ಲಿಲ್ಲ. ಹಗಲು ರಾತ್ರಿಗಳ ವ್ಯತ್ಯಾಸ ವನ್ನೇ ಕಾಣದ ನಗರದ ಮನಸ್ಥಿತಿಗಳಿಗೆ ತಾರಸಿ ಮನೆ ಗಳಿಂದ ನುಸುಳಿ ಬರುವ ಸೂರ್ಯ ದಿನನಿತ್ಯ ಡಿಕ್ಕಿ ಹೊಡೆ ಯುತ್ತಾನೆ.

ಮಾರ್ಚ್ 8 ಜಗತ್ತಿನಲ್ಲೆಲ್ಲಾ ಮಹಿಳೆಯರಿಗೆ ಮಹತ್ವವಾದ ದಿನ. ಬೆಂಗಳೂರಿನ ಮಹಿಳಾ ಸಂಘ-ಸಂಸ್ಥೆಗಳು, ಸಭೆ, ಸಮಾರಂಭ, ಚರ್ಚೆ, ಪ್ರತಿಭಟನಾ ಮೆರವಣಿಗೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡ ದಿನ. ಸ್ತ್ರೀಯರ ಬದುಕಿನ ಎಲ್ಲಾ ಸ್ತರಗಳಿಗೆ ಆತ್ಮೀಯತೆಯಿಂದ ಮಿಡಿಯದ ಇವೂ ಒಂದು ರೀತಿಯಲ್ಲಿ ರಿಚುಯಲ್ ಎಂದೆನಿಸುತ್ತವೆ. ಸಮಸ್ಯೆಯ ಪೋಷಣೆಯ ಸ್ವರೂಪವೇ ಪ್ರಧಾನವಾಗುತ್ತಿದೆ. ಸ್ತ್ರೀಯರ ದೈನಂದಿನ ಬದುಕಿನ ಎಲ್ಲಾ ಆಯಾಮಗಳನ್ನು ಅಮರಿಕೊಂಡಿರುವ ಗೊಂದಲ, ಅಸಹಾಯಕತೆ, ಮೌಲ್ಯ ಸಂಘರ್ಷ, ಆಯ್ಕೆಯ ಸಾಧ್ಯತೆ, ಅಸಾಧ್ಯತೆಗಳ ಸೂಕ್ಷ್ಮ ನೆಲೆಯನ್ನು ತನ್ನ ವೈಚಾರಿಕ ತೆಕ್ಕೆಗೆಳೆದುಕೊಳ್ಳದ ಚರ್ಚೆ, ವಿಚಾರ ಸಂಕಿರಣಗಳು ಕ್ಲೀಷೆಗಳಾಗುತ್ತಿವೆ. ಮೊದಲೇ ವೈಯಕ್ತಿಕ ವಾದ ಸ್ತ್ರೀಯರ ಬದುಕನ್ನು ಮತ್ತಷ್ಟು ವೈಯಕ್ತಿಕ ಗೊಳಿಸಿ "ಗೋಡೆಗಳಿಲ್ಲದ ಗೋಡೆಗಳನ್ನು ನಿರ್ಮಿಸುತ್ತಿವೆ.

ನನ್ನ ನೆಚ್ಚಿನ ಗೆಳತಿಯೊಬ್ಬಳು ಅಂದೇ ಬಂದು ನೋಡಲು ಆತ್ಮೀಯತೆಯಿಂದ ಒತ್ತಾಯಿಸಿದ್ದಳು. ಸುಮಾರು ಇಪ್ಪತ್ತಾರು ವರ್ಷ ವಯಸ್ಸಿನ ಇವಳು ಬದುಕಿಗೆ ಈಗ ಅಂಬೆಗಾಲಿಡುತ್ತಿರುವಳು. ಒಮ್ಮೆ ಆದ ಮದುವೆ ಆಕೆಯ ಪಾಲಿಗೆ ಸಾವಿನ ಮನೆಯ ಆಹ್ವಾನ ವಾಗಿತ್ತು. ಬದುಕಬೇಕೆಂಬ ಆಸೆಗೆ ನೀರೆರದಿದ್ದರಿಂದಲೆ ಸಾವಿನ ದವಡೆಯಿಂದ ತನ್ನನ್ನೂ ರಕ್ಷಿಸಿಕೊಂಡವಳು. ಸೂಕ್ಷ್ಮತೆಗೆ ಇನ್ನೊಂದು ಹೆಸರೇನಾದ್ರು ಇದ್ರೆ - ಅದು ಅವಳ ಹೆಸರೇ. ಚಿಕ್ಕಂದಿನಿಂದ ಅಂಟಿಕೊಂಡು ಸಾಹಿತ್ಯದ ಗೀಳು ಅವಳ ಸೂಕ್ಷ್ಮ ಮನೋಧರ್ಮಕ್ಕೆ ರೆಕ್ಕೆ ಪುಕ್ಕ ಗಳನ್ನು ಅಂಟಿಸಿತ್ತು.

ಹೊಸ ಬದುಕು ಅವಳಿಗೆ ಮರುಹುಟ್ಟು. ಅವಳ ಬದುಕಿನ ಈ ಸ್ಥಿತ್ಯಂತರದಲ್ಲಿ ಅವಳ ದಿನನಿತ್ಯದ ಜೀವನ ಸರ್ಕಸ್ಸಿನ ತಂತಿಯ ಮೇಲಿನ ನಡಿಗೆಯಂತೆ. ಸದಾ ಎಚ್ಚರಿಕೆಯ ಮನಸ್ಥಿತಿ. ಸಮತೋಲನವನ್ನು ಕಾಪಾಡಿ ಕೊಳ್ಳದಿದ್ದರೆ ಪುನಃ ದುರಂತದ ಅಪ್ಪುಗೆ. ವಾಸ್ತವತೆಯ ಕಠೋರತೆ, ಒರಟುತನದಿಂದ, ಆಘಾತಗಳಿಂದ ರಕ್ಷಿಸಿ ಕೊಳ್ಳಲು ಸದಾ ಮೈಯೆಲ್ಲಾ ಕಣ್ಣಾಗಿಸಿಕೊಂಡಳು. ಕೆಲವೊಮ್ಮೆ ದೈನಂದಿನ ಸುಖ, ಸಂತೋಷದ ಗಳಿಗೆಗಳಿಗೆ ತೆರೆದುಕೊಳ್ಳುವುದಕ್ಕೆ ಕಡಿವಾಣ ಹಾಕಿ ಬಿಡುತ್ತವೆ ಈ ಜಾಗೃತ ಸ್ಥಿತಿ.

ರಾಜೇಶ್ವರಿ ಎಚ್. ಎಸ್.

ಶೇಷಾದ್ರಿಪುರಂ ಬಳಿ ಬರುತ್ತಿರುವಾಗ "ಸ್ವಲ್ಪ ಹೊತ್ತು ಈ ಪಾರ್ಕಿನಲ್ಲಿ ಕುಳಿತುಕೊಳ್ಳೋಣ" ಎಂದು ಹೇಳುತ್ತಿದ್ದಂತೆಯೇ ಇಬ್ಬರೂ ಪಾರ್ಕಿನೊಳಗಡೆ ನಡೆದೆವು. ಎಲ್ಲಿ ನೋಡಿದರೂ ಬಿಸಿಲು ಕೊನೆಗೆ ಸ್ವಲ್ಪ ನೆರಳಿದ್ದ ಪಾರ್ಕಿನ ಕಾಂಪೌಂಡ್‌ಗೆ ಅಂಟಿದ ಕಟ್ಟೆಯ ಮೇಲೆ ಕುಳಿತುಕೊಂಡೆವು. ಸುಡು ಬಿಸಿಲು, ಬೀಸುವ ಗಾಳಿಯು ಬಿಸಿಲನ್ನೇ ಬೀಸುತ್ತಿದೆಯೇನೊ ಅನಿಸುತ್ತಿತ್ತು. ಬಿಸಿಲು ಹುಟ್ಟು ಹಾಕುತ್ತಿದ್ದ ಯಾತನೆ ವಿಚಿತ್ರವಾಗಿತ್ತು.

ಕಾರ್ಗತ್ತಲ ಬಾನಿನಲ್ಲಿ ಬೆಳಕಿನ ಭರವಸೆಯ ಕಿರಣ ಗಳಿಗಾಗಿ ತಡವರಿಸುತ್ತಿದ್ದ ನನ್ನ ಗೆಳತಿ ತನ್ನ ಚಿಂತನೆಯ

ರೇಖೆಯನ್ನು ಬಿಚ್ಚತೊಡಗುತ್ತಾಳೆ. "ನನ್ನ ಮನೆಯಲ್ಲಿ ನನ್ನ ಮುಂದಿನ ಹೊಸ ಬದುಕಿನ ಬಗ್ಗೆ ಯೋಚಿಸ್ತಾರಾ ? ಖಂಡಿತಾ ಇಲ್ಲ. ಪುನಃ ಮದುವೆಯಾಗುವುದನ್ನು ಅವರು ಕನಸಿನಲ್ಲಿಯು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.... ನಿಟ್ಟುಸಿರು ಬಿಟ್ಟು ಒಂದು ಕ್ಷಣ ಮೌನದ ಹೊರೆ ಹೊರುತ್ತಾಳೆ. "ನನ್ನ ಸ್ಥಿತಿ ಎಷ್ಟು ವಿಚಿತ್ರವಾಗಿದೆಯೆಂದರೆ ಈ ಕಡೆ ನಾನು ಗಂಡನನ್ನೂ ಬಿಟ್ಟಿಲ್ಲ. ಗಂಡ ಅನ್ನೋನ ಜೊತೆ ಸಂಸಾರಾನೂ ಮಾಡ್ತ ಇಲ್ಲ. ಆ ಕಡೆ ವಿಧವೇನೂ ಅಲ್ಲ" ವ್ಯಂಗ್ಯವಾಗಿ ನಗುತ್ತಾಳೆ. ಆ ನಗುವಿನಾಳದಲ್ಲಿ ಹೆಪ್ಪುಗಟ್ಟಿದ್ದ ನೋವು, ಹತಾಶೆ ಬಣಗುಟ್ಟು ಪಾರ್ಕಿನಲ್ಲಿ ಪ್ರತಿಧ್ವನಿಸುತ್ತದೆ

ಅವರ ನಿರೀಕ್ಷೆಯ ಪ್ರಕಾರ ನಾನು ಉಸಿರುಗಟ್ಟಿಸುವ ಪರಿಸರದಿಂದ ಹೊರಬಂದದ್ದು, ಹಳೆಯ ಮೌಲ್ಯಗಳನ್ನು ಧಿಕ್ಕರಿಸಿ ಬಂದದ್ದು ಹೊಸದನ್ನು ಒಪ್ಪಿಕೊಳ್ಳಲು ಅಲ್ಲ. ನನ್ನ ಕಾಲಮೇಲೆ ನಿಲ್ಲಲು ಕೆಲಸ ಒಂದಿದ್ರೆ ಸಾಕು. ನಾಳೆ ಅಣ್ಣ ತಮ್ಮಂದಿರು ನಮಗೆ ಆಗ್ತಾರೆ ಅನ್ನೋ ಗ್ಯಾರೆಂಟಿಯೇನು ? ಕ್ರಮೇಣ ಹೊಸಿಲು ತುಳಿಯದೇ, ಮನೆ ಕೆಲಸ ಮಾಡಿಕೊಂಡು ಇರಬೇಕಾಗುತ್ತೆ. ಬೇರೆ ಏನಾದ್ರು ದಾರಿ ಇದೆಯಾ ? ನನ್ನ ಕಣ್ಣುಗಳನ್ನು ನಿಟ್ಟಿಸಿ ಪ್ರಶ್ನಿಸುತ್ತಾಳೆ, ತನ್ನನ್ನೂ ಪ್ರಶ್ನಿಸಿಕೊಳ್ಳುತ್ತಾಳೆ—

ನನಗೆ ನನ್ನ ನರನಾಡಿಗಳಲ್ಲಿ, ಮಿಡಿಯುವ ಬೆಚ್ಚನೆಯ ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಕಂಪಾನಿಯನ್ ಬೇಕೆನಿಸುತ್ತದೆ. ತನ್ನೆಲ್ಲಾ ನಗುವಿನಲ್ಲೇ ಜಗತ್ತನ್ನೇ ನಗಿಸಿ ಬಿಡುವ ಮಗುವೊಂದು ಬೇಕೆನಿಸುತ್ತವೆ ಆದರೆ ...ಆದರೆ....ನನ್ನ ಈ ಆಸೆಗಳೆಲ್ಲಾ ನಕ್ಷತ್ರಗಳಿಗೆ ನೇಣು ಹಾಕಿಕೊಳ್ಳುವಂತಹವು. ಅವಳ ಜೀವಸೆಲೆಯನ್ನು ಎಳೆಯುತ್ತಿದ್ದ ಅವಳ ಆಸೆಗಳು ಕಣ್ಣಲ್ಲೇ ಕರಗಿ ಹೋಗುತ್ತಿವೆಯೆಂದೆನಿಸುತ್ತದೆ.

ಧಗಿಸುವ ಬಿಸಿಲು, ಬಿಸಿಲಿನಲ್ಲಿ ಬೀಸುವ ಗಾಳಿ ತಂಪನ್ನೀಯದೇ ಸೆಕೆಯಿಂದ ನರಳುವ ಮನಸ್ಸಿಗೆ ನೆಮ್ಮದಿಯನ್ನೂ ನೀಡದ ವಿಚಿತ್ರ ಸ್ಥಿತಿ. 'Excuse me' ನನ್ನ ಬೆನ್ನ ಹಿಂದಿನಿಂದಬಂದ ಅಪರಿಚಿತಳೋರ್ವಳ ಧ್ವನಿ. ಗಾಬರಿಯಿಂದ ಹಿಂತಿರುಗಿ ನೋಡಿದೆ. ನಾವು ಒರಗಿ ಕುಳಿತಿದ್ದ ಕಬ್ಬಿಣದ ಕಟಾಂಜನ. ಆದರ ಇನ್ನೊಂದು ಪಾರ್ಶ್ವದಲ್ಲಿ ಕುಳಿತಿದ್ದ ಆಕೆ. ದುಂಡನೆಯ ಮುಖ, ಕಿವಿಯನ್ನು ಅಲಂಕರಿಸಿದ್ದ ಪುಟ್ಟದಾದ ಜುಮುಕಿಗಳು ಚುರುಕಾದ ಕಣ್ಣುಗಳು....ಮಾತನಾಡತೊಡಗಿದವು.

ನಾನು ಹೀಗೆ ಹೇಳ್ತಿನಿ ಅಂತ ಬೇಜಾರು ಮಾಡಿಕೊಳ್ಳಬೇಡಿ. "ನೀವು ಸ್ವಲ್ಪ ರಿಸರ್ವ್ ಆಗಿರಬೇಕು ದಿನನಿತ್ಯದ ಜೀವನದಲ್ಲಿ ರಿಸರ್ವ್ ಆಗದೇ ಇದ್ರೆ, ಕೊನೆಗೆ ಒಂದು ದಿನ ನೀವೇ ಸಾಯಬೇಕಾಗುತ್ತದೆ.

ನನಗೆ ಹದಿನಾಲ್ಕು ವರ್ಷಕ್ಕೆ ಮದುವೆ ಮಾಡಿದ್ರು. ನನ್ನ ಗಂಡನ ಮನೆಯವರು ಕಿರುಕುಳ ಕೊಟ್ಟಿದ್ದನ್ನು ಹೇಳೋಕೆ ಆಗೋದಿಲ್ಲ. ಅತ್ತೆ, ಮಾವ, ನಾದಿನಿ, ಎಲ್ಲರಿಂದಲೂ ಹೊಡೆತ ತಿಂದಿದ್ದೇನೆ. ಬೆಳಿಗ್ಗೆಯಿಂದ ಸಂಜೆಯವರೆಗೆ ಮೈಮುರಿಯುವ ಹಾಗೆ ದುಡಿದ್ರು, ತಂಗಳನ್ನ ಕೆಳಗಿಟ್ಟು ಮೇಲೆ ಬಿಸಿ ಅನ್ನ ಹಾಕಿ ಕೊಡ್ತಾ ಇದ್ರು. ಮೊದಲನೆಯ ಸಾರಿ ಬಾಣಂತನಕ್ಕೆ ನಾನು ತವರು ಮನೆಗೆ ಹೋದಾಗ "ನಾನು ಸತ್ರೆ ಇಲ್ಲೇ ಸಾಯ್ತಿನಿ, ಗಂಡನ ಮನೆಗೆ ಹೋಗಲ್ಲ ಎಂದು ಹಟ ಮಾಡಿದೆ ಆದರೆ ನನ್ನ ತಂದೆ-ತಾಯಿ "ಸತ್ತರೆ ನೀನು ಅಲ್ಲೇ ಸಾಯಬೇಕು. ನೀನು ಸತ್ತ ಮೇಲೆ ನಿನ್ನ ಹೆಣ ಬೇಕಿದ್ರೆ ನಮ್ಮ ಮನೆಗೆ ಬರ್ಲಿ, ಆದರೆ ಜೀವಂತವಾಗಿ ಮಾತ್ರ ನಮ್ಮ ಮನೆಯಲ್ಲಿ ಇರಕೂಡದು." ಎಂದು ಹೇಳಿದಾಗ ನಾನು ವಾಪಸ್ಸು ಗಂಡನ ಮನೆಗೆ ಹೋಗಲೇಬೇಕಾಯ್ತು ಆದರೆ ಈಗ ನೋಡಿ, ಟೀಚರ್ ಆಗಿ ಕೆಲಸ ಮಾಡ್ತೀನಿ. ಪ್ರತಿನಿತ್ಯ ಮನೆಯಲ್ಲಿ ಚಿಕ್ಕ ಪುಟ್ಟ ಘಟನೆಗಳಲ್ಲೂ, ನನ್ನ ತಪ್ಪಿಲ್ಲದಾಗ ನಾನು ಸಮರ್ಥನೆ ಮಾಡಿಕೊಳ್ಳೋದನ್ನು ಕಲಿತೆ. ಕತ್ತನ್ನು ಉದ್ದಮಾಡಿ, ಮುಖವನ್ನು ಹತ್ತಿರ ತಂದು ನಮ್ಮನ್ನು ಒಪ್ಪಿಸುವ ರೀತಿಯಲ್ಲಿ "ತಾಯಿ ಮನೆಯಲ್ಲಿದ್ದರೆ ನಮಗೆ ಕೇವಲ ತಾನೆ ? ತಂದೆ-ತಾಯಿಗಳು ಇರುವವರೆಗೆ ಸರಿ, ಅಣ್ಣ ತಮ್ಮಂದಿರು ನೋಡ್ತಾರೆ, ಆದರೆ ಎಷ್ಟು ದಿನ ? ನಾಳೆ ಅವರಿಗೆ ಬರೋರು ಎಂಥವರಿರುತ್ತಾರೊ ? "ನಾನು ಹೀಗೆ ಹೇಳ್ತೀನಿ ಅಂಥ ಬೇಜಾರು ಮಾಡಿಕೊಳ್ಳಬೇಡಿ." ಒಪ್ಪಿಗೆಗಾಗಿ ನನ್ನ ಗೆಳತಿಯ ಮುಖ ನೋಡುತ್ತಾಳೆ. ನನ್ನ ಗೆಳತಿ "ಹಾಗೇನಿಲ್ಲ, ಪರ್ವಾಗಿಲ್ಲ ಹೇಳಿ" ಅಪರಿಚಿತ ಮಹಿಳೆಯತ್ತ ನೆಟ್ಟ ದೃಷ್ಟಿಯನ್ನು ಕೀಳದೇ ನುಡಿಯುತ್ತಾಳೆ. "ನೀವು ಹೀಗೆ ಹೆದರ್ತಾ ಇದ್ರೆ ಮುಗಿದೆ ಹೋಯಿತು. ಸ್ವಲ್ಪ ಧೈರ್ಯ ತಂದುಕೊಳ್ಳಬೇಕು. ಇಲ್ದೆ ಇದ್ರೆ ಕ್ಯಾಂಡಲ್ ಕರಗಿ ಹೋದ

ಹಾಗೆ ನೀವು ಕರಗಿ ಹೋಗ್ತಿರಾ! ಸ್ವಲ್ಪ ರಿಸರ್ವ್ ಆಗಿ ನೋಡಿ, ಎಲ್ಲಾ ಸರಿಹೋಗುತ್ತೆ. ಅದೇನೋ ಗಾದೆ ಹೇಳ್ತಾರಲ್ಲ, ನೆತ್ತಗಿದ್ದರೆ ಮುಟ್ಟಿ ಮುಟ್ಟಿ ನೋಡ್ತಾರೆ.

ಅಷ್ಟರಲ್ಲಿ ಬಸ್ಸು ಬಂದಿದ್ದನ್ನು ಗಮನಿಸಿ, ಬರ್ತೀನಿ ಅಂತ ಆಕೆ ಹೊರಟುಹೋದಳು. ತುಂಬಾ ಹೊತ್ತಿನ ವರೆಗೆ ಮೌನ ನಮ್ಮಿಬ್ಬರನ್ನು ಆವರಿಸಿತ್ತು. ನಮಗರಿವಿಲ್ಲದೆಯೇ ಕಾಲ್ಗಳು ಪಾರ್ಕಿನಿಂದಾಚೆಗೆ ಧಾವಿಸಿದ್ದವು. ನನಗೂ ಟೈಮಾಗುತ್ತೆ. ನಾನು ಹೊರಡುತ್ತೇನೆ ಎಂದು ನನ್ನ ಗೆಳತಿ ಹೇಳಿದಾಗಲೇ, ಅಪರಿಚಿತಳಾಡಿದ ಮಾತುಗಳ ಗುಂಗಿನಿಂದ ನಾನು ಹೊರಬಂದದ್ದು. ಬದುಕಿನ ವಾಸ್ತವ ಕಠೋರ ಸತ್ಯಗಳಿಗೆ ಮೈಯೊಡ್ಡಿಕೊಂಡ ಅನುಭವದ ತೆಕ್ಕೆಗೆ ದಕ್ಕಿಸಿಕೊಂಡ ಈ ಅಪರಿಚಿತ ಮಹಿಳೆಯ ಎಷ್ಟೋ ಮಾತುಗಳು ನನ್ನಲ್ಲಿ ಹಸಿರಾಗಿವೆ. ವೈಯಕ್ತಿಕ ನೋವಿನ ಸ್ತರದಲ್ಲಿ ಮಿಡಿಯುವ ಅನುಭವ ತನ್ನ ಸೀಮಾರೇಖೆಯನ್ನು ಮೀರಿ ಒಂದು ಸಾಮಾನ್ಯ ಅನುಭವವಾಗಿ ಟಿಸಿಲೊಡೆಯುವ ಸಾಧ್ಯತೆ ನವಿರೇಳಿಸುತ್ತದೆ.

ಬಂಧನ

ಎಲ್ಲಿಯೋ ಇದ್ದ ಒಬ್ಬ
ಸುಂದರ ಯುವತಿಯ ತಂದು
ದಕ್ಷಿಣೆಯ ಸುರಿಸಿಕೊಂಡು
ವರನಾಗಿ ಮೆರೆದು ಕಟ್ಟುವ
ಮಂಗಳ ಸೂತ್ರ ಮದುವೆಯೆಂಬ
ಬಂಧನದೊಳಗೆ ಹುದುಗಿಸುವ
ಅವಳ ವ್ಯಕ್ತಿತ್ವ ಬಯಲಾಗದಂತೆ
ಜೀವನದ ಜೈಲಾದ ಮನೆ ಮಂದಿರ
ಇನ್ನಿಲ್ಲ ಅವಳ ಬಯಕೆಗಳಿಗೆ ಜಾಗರ
ಮತ್ತೊಮ್ಮೆ ಕಾಣಲಿಲ್ಲ ಸುಂದರ ಜೀವನ
ಕಡೆಗೊಮ್ಮೆ ಆಗುವಳವಳು "ಜೀವಂತ ದಹನ"

ಬಿ. ಪದ್ಮ

ಬೆಂಕಿಯಲ್ಲಿ ಬೆಂದ ಸುಶೀಲ

ಹೆಣ್ಣಿಗೆ ಎಲ್ಲಾ ವಿಧವಾದ ಶೋಷಣೆ ಈ ವಿಶ್ವದ ಎಲ್ಲಾ ದೇಶಗಳಲ್ಲೂ ನಡೆಯುತ್ತಿದೆ. ಪುರುಷ ಪ್ರಧಾನ, ಜಾತಿ ಪ್ರಧಾನವಾದ ಈ ದೇಶದಲ್ಲಿ ಹೆಣ್ಣನ್ನು ಹಿಂಸಿಸುವುದರಲ್ಲಿ ಪುರುಷರು ಜಾತಿ ಮತಗಳನ್ನು ಕಳಚಿಕೊಳ್ಳುತ್ತಾರೆ. ಇಂತಹ ಧೂರ್ತಗಂಡಿನ ಕೆಲಸಗಳಿಗೆ ಕೆಲವು ಹೆಣ್ಣುಗಳೂ ಕೂಡಿ ಸಹಕರಿಸುತ್ತಿರವುದು, ಒಟ್ಟು ಹೆಣ್ಣು ಸಮೂಹದ ದುರಂತ. ಹಾಗೆ ನೋಡಿದರೆ ಹೆಣ್ಣು ಮತ್ತೊಬ್ಬ ಹೆಣ್ಣಿನ ಪ್ರಾಣವನ್ನು ತೆಗೆದುಕೊಳ್ಳುತ್ತಿರುವ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಲಿವೆ. ಅಂಥಾ ಪ್ರಕರಣಗಳ ಪಟ್ಟಿಗೆ ಹೊಳಲ್ಕೆರೆ ಸುಶೀಲಮ್ಮನ ಸಾವೂ ಒಂದು. ಈಗ್ಗೆ ಮೂರು ವರ್ಷಗಳ ಹಿಂದೆ ದಾವಣಗೆರೆ ತಾಲ್ಲೂಕಿನ ಗಂಗನಕಟ್ಟೆ ಎಂಬ ಹಳ್ಳಿಯ ಬಡ ಅವಿದ್ಯಾವಂತೆ, ಮುಗ್ಧ ಮಾದಿಗ ಮಹಿಳೆ ಸುಶೀಲಮ್ಮನನ್ನು ಹೊಳಲ್ಕೆರೆ ಟೌನಿನ ಆರ್. ಜಯಪ್ಪ – ಇವರಿಗೆ 4000 ರೂ ಬಟ್ಟೆ, ಉಂಗುರ, ವಾಚು, ಎರಡೂ ಕಡೆಯ ಖರ್ಚಿನೊಂದಿಗೆ ಮದುವೆ ಮಾಡಿಕೊಡಲಾಯಿತು. ಸುಶೀಲಮ್ಮ ಎರಡು ವರ್ಷಗಳ ಹಿಂದೆ ವೇಣುಗೋಪಾಲನೆಂಬ ಮಗುವಿಗೆ ಜನ್ಮ ನೀಡಿದಳು.

ಮಗುವಿಗೆ ಮುರಾವನ್ನು ತೌರಿನಿಂದ ತರಬೇಕೆಂದು ಅತ್ತೆ ನಾಗಮ್ಮ, ಮಾವ ರಂಗಪ್ಪ, ಸುಶೀಲಮ್ಮನನ್ನು ಒತ್ತಾಯಪಡಿಸುತ್ತಿದ್ದರು. ಸುಶೀಲಮ್ಮನ ಅಣ್ಣನಾದ ಎಸ್. ಜಯ್ಯಪ್ಪನವರು ದಾವಣಗೆರೆ ಕೆ.ಇ.ಬಿ. ಯಲ್ಲಿ ನೌಕರನಾಗಿದ್ದು ತನ್ನ ದೀರ್ಘ ಅನಾರೋಗ್ಯದ ಕಾರಣ ಮುರಾವನ್ನು ಸರಿಯಾದ ಕಾಲಕ್ಕೆ ತಂದು ಕೊಡಲಾಗಲಿಲ್ಲ. ಇದರಿಂದ ಅತ್ತೆಯ ಕಾಟ ಮೆಲ್ಲಗೆ ಪ್ರಾರಂಭವಾಯಿತು. ಮೆಲ್ಲಗೆ ಹುಟ್ಟಿದ ಅತ್ತೆಯ ಕಾಟ ಕೆಲವು ತಿಂಗಳೊಳಗೇ ಹೊತ್ತಿ ಉರಿಯತೊಡಗಿತು. ಅಸ್ಪೃಶ್ಯರ ಮನೆಯಲ್ಲಿಯೇ ಸುಶೀಲ ಅಸ್ಪೃಶ್ಯಳಾದಳು.

ಶೀತದಿಂದಾಗಿ ಸುಶೀಲಮ್ಮನಿಗೆ 85ರ ಜೂನ್‌ನಲ್ಲಿ 'ಬೆಲ್ ಪಾಲಿಸಿ' ಎಂಬ ಕಾಯಿಲೆಯಾಗಿದ್ದು ವೈದ್ಯೋಪಚಾರದಿಂದ ಗುಣವಾಗಿತ್ತು. ಆದರೆ ಸೊಸೆಗೆ ಕಿರುಕುಳ ಕೊಡುತ್ತಿದ್ದ ನಾಗಮ್ಮನಿಗೆ ಇದೊಂದು ಅಸ್ತ್ರವಾಗಿ ಸೊಸೆಗೆ ಕಾಯಿಲೆಯಿದೆಯೆಂದು ಪುಕಾರು ಹಬ್ಬಿಸಿ ಗಂಡ ಹೆಂಡಿರ ಮಧ್ಯೆ ಲೈಂಗಿಕ ಸಂಪರ್ಕ ಕಡಿದುದಾಗಿ ಸುದ್ದಿ ಇದೆ.



ಸೊಸೆಯನ್ನು ಕುರಿತು ನಾಗಮ್ಮ "ನೀನೇಕೆ ಸಾಯಬಾರದು" ನೀನು ಸತ್ತರೆ ನನ್ನ ಮಗನಿಗೆ ಒಳ್ಳೆಯ ಹೆಣ್ಣು ತಂದು ಮದುವೆ ಮಾಡುತ್ತೇನೆ" ಎನ್ನುತ್ತಿದ್ದಳು. ಅದಕ್ಕೆ ಸೊಸೆ ಸುಶೀಲಮ್ಮನು "ನಾನಿದ್ದಂಗೆ ಮದುವೆ ಮಾಡಿ ನಾನೇನು ಅಡ್ಡ ಬರುವುದಿಲ್ಲ" ಎನ್ನುತ್ತಿದ್ದಳು.

ಮುರಾ ಮತ್ತು ಬೆಲ್‌ಪಾಲಿಸಿ, ಸೊಸೆಯನ್ನು ಬೈಯ್ಯಲು, ಕಾಟ ಕೊಡಲು ನೆವವಾಗಿದ್ದು ಆಕೆಯ ಅತ್ತೆಯ ಮೂಲ ಉದ್ದೇಶ, ತನ್ನ ಮಗನಿಗೆ ಹೆಚ್ಚು ವರದಕ್ಷಿಣೆ ತರುವ ಬೇರೊಂದು ಮದುವೆ ಮಾಡುವ ಇಚ್ಛೆ ಇದ್ದಿದ್ದು ಸ್ಪಷ್ಟವಾಗಿದೆ.

ಕಾರಣವೇ ಆಗಲಾರದಂತಹ ಕಾರಣ :

ದಿನಾಂಕ : 13-12-85ರ ಬೆಳಿಗ್ಗೆ ನಾಗಮ್ಮ ಜಗಳವಾಡಿದಳು. ಕಾರಣವೇ ಅಲ್ಲದ ಕಾರಣ ತೆಗೆದು ಜಗಳದಲ್ಲಿ ಸುಶೀಲಮ್ಮನ ಕಣ್ಣಿಗೆ ಖಾರದ ಪುಡಿ ಉಗ್ಗಿದಳು. ಆಮೇಲೆ "ನಾನು ಪಕ್ಕದಳ್ಳಿಗೆ (ಕುಡಿನೀರ ಕಟ್ಟೆ) ಹೋಗಿ ಬರ್ತೀನಿ, ಬರುವುದರೊಳಗೆ ನೀನು ಸಾಯಬೇಕು" ಎಂದಿದ್ದಳು. ಆಗ 11 ಗಂಟೆ ಸಮಯ. ಸುಶೀಲಮ್ಮ ಮನೆಯ ಬಾಗಿಲುಗಳನ್ನೆಲ್ಲಾ ಭದ್ರಮಾಡಿ ತನ್ನ 2 ವರ್ಷದ ಮಗು ವೇಣುಗೋಪಾಲನೊಂದಿಗೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳು. ತಾನು ಬೆಂಕಿ ಹಚ್ಚಿಕೊಳ್ಳುವ ಮೊದಲು ತನ್ನ ಹಾಗೂ ಮಗನ ಎಲ್ಲಾ ಬಟ್ಟೆಗಳನ್ನು ಗುಡ್ಡೆ ಹಾಕಿ ಅವಕ್ಕೂ

ಬೆಂಕಿ ಹಚ್ಚಿದ್ದಳು.

ಮಗುವಿನ ಚೀರಾಟ ಮತ್ತು ಮನೆಯ ಮೇಲಿಂದ ಬಂದ ಹೊಗೆಯಿಂದಾಗಿ ಸುತ್ತಮುತ್ತಲ ಜನ ಬಾಗಿಲನ್ನು ಒಡೆದು ರಕ್ಷಿಸುವುದರೊಳಗೆ ತಾಯಿ-ಮಗು ಅರ್ಧ ಸುಟ್ಟಿದ್ದರು. ಇಬ್ಬರನ್ನೂ ಹೊಳಲ್ಕೆರೆ ಸಾರ್ವಜನಿಕ ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿಂದ ತಕ್ಷಣ ದಾವಣಗೆರೆ ಆಸ್ಪತ್ರೆಗೆ ಸೇರಿಸಲಾಯಿತು. ಎರಡೂ ಕಡೆಯು ಸುಶೀಲಮ್ಮ ತನ್ನ ಆತ್ಮಹತ್ಯೆಗೆ ಅತ್ತೆಯ ಕಾಟವೇ ಕಾರಣವೆಂದು ಹೇಳಿಕೆ ಕೊಟ್ಟಿರುತ್ತಾಳೆ. ದಿನಾಂಕ 15-12-85ರ ಭಾನುವಾರ ಸುಶೀಲಮ್ಮನು ತನ್ನ ಗಂಡನೊಂದಿಗೆ ಈ ರೀತಿ ಹೇಳಿದ್ದಾಳೆ. "ನನಗೆ ನೀವೊಂದು ಮುತ್ತು ಕೊಡಿ, ನಿಮ್ಮ ಕೈಯಾರ ಒಂದು ಹಣ್ಣು ತಿನಿಸಿ" – ಎನ್ನುವ ಆಕೆಯ ಈ ಮಾತುಗಳೇ ಸಾಕು. ತನ್ನ ತನದ ಪ್ರೀತಿಯಿಂದ ಸುಶೀಲಮ್ಮ ವಂಚಿತಳಾಗಿದ್ದಳೆಂಬುದಕ್ಕೆ.

ಇದಲ್ಲದೆ ಇನ್ನೂ ಒಂದು ಮುಖ್ಯ ಅಂಶ. ಗಂಡ ಜಯ್ಯಪ್ಪನಿಗೆ ತಾನು ಕೆಲಸ ಮಾಡುತ್ತಿದ್ದ ಭದ್ರಾವತಿ ಅರಣ್ಯ ಇಲಾಖೆಯು ವಸತಿ (ಕ್ವಾರ್ಟಸ್) ಯನ್ನು ಎರಡು ವರ್ಷಗಳ ಹಿಂದೆಯೇ ಕೊಟ್ಟಿದ್ದರೂ ಯಾಕೆ ಈತ ತನ್ನೊಂದಿಗೆ ಹೆಂಡತಿಯನ್ನು ಕರೆದುಕೊಂಡು ಹೋಗಲಿಲ್ಲ ?

ಈ ಲೇಖನಕ್ಕೆ ಕೊಡುಗೆ
ಹೇಮಚಂದ್ರ ಬಸಪ್ಪ

ಮೇಲಿನಿಂದ ಅರ್ಧಭಾಗ ಬೆಂದಿದ್ದ ಮಗು ವೇಣು ಗೋಪಾಲ 14-12-85ರ ಬೆಳಿಗ್ಗೆ 5 ಗಂಟೆಗೆ ಮೃತ ಹೊಂದಿದ. ಕೆಳಗಿನಿಂದ ಅರ್ಧ ಭಾಗ ಬೆಂದಿದ್ದ ಸುಶೀಲಮ್ಮ 16–12–85ರಂದು ಕೊನೆಯುಸಿರೆಳೆದಳು. ನಂತರ 17–12–85ರಂದು ದಾವಣಗೆರೆ. ಸ್ಮಶಾನದಲ್ಲಿ ಸುಶೀಲಮ್ಮನನ್ನು ಸುಡಲಾಯಿತು.

13–12–85ರಂದು ಪ್ರಕರಣ ನಡೆದು ದಿನಗಳು ಕಳೆಯುತ್ತಾ ಬಂದರೂ ಸ್ಥಳೀಯ ಪೊಲೀಸರು ಯಾರ ಮೇಲೂ ಕ್ರಮ ತೆಗೆದುಕೊಳ್ಳದೇ ಇದ್ದುದು.

ಹೊಳಲ್ಕೆರೆ ತಾಲ್ಲೂಕು ದಲಿತ ಸಂಘರ್ಷ ಸಮಿತಿ ಶಾಖೆಯವರಿಗೆ ನೇರವಾಗಿ ಸಬ್ ಇನ್ಸ್‌ಪೆಕ್ಟರ್ ಜಿಲ್ಲಾ ರಕ್ಷಣಾಧಿಕಾರಿಗಳನ್ನು ಭೇಟಿ ಮಾಡಿ, ತೀವ್ರವಾದ ಒತ್ತಾಯ ಮಾಡಿದರು. ಅಲ್ಲದೆ ಸುಶೀಲಮ್ಮನ ಅಣ್ಣನಾದ ಎಸ್. ಜಯ್ಯಪ್ಪನಿಂದಲೂ ಒಂದು ಕಂಪ್ಲೇಂಟನ್ನು 3–1–86ರಂದು ರಿಜಿಸ್ಟರ್ಡ್ ಮಾಡಿದರು. ನಂತರ ದಿನಾಂಕ ; 4-1–86ರಂದು ರಾತ್ರಿ 10 ಗಂಟೆಗೆ ಅತ್ತೆ ನಾಗಮ್ಮ ಮತ್ತು ಗಂಡ ಜಯ್ಯಪ್ಪನನ್ನು ಬಂಧಿಸಿದರು.

ಹೀಗೆ ಸುಶೀಲಮ್ಮ ಹೆಣ್ಣಾಗಿ ತನ್ನ ಪ್ರಾಣವನ್ನು ಮತ್ತೊಂದು ಹೆಣ್ಣಿಗೆ ಕೊಟ್ಟಳು ಸಧ್ಯ ಬೇಲ್ ಮೇಲೆ ಹೊರಗೆ ಬಂದಿರುವ ಜಯ್ಯಪ್ಪ ಮತ್ತು ನಾಗಮ್ಮ ಇನ್ನೂ ಹೆಚ್ಚಿನ ಅಹಂಕಾರ, ದರ್ಪದಿಂದ ಮೆರೆಯುತ್ತಿರುವುದು, ಹಿಂದೂ–ಇಂಡಿಯಾ ವ್ಯವಸ್ಥೆಯ ಅತ್ಯಂತ ಕರಾಳ ಮುಖವಾಗಿದೆ.

ಗೋ. ತಿಪ್ಪೇಶ *

ಬಾಲೆಯರ ಸಾಹಸ



ಹೈಸ್ಕೂಲಿನ ಮೊದಲ ವರ್ಷದಲ್ಲಿದ್ದ, ಅನಿತ ಮತ್ತು ಇಂದು ಆಪ್ತಸ್ನೇಹಿತೆಯರು. ಒಬ್ಬರನ್ನೊಬ್ಬರು ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಚಿಕ್ಕಂದಿನಿಂದಲೂ ಇಬ್ಬರು ಒಟ್ಟಿಗೆ ಆಡಿ ಬೆಳೆದವರು. ಅವರ ಆಪ್ತತೆಗೆ ಬಾಲ್ಯದ ಈ ಒಡನಾಟವೂ ಬೆಸುಗೆಯಾಗಿತ್ತು. ಎಲ್ಲರಂತೆ ಕಾಡು ಹರಟೆ ಹೊಡೆದು ಕಾಲ ಕಳೆಯುತ್ತಿದ್ದ ಅನಿತ ಮತ್ತು ಇಂದುಗೆ, ಯಾರೂ ಮಾಡದೇ ಇರುವ ಕೆಲಸವನ್ನು ತಾವು ಮಾಡಬೇಕು ಎಂದು ಒಮ್ಮೊಮ್ಮೆ ಅನಿಸಿದ್ದೂ ಉಂಟು.

ಅನಿತಾ, ಇಂದುಳ ಶಾಲೆ ಊರಿಗೆ ಸ್ವಲ್ಪ ಹೊರಗಿದ್ದುದರಿಂದ ಇವರು ನಿರ್ಜನ ಬಯಲುಗಳನ್ನು ಹಾದು ಬರಬೇಕಿತ್ತು. ಅದೊಂದು ದಿನ ಎಂದಿನಂತೆ ಇಬ್ಬರು ಶಾಲೆ ಮುಗಿಸಿಕೊಂಡು ಮನೆಯ ಕಡೆಗೆ ಹೆಜ್ಜೆ ಹಾಕುತ್ತಿದ್ದರು. ಆಗ ಇದ್ದಕ್ಕಿದ್ದಂತೆ ಒಂದು ಕರಿ ನಾಯಿ ಇವರ ಹತ್ತಿರ ಬಂದು ಕಾಲನ್ನು ಮೂಸಿ ಕುಂಯ್ ಗುಡುತ್ತಾ, ಬಾ ಎನ್ನುವಂತೆ ತಲೆಯಲ್ಲಾಡಿಸಿತು. ನಾಯಿಯ ವರ್ತನೆ ಇವರಿಬ್ಬರಿಗೆ ಅಚ್ಚರಿತಂದರೂ, ಇದರಲ್ಲಿ ಏನೋ ವಿಶೇಷವಿರುವುದೆಂದು ರೋಮಾಂಚಿತರಾಗಿ, ಆ ನಾಯಿಯನ್ನು ಹಿಂಬಾಲಿಸತೊಡಗಿದರು. ಅದು ಸಮೀಪದಲ್ಲಿರುವ ಬೆಟ್ಟದ ಹತ್ತಿರ ಹೋಯಿತು. ಗುಹೆಯಂತಿದ್ದ ಬಂಡೆಯೆಡೆ ಹೋಗಿ ಜೋರಾಗಿ ಬೊಗಳತೊಡಗಿತ್ತು. ಇಂದು ಮತ್ತು ಅನಿತಾಳಿಗೆ ಮನದಲ್ಲಿ ಅಂಜಿಕೆಯಿದ್ದರೂ, ಒಬ್ಬರಿಗೊಬ್ಬರು ಧೈರ್ಯ ತಂದುಕೊಂಡರು. ನಾಯಿ ಬೊಗಳಿದ ತಕ್ಷಣದಲ್ಲಿಯೇ ಇಬ್ಬರು ದಢೂತಿ ವ್ಯಕ್ತಿಗಳು ಬಂದು, ಅವರಿಬ್ಬರನ್ನು ಎಳೆದುಕೊಂಡು ಗುಹೆಯ ಒಳಗೆ ಕರೆದೊಯ್ದರು. ಪಾಪ, ಆಗ ಅವರಿಗೆ ಗೊತ್ತಾಯಿತು, ನಾಯಿ ತಮಗೆ ಮೋಸ ಮಾಡಿತೆಂದು.

ಒಂದು ವಿಶಾಲವಾದ ಕೋಣೆಯಲ್ಲಿ, ವಿಕಾರವಾದ ಮನುಷ್ಯನ ಮುಂದೆ ಇವರಿಬ್ಬರನ್ನು ತಂದು ನಿಲ್ಲಿಸಲಾಯಿತು. ಆ ವ್ಯಕ್ತಿಯನ್ನು ನೋಡಿದರೇ ಹೇಳಬಹುದಿತ್ತು, ಅವನೇ, ಈ ಕಳ್ಳ ವ್ಯವಹಾರದ ನಾಯಕನೆಂದು. ಅವನು ವಿಕಾರವಾಗಿ ಹಲ್ಲು ಕಿಸಿಯುತ್ತಾ ಇವರಿಬ್ಬರಿಗೂ ಹೇಳಿದ, "ಏನು ಮಕ್ಕಳೇ ಹಾಗೆ ನೋಡುತ್ತಿರುವಿರಿ, ಭಯವಾಗುತ್ತಿದೆಯಾ ?" ಎಂದು. ಇಂದುವಿಗೆ ಅವನ ಮಾತಿನಿಂದ ರೋಷವೇರಿತು. ಕೋಪ, ದುಃಖ ಎರಡೂ ಉಮ್ಮಳಿಸಿ ಬಂದವು. ಆದರೆ ಅವಳು ಅಸಹಾಯಕಳಾಗಿದ್ದಳು. ಪುನಃ ಆ ದಢೂತಿ ವ್ಯಕ್ತಿ, "ಮುದ್ದು ಮಕ್ಕಳೇ ನಿಮ್ಮನ್ನು ಇಲ್ಲಿಗೆ ಕರೆತಂದಿರುವ ಉದ್ದೇಶವೇನು ಗೊತ್ತಾ ?" ಎಂದ. ಧೈರ್ಯವಹಿಸಿದ ಅನಿತ ಇಲ್ಲನೆಂದು ತಲೆಯಲ್ಲಾಡಿಸಿದಳು. ಆ ವ್ಯಕ್ತಿ ಪುನಃ ವಿಕಾರವಾಗಿ ನಗುತ್ತಾ, "ಗೊತ್ತಾಗುತ್ತದೆ, ಗೊತ್ತಾಗುತ್ತದೆ... ಇನ್ನು ಸ್ವಲ್ಪ ದಿನಗಳಲ್ಲಿ" ಎಂದಷ್ಟೆ ಹೇಳಿ ಚಪ್ಪಾಳೆ ತಟ್ಟಿದನು. ಆಗ ಮತ್ತಿಬ್ಬರು ವ್ಯಕ್ತಿಗಳು ಬಂದು ಅನಿತಾ ಮತ್ತು ಇಂದುವನ್ನು ಇನ್ನೊಂದು ಕೋಣೆಗೆ ಕರೆದೊಯ್ದು ಕೂಡಿಹಾಕಿಬಿಟ್ಟರು. ಆ ಕೋಣೆಯಲ್ಲಿ ಇನ್ನೂ ಅನೇಕಾನೇಕ ಮಕ್ಕಳಿದ್ದರು. ಈ ತರಹದ ವಿಚಿತ್ರವನ್ನು ಸಿನಿಮಾ, ಕತೆಗಳಲ್ಲಷ್ಟೆ ಕೇಳಿದ್ದ ಆ ಮಕ್ಕಳಿಗೆ ಈಗ ನಿಜವಾಗಿಯೂ ಹೆದರಿಕೆಯಾಯಿತು. ಭಯವನ್ನು ನಿವಾರಿಸಿಕೊಳ್ಳಲು ಅಲ್ಲಿದ್ದ ಇತರ ಮಕ್ಕಳ ಪರಿಚಯ ಮಾಡಿಕೊಂಡು, ಹೀಗೆ ತಮ್ಮನ್ನು ಬಂಧಿಸಿರುವ ಉದ್ದೇಶವೇನಿರಬಹುದೆಂದು ಕೇಳಿದರು. ಸ್ವಲ್ಪ ಹಿರಿಯವನಾದ ಹುಡುಗನೊಬ್ಬ "ನಮ್ಮೆಲ್ಲರನ್ನು ಅಂಗವಿಕಲರನ್ನಾಗಿ ಮಾಡಿ, ಪಟ್ಟಣಗಳಲ್ಲಿ ದಾರಿಯ ಮಧ್ಯೆ ಬಿಡುತ್ತಾರೆ. ನಮ್ಮನ್ನು ಕಂಡು ಪಾಪ ಎಂದುಕೊಂಡು ಹಣ ಕೊಡ್ತಾರಲ್ಲ ಆ ಹಣವನ್ನು ಇವರು ತೆಗೆದುಕೊಂಡು ಮಜಾಮಾಡ್ತಾರೆ. ಇಲ್ಲವೇ ನಮ್ಮ ಅಪ್ಪ ಅಮ್ಮಂದಿರಿಗೆ ನಮ್ಮನ್ನು ಕೊಲೆ ಮಾಡುತ್ತೇವೆಂದು ಹೆದರಿಸಿ, ಅವರಿಂದ ಸಾವಿರಗಟ್ಟಲೆ ಹಣ ಕಸಿಯುತ್ತಾರೆ. ಇಷ್ಟೆ ಇವರ ಉದ್ದೇಶ" ಎಂದನು. ಆಗ ಅಲ್ಲಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಬೇಕೆಂದು ಯೋಚಿಸ ಹತ್ತಿದರು ಅನಿತ ಮತ್ತು ಇಂದು.

ಕೋಣೆಯಲ್ಲಿಯೇ ಮೂಲೆಯೊಂದರಲ್ಲಿದ್ದ ಕಿಂಡಿಯನ್ನು ನೋಡುತ್ತಿದ್ದ ಅನಿತಾಗೆ ಒಂದು ಉಪಾಯ

ಹೊಳೆಯಿತು. ತಕ್ಷಣ ಇಂದುವಿಗೆ, ಅಲ್ಲಿದ್ದ ಕಿಂಡಿಯನ್ನು ತೋರಿಸಿ ಅದನ್ನು ಅಗಲಮಾಡಿ ಯಾರಿಗೂ ಗೊತ್ತಾಗದ ಹಾಗೆ ಹೊರಗೆ ಹೋಗಬಹುದು ಎಂದಳು. ಇಂದು ಅಳುತ್ತಲೇ ಒಪ್ಪಿಕೊಂಡಳು. ಅಲ್ಲಿದ್ದ ಮಕ್ಕಳಿಗೆ ಆ ಖದೀಮರು ಅಂದು ಸಭೆ ಸೇರುವರೆಂದು ಗೊತ್ತಿತ್ತು. ಅದನ್ನು ತಿಳಿದ ತಕ್ಷಣ ಇಂದು ಮತ್ತು ಅನಿತ ಕಾರ್ಯೋನ್ಮುಖರಾದರು. ಪಕ್ಕದಲ್ಲಿಯೇ ಇದ್ದ ದಪ್ಪ ಕಲ್ಲಿನಿಂದ ಸದ್ದಿಲ್ಲದಂತೆ ಕಿಂಡಿಯನ್ನು ಅಗಲ ಮಾಡಿ ಅಲ್ಲಿದ್ದ ಮಕ್ಕಳಿಗೆ ತಮ್ಮ ಉಪಾಯ ತಿಳಿಸಿ, ಅವರಿಬ್ಬರೆ ಹೊರಬಂದರು. ಆಚೆಯ ಬದಿಯಲ್ಲಿ ಎಲ್ಲರೂ ಸಂಭಾಷಣೆ ನಡೆಸುತ್ತಿದ್ದರು. ಇಂದು ಅದು ಸಭೆಯಿರಬೇಕೆಂದು ಅನಿತಾಳ ಕಿವಿಯಲ್ಲಿ ಉಸುರಿದಳು. ಅವರ ಕಣ್ಣಿಗೆ ಬೀಳದಂತೆ ಮೆಲ್ಲಗೆ ಬಗ್ಗಿ ಬಂದರು. ಇತ್ತ ಇನ್ನೊಂದು ಕಡೆಯಲ್ಲಿ ಮೂಳೆ, ತಲೆಬುರುಡೆ, ಇನ್ನೂ ಅವರಿಗೆ ಗೊತ್ತಿಲ್ಲದಂತಹ ಏನೇನೊ ಚಿತ್ರವಿಚಿತ್ರವಾದ ವಸ್ತುಗಳಿದ್ದವು. ಅದನ್ನು ಕಂಡು ಅನಿತ ನಡುಗಿಹೋದಳು. ಇಂದು ಅವಳನ್ನು ಬೇಗ ನಡಿ ಇಲ್ಲದಿದ್ದರೆ ಹೊತ್ತಾಗುವುದು ಎಂದು ಎಚ್ಚರಿಸಿದಳು. ಇಬ್ಬರೂ ಬೇಗಬೇಗ ಹೆಜ್ಜೆಯಿಟ್ಟರು. ಅವರು ಬಂದ ದಾರಿ ಹಿತ್ತಲಿನ ಕಡೆಯದಾಗಿತ್ತು. ಹಿತ್ತಲಿನ ಬಾಗಿಲಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಸಭೆಗೆ ಹೋಗಿರಬೇಕೆಂದುಕೊಂಡು ಅವರಿಬ್ಬರು ತಡಮಾಡದೆ ಓಡಿಓಡಿ ಏದುಸಿರುಬಿಡುತ್ತಾ ಮನೆಯ ಸಮೀಪ ಬಂದರು.

ಬಾರದಿದ್ದ ಸಮಯಕ್ಕೆ ಬರದಿದ್ದ ಮಕ್ಕಳನ್ನು ಕಂಡು ಇವರ ಅಪ್ಪ–ಅಮ್ಮಂದಿರಿಗೆ ಕೋಪ ನೆತ್ತಿಗೇರಿತ್ತು. ನಡೆದ ವಿಷಯವನ್ನು ಇಬ್ಬರೂ ಮನೆಯವರಿಗೆ ತಿಳಿಸಿದಾಗ, ಅವರ ಕೋಪ ತಣ್ಣಗಾಗಿ ಹೋಯಿತು. ಮನೆಯವರೊಂದಿಗೆ ಪೊಲೀಸ್‌ಠಾಣೆಗೆ ಹೋಗಿ ವಿಷಯವನ್ನೆಲ್ಲಾ ಹೇಳಿದರು.

ಮಾರನೇ ದಿನ ಬೆಳಿಗ್ಗೆ ಪೊಲೀಸ್ ಜೊತೆ ಇಂದು, ಅನಿತಾಳೂ ಕಳ್ಳರ ಶೋಧನೆಗೆ ಸಹಾಯಕರಾಗಿ ಹೊರಟರು. ಗುಹೆ ಸಮೀಪಿಸುತ್ತಿದ್ದಂತೆಯೇ ಜೀಪು ನಿಂತಿತು. ಮೆಲ್ಲಗೆ ಎಲ್ಲರೂ ಗುಹೆಯ ಕಡೆ ನಡೆದರು. ಅಲ್ಲಿನ ಕಾವಲುಗಾರ ಪಾಪ ರಾತ್ರಿ ನಿದ್ರೆಯಿಲ್ಲದೆ ಆಗ ನಿದ್ರಿಸುತ್ತಿದ್ದ. ಪೊಲೀಸರು ಮೊದಲು ಅವನನ್ನು ಬಂಧಿಸಿದರು. ನಂತರ ಒಳಗೆ ಹೋಗಿ ಒಬ್ಬೊಬ್ಬರನ್ನಾಗಿ ಬಂಧಿಸತೊಡಗಿದರು. ಎಲ್ಲರೂ ಸಿಕ್ಕಿದರು. ಆದರೆ ಕಳ್ಳರ ನಾಯಕ ಸಿಗಲಿಲ್ಲ. ಕಳ್ಳ ! ಅವನು ಹಿತ್ತಲಿನ ಕಡೆಯಿಂದ ತಪ್ಪಿಸಿಕೊಳ್ಳುವವನಿದ್ದ. ಹಿಂದಿನ ಬಾಗಿಲಿನಲ್ಲಿಯೇ ಇದ್ದ ಇಂದು ತಕ್ಷಣ ತನ್ನ ಕರಾಟೆ ಪೆಟ್ಟೊಂದನ್ನು ಕೊಟ್ಟಳು. ಅನಿತಾ ಸಮೀಪದಲ್ಲಿದ್ದ ಕೋಲಿನಿಂದ ಬಲವಾಗಿ ಬಾರಿಸಿದಳು. ಅಷ್ಟರಲ್ಲೆ ಅಲ್ಲಿಗೆ ಬಂದ ಪೊಲೀಸರು ಅವನನ್ನು ಬಂಧಿಸಿದರು. ಅಲ್ಲಿ ಬಂಧಿಯಾಗಿದ್ದ ಮಕ್ಕಳೆಲ್ಲರೂ ನಿರ್ಬಂಧಿತರಾಗಿ, ಪಂಜರದಿಂದ ಹಾರಿಬಿಟ್ಟ ಹಕ್ಕಿಗಳಂತೆ, ಸಂತೋಷದಿಂದ ತಮ್ಮ ಮನೆಗಳಿಗೆ ವಾಪಾಸ್ಸಾದರು. ಪೊಲೀಸರು ಇಂದು ಮತ್ತು ಅಸಿತಾಗೆ ದೊಡ್ಡ ಬಹುಮಾನ ಕೊಡುವುದಾಗಿ ಹೇಳಿದರು.

ಮಾರನೇ ದಿನದ ದಿನಪತ್ರಿಕೆಯಲ್ಲಿ ಅಸಿತಾ ಮತ್ತು ಇಂದುಳ ಫೋಟೋ, ಅದರ ಕೆಳಗೆ ದಪ್ಪಕ್ಷರದಲ್ಲಿ "ಇಬ್ಬರು ಹನ್ನೆರಡು ವರ್ಷದ ಬಾಲಕಿಯರಿಂದ ದೇಶದ್ರೋಹಿಗಳ ಗುಂಪು ಸಿಕ್ಕಿದೆ" ಎಂದಿತ್ತು. ಇದನ್ನು ಕಂಡ ಮನೆಯವರಿಗೆಲ್ಲರಿಗೂ ಸಂತೋಷ. ಇಂದು, ಸಂತೋಷದ ಭರದಲ್ಲಿ ತನ್ನ ಅಣ್ಣನನ್ನು "ನೋಡೋ ಲೋ, ಹುಡುಗಿ ಹುಡುಗಿ ಎಂದು ಹೀಯಾಳಿಸುತ್ತಿದ್ದೆಯಲ್ಲಾ, ಹೇಗಿದೆ ಈ ಹುಡುಗಿಯರ ಸಾಹಸ, ಎಂದು ಹುಬ್ಬುಕುಣಿಸಿ, ಆನಂದದಿಂದ ಕೇಕೆಹಾಕತೊಡಗಿದಳು.

—**ಮಂದಾಕಿನಿ**

ಓದುಗರ ವಿಭಾಗ

ಮಹಿಳೆಯರ ಏಳಿಗೆಗಾಗಿ ಶ್ರಮಿಸುತ್ತಿರುವ ನಿಮಗೆ ಜಯವಾಗಲಿ. ನಿಮ್ಮ ಸಾಧನೆ ಅತಿ ಬೇಗನೆ ಗುರಿ ಮುಟ್ಟಲಿ. ನಿಮ್ಮ ಪತ್ರಿಕೆಗೆ ಸದಾ ಬೆಂಬಲವಿದೆ ಎಂದು ತಿಳಿಸಲು ಹರ್ಷಪಡುತ್ತೇನೆ.

ಬುಚ್ಚಿ ಬಾಬು
ಕೊಡಿಗೇನಹಳ್ಳಿ

'ಮಾನವಿ' ಪತ್ರಿಕೆ ಬೆಳೆಯಲಿ ಉಳಿಯಲಿ

ಗೊರೂರ್ ಎಸ್. ಪರಮೇಶ್
ಮೈಸೂರು

'ಮಾನವಿ' ಹೆಸರು ಚೆನ್ನಾಗಿದೆ. ಮತ್ತು ಇದು ಮಹಿಳಾ ಪತ್ರಿಕೆಯಾದ್ದರಿಂದ ಹೆಸರು ಹೊಂದುತ್ತದೆ. 'ಮಾನವಿ'ಗೆ ನಮ್ಮ ಸಹಕಾರ ಯಾವಾಗಲೂ ಇರುತ್ತದೆಂದು ತಿಳಿಸಲು ಹರ್ಷಿಸುತ್ತೇನೆ.

ಆಶಾಕಿರಣ
ಚಿಕ್ಕಮಗಳೂರು

ಸಾಮಾಜಿಕ ಆರೋಗ್ಯದ ಕಡೆ ಗುರಿ ಇಟ್ಟಾಗ ಅದು ಯಾವ ಸಂಘಟನೆ, ವೇದಿಕೆಯಾದರೂ ಸರಿಯೇ ಅದನ್ನು ಮುಟ್ಟುವಂತಹ ಗುರಿಯನ್ನು ಹೊಂದಬೇಕು. 'ಮಾನವಿ'ಗೆ ನನ್ನ ಸಹಕಾರ ಕೊಡುವುದು ನನ್ನ ಕರ್ತವ್ಯ.

ಗೋ. ತಿಪ್ಪೇಶ್
ಹೊಳಲ್ಕೆರೆ

ಮಹಿಳೆಯರ ಸಮಸ್ಯೆಗಳ ಪರಿಹಾರಕ್ಕೆಂದೇ ಪ್ರಕಟವಾಗುತ್ತಿರುವ ಪತ್ರಿಕೆ ಎಂದು ಕೊಂಡು ಪೂರ್ವಾಗ್ರಹ ಪೀಡಿತರಾಗದೇ ಪುರುಷರು ಬರೆದ ಉತ್ತಮ ಲೇಖನಗಳನ್ನು ಪ್ರಕಟಿಸಿದರೆ ಸೌಹಾರ್ದತೆಗೊಂದು ಉತ್ತಮ ಸೋಪಾನವಾಗಬಹುದಲ್ಲವೆ?

ಚಿತ್ರಶೇಖರ ಕಂಠಿ
ಯಾದಗಿರಿ

ಇಂದು ಮಹಿಳೆಯು ಮಾನಸಿಕವಾಗಿ ಬೆಳೆಯಬೇಕಾಗಿದೆ. ಅಂಥ ಬದಲಾವಣೆಯನ್ನು "ಮಾನವಿ" ತರಲು ಪ್ರಯತ್ನಿಸಲಿ ಎಂದು ಆಶಿಸುತ್ತೇನೆ.

ಶಿವಲೀಲಾ ತೇರದಾಳ
ಜಮಖಂಡಿ

ನಿಮ್ಮ ಹೊಸ ಪತ್ರಿಕೆ 'ಮಾನವಿ'ಗೆ ನನ್ನ ಸಹಕಾರ ಸಹಾಯ ಎಂದಿಗೂ ಇದೆ.

ಸರಸ್ವತಿ ಮೋಹನ್
ಕಂಪಲಾಪುರ

ನಿಮಗೆ ನನ್ನ ಸಹಾಯ ಬೆಂಬಲ ಸದಾ ಇದೆ.

ಸುನಿತಾ ಬೆಟಕೆರೂರ್
ಹಾಸನ

"ಮಾ "ಯ ಉದ್ದೇಶ ಆರೋಗ್ಯಕರವಾಗಿದೆ. ನಿಮ್ಮ ಪ್ರಗತಿಪರ ಆಲೋಚನೆಗೆ ಆಂದೋಲನಕ್ಕೆ ನನ್ನ ಬೆಂಬಲ ಪ್ರೋತ್ಸಾಹ ಇದ್ದೇ ಇದೆ.

ಟಿ. ಧರಣೇಶ್
ಚನ್ನಪಟ್ಟಣ

ಸ್ತ್ರೀ ಶೋಷಣೆಯ ವಿರುದ್ಧ ಸಿಡಿದು ನಿಂತು ಧ್ವನಿ ಎತ್ತುತ್ತಿರುವ ನಿಮ್ಮ 'ಮಾನವಿ' ಪತ್ರಿಕೆಯ ಕಹಳೆಯ ಕೂಗು ಎಲ್ಲರನ್ನು ಮುಟ್ಟಲಿ, ತಟ್ಟಲಿ, ಎಚ್ಚರಿಸಲಿ ಎಂದು ಶುಭ ಹಾರೈಸುತ್ತೇನೆ. ನಿಮ್ಮ ಈ ಕಳಕಳಿಯ ಕ್ರಿಯೆಗೆ ಪ್ರಾಮಾಣಿಕ ಅಳಿಲು ಸೇವೆಯನ್ನು ಕಾದಿರಿಸಿದ್ದೇನೆ.

ಎ. ಚಿದಾನಂದ ಗೌಡ
ಸಾಗರ

ಪ್ರಸಕ್ತ ಸಮಾಜದಲ್ಲಿ ಸ್ತ್ರೀಯರ ನಿರಂತರ ಶೋಷಣೆ ಮಾನವೀಯತೆ ಇರುವವರೆಲ್ಲರೂ ಜಿಗುಪ್ಸೆ ತರುತ್ತದೆ. ಇಂತಹ ನಡೆಗಳ ವಿರುದ್ಧ ನಮ್ಮ ಸ್ತ್ರೀಯರ ಧ್ವನಿ ಬಲಗೊಳ್ಳಬೇಕು. ಈ ಧ್ವನಿಗಳಿಗೆ ಸಮಾಜದ ಇತರೇ ವರ್ಗಗಳು ಬೆಂಬಲದ ಧ್ವನಿ ನೀಡಬೇಕು.

ರಾಜೇಂದ್ರ ಕುಮಾರ್
ದೊಡ್ಡ ಬಳ್ಳಾಪುರ

"ಮಾನವಿ" ಬಹುಕಾಲ ಉಳಿಯಲೆಂದು ಹಾರೈಸುವೆ.

ವೈದೇಹಿ
ಉಡುಪಿ

'ಮಾನವಿ' ಎಂದೆಂದೂ ಮಾನವೀಯತೆಯಿಂದ ಬೆಳೆಯಲಿ.

ಭಾಗೀರಥಿ ಶಂಕರ್
ಬೆಳಗಾವಿ

'ಮಾನವಿ' ಪತ್ರಿಕೆಗೆ ನನ್ನ ಸಹಕಾರ ಪ್ರೋತ್ಸಾಹಗಳು ನಿರಂತರವಾಗಿದೆ. ಪತ್ರಿಕೆ ದೀರ್ಘಕಾಲ ಉಳಿಯಲಿ ಬೆಳೆಯಲಿ ಬಾಳಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಎಂ. ವಿ. ಸಾವಿತ್ರಿ ಮುರಗುಂದ

"ಮಾನವಿ"ಗೆ ನನ್ನ ಹಾರ್ದಿಕ ಶುಭಾಶಯಗಳು.

ಕೆ. ಪಿ. ಸತ್ಯನಾರಾಯಣ
ಚಿಕ್ಕಮಗಳೂರು

ಸಿನಿಮಾ

"ಘೋಷಣೆಗಳಿಂದ ಬದಲಾವಣೆ ಆಗದು"

—ಅಪರ್ಣಾಸೇನ್



ಸೂಕ್ಷ್ಮ ಮನಸ್ಸಿನ ಆದರೆ ಆತ್ಮ ಪ್ರತಿಷ್ಠೆಯ ಧೋರಣೆಯುಳ್ಳ ಅಪರ್ಣಾಸೇನ್ ಒಬ್ಬ ಅಪೂರ್ವ ಮಹಿಳಾ ನಿರ್ದೇಶಕಿ. ನಟಿಯಾಗಿ ಬೆಳ್ಳಿ ತೆರೆಗೆ ಅಡಿ ಇಟ್ಟ ಅಪರ್ಣ ಇಂದು ಅತ್ಯುತ್ತಮ ನಿರ್ದೇಶಕಿ ಯೆಂಬ ಕೀರ್ತಿಗೆ ಪಾತ್ರರಾಗಿದ್ದಾರೆ. "36 ಚೌರಂಗಿ ಲೇನ್" ನೇರುಕೃತಿ ಅವರನ್ನು ಸತ್ಯಜಿತ್‌ರೇ, ಮೃಣಾಲ್‌ಸೇನ್ ಮುಂತಾದ ಶ್ರೇಷ್ಠ ನಿರ್ದೇಶಕರ ಪಟ್ಟಿಗೆ ಸೇರಿಸಿತು. ಇತ್ತೀಚಿನ ಅವರ ಚಿತ್ರ 'ಪರೋಮಾ' ವಿವಾದದ ಅಲೆಗಳನ್ನೆಬ್ಬಿಸಿದೆ. ಮಧ್ಯ ವಯಸ್ಸಿನ ಸ್ತ್ರೀಯೊಬ್ಬಳು ತನ್ನ ಸುಖ ಸಂಸಾರದ ಪರಿಧಿಯನ್ನು ಮೀರಿ ಯುವಕನೊಬ್ಬ ನೊಡನೆ ಇಟ್ಟುಕೊಳ್ಳುವ ದೈಹಿಕ ಸಂಬಂಧದ ಸುತ್ತ ಹೆಣೆಯಲ್ಪಟ್ಟ ಈ ಕಥಾವಸ್ತುವನ್ನು ಅಪರ್ಣ "ತಾಯಿಯಾಗಿ, ಹೆಂಡತಿಯಾಗಿ, ಸಹೋದರಿಯಾಗಿಯೇ ಪರಿಗಣಿಲ್ಪಡುವ ಸ್ತ್ರೀ ಯೊಬ್ಬಳ ವ್ಯಕ್ತಿತ್ವದ ಅರಸುವಿಕೆಯೇ ಚಿತ್ರದ ಅಂತರಂಗದ ಕಥಾವಸ್ತು" ಎಂದು ಸಮರ್ಥಿಸಿ ಕೊಳ್ಳುತ್ತಾಳೆ.

ಅಪರ್ಣಸೇನ್‌ರ ವೈರುಧ್ಯಮಯ ಅಭಿಪ್ರಾಯ ಗಳನ್ನು ಹಾಗೂ ಅವರ ಸೀಮಿತ ದೃಷ್ಟಿಕೋನ ಗಳನ್ನು ಟೀಕಿಸುವ ಬಹಳಷ್ಟು ಮಹಿಳಾ ಸಂಘಟನೆ ಗಳು ಅವಳೊಬ್ಬ "ಸ್ತ್ರೀ ಪ್ರಜ್ಞೆಯ ನಿರ್ದೇ ಶಕಿಯೇ" ಅಲ್ಲವೆಂದು ಭಾವಿಸುತ್ತವೆ. ಈ ಪುಟ್ಟ ಲೇಖನದಲ್ಲಿ ಅಪರ್ಣಾಸೇನ್ ಚಿತ್ರನಿರ್ದೇಶಕಿಯಾಗಿ ತಮ್ಮ ಅನುಭವಗಳು ಮತ್ತು ಅನಿಸಿಕೆಗಳಿಗೆ ಅಭಿವ್ಯಕ್ತಿ ನೀಡಿದ್ದಾರೆ.

ನನ್ನನ್ನು ಸಂದರ್ಶಿಸಲು ಬರುವವರೆಲ್ಲರೂ ಕೇಳುವ ಒಂದು ಅನಿವಾರ್ಯ ಪ್ರಶ್ನೆಯೆಂದರೆ "ಮಹಿಳಾ ನಿರ್ದೇಶಕಿ ಯಾಗಿ ನೀವು ಎದುರಿಸಿದ ಸಮಸ್ಯೆಗಳೇನು ? ಈ ಪ್ರಶ್ನೆಗೆ ಸದಾ ನನ್ನ ಉತ್ತರ "ಸಮಸ್ಯೆಗಳೇ ಇಲ್ಲವೆಂದು".

ನನ್ನ ಈ ಉತ್ತರದಿಂದಾಗಿ ಕೆಲವು ಸಂದರ್ಶಕರು ಅಚ್ಚರಿಗೊಂಡಿದ್ದರೆ, ಕೆಲವರು ನಿರಾಶೆಗೊಂಡು, ನನ್ನನ್ನು ಪರಿತಾಪಗೊಳ್ಳುವಂತೆ ಮಾಡಿದ್ದಾರೆ. ಏನೇ ಆದರೂ, ಸತ್ಯ ಮಾತ್ರ ಬದಲಾಗುವುದಿಲ್ಲ. ಮಹಿಳಾ ನಿರ್ದೇಶಕಿ ಯಾಗಿ ಮಾತ್ರ ಯಾವುದೇ ಸಮಸ್ಯೆಯನ್ನು ಎದುರಿಸ ದಿರುವುದು ಮಾತ್ರವಲ್ಲ, ಪುರುಷ ನಿರ್ದೇಶಕರು ಸಾಮಾನ್ಯವಾಗಿ ಎದುರಿಸುವ, ನಟ, ನಟಿಯರ ದಿನಾಂಕ ಗಳಿಗಾಗಿ ಕಾಯುವುದು, ಸಂಕಲನ ಕೋಣೆಯು ದೊರೆಯ ದಿರುವುದು, ತಾಂತ್ರಿಕ ಉಪಕರಣಗಳ ಕೊರತೆ, ಮುಂತಾದ ಸಮಸ್ಯೆಗಳು ನನಗೆ ಉಂಟಾಗಿಲ್ಲ. ಹಾಗೆ ನೋಡಿದರೆ "ಅಯ್ಯೋ ಹೆಂಗಸೊಬ್ಬಳು ಚಲನಚಿತ್ರ ಮಾಡುವ ಮಹಾ ಅಪರಾಧಕ್ಕೆ ಕೈಹಾಕಿದ್ದಾಳೆಂಬ ಪುರುಷರ ದಯಾಪರ, ಕರುಣಾಪೂರಿತ ಧೋರಣೆಯೇ ನನ್ನ ಕೆಲಸವನ್ನು ಮತ್ತಷ್ಟು ಸುಲಭಗೊಳಿಸಿತು.

ಕೇವಲ ಮಹಿಳೆಯೊಬ್ಬಳು ಉತ್ತಮ ಚಿತ್ರವನ್ನು ತೆಗೆಯಬಲ್ಲಳೆಂಬುದನ್ನು ರುಜುವಾತುಪಡಿಸುವವರೆಗೆ

ನಾನು ಕೃತಜ್ಞತೆ ಹಾಗೂ ಸಮಾಧಾನದಿಂದ ಇಂತಹ ಆರೋಪಗಳಿಗೆ ಆಸ್ಪದ ನೀಡಿದೆ.

ಸಿನಿಮಾ ಮಾಡುವ ಸಾಹಸ ಕಾರ್ಯವನ್ನು ನಾನು ಕೈಗೊಂಡಾಗ, ಕೆಲವರ ಅಪನಂಬಿಕೆಯ ನೋಟವನ್ನು ಮೀಸೆಯ ಹಿಂದೆ ಅಡಗಿದ್ದ ವ್ಯಂಗ್ಯದ ನಗುವನ್ನು ನಾನು ಎದುರಿಸಿದ್ದು ಉಂಟು. ಕೆಲವರು "ನಿಜವೇ ? ಹೊಂ— ಆಶ್ಚರ್ಯಕರವಾಗಿದೆ ಎಂದು ಉದ್ಗರಿಸಿದ್ದಾರೆ. ನನಗೇನಾದ್ರು ವಯಸ್ಸಾಗಿದ್ರೆ, ಅಥವಾ ನೋಡಲು ಕುರೂಪಿಯಾಗಿದ್ರೆ, ಜೀವನದಲ್ಲಿ ಏನೋ ಸಾಧನೆ ಮಾಡ್ತಾ ಇದೀನಿ ಅನ್ನೋ ಸಮರ್ಥನೆಯಾದರೂ ಇರುತ್ತಿತ್ತು.

ಆದರೆ ನಾನಿನ್ನು ಸುಂದರ ಯುವತಿಯಾದ ಕಾರಣ ಕೇವಲ ಭೋಗದ ವಸ್ತುವಾಗಿ ತೃಪ್ತಿ ಪಡದೆ, ಸಿನಿಮಾ ಮಾಡುವ ಸಾಹಸಕ್ಕೆ ಏಕೆ ತೊಡಗುತ್ತಾಳೆ? ಇದನ್ನೆಲ್ಲಾ ಗಮನಿಸಿದ ನಾನು ಒಳಗೇ ನಗುತ್ತಿದ್ದೆ. ವ್ಯಕ್ತಿಯ ಬಾಹ್ಯ ನೋಟದಿಂದ, ಅಥವಾ ವ್ಯಕ್ತಿಯ ಲಿಂಗದ ಆಧಾರದಿಂದ ನಿರ್ಧಾರಕ್ಕೆ ಬರುವ ಮೂರ್ಖರ ಬಗೆಗೆ ನನಗೆ ತಾಳ್ಮೆ ಇಲ್ಲ. ನನ್ನ ಸೃಜನಶೀಲ ಕ್ರಿಯೆಯಾದ ಚಿತ್ರ ನಿರ್ಮಾಣದಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದರಿಂದ ಕ್ಷುಲ್ಲಕ ಕಾರಣಗಳಿಗೆ ನಾನು ತಲೆಕೆಡಿಸಿಕೊಳ್ಳಲಿಲ್ಲ.

ನಾನು ಸ್ತ್ರೀವಾದಿ ನಿಲುವುಗಳನ್ನು ತೆಗೆದುಕೊಳ್ಳುತ್ತೇನೆಯೆ ? ಹೌದು ಹಾಗೂ ಇಲ್ಲ. ಅತ್ಯಾಚಾರ, ಹೆಂಡತಿಯರನ್ನು ಥಳಿಸುವುದು, ವಧುದಹನ, ವಿವಿಧ ರೀತಿಯ ಅಪರಾಧಗಳನ್ನು ನಾನು ತೀವ್ರವಾಗಿ ಪ್ರತಿಭಟಿಸುತ್ತೇನೆ. ಸ್ತ್ರೀಯರನ್ನು ಶತಮಾನಗಳಿಂದ ಮನೆಗಳಲ್ಲಿ ಗುಲಾಮರಂತೆ ನಡೆಸಿಕೊಳ್ಳುತ್ತಿರುವುದು ನನ್ನಲ್ಲಿ ಭಯ ಹುಟ್ಟಿಸುತ್ತದೆ. ಪ್ರಗತಿಪರ ಪುರುಷರೂ ಸಹ ಸ್ತ್ರೀಯರಿಗೆ, ಹಾಗೂ ಪುರುಷರಿಗೆ ದ್ವಿಮುಖ ರೀತಿನೀತಿಗಳನ್ನು ಹೇಳುತ್ತಿರುವುದು ನನಗೆ ಜಿಗುಪ್ಸೆಯನ್ನುಂಟು ಮಾಡಿದೆ. ಸ್ತ್ರೀಯರನ್ನು ಕೇವಲ ಭೋಗದ ವಸ್ತುಗಳನ್ನಾಗಿ ನಡೆಸಿಕೊಳ್ಳುವುದು ಅಸಹ್ಯವೆನಿಸುತ್ತದೆ. ಇವೆಲ್ಲಾ ಬದಲಾಗಬೇಕೆಂದು ನನಗೆ ಬಲವಾಗಿ ಅನಿಸುತ್ತದೆ. ಆದರೆ ಕೇವಲ ಘೋಷಣೆಗಳ ಮೂಲಕ ಬದಲಾವಣೆ ಸಾಧ್ಯವಿಲ್ಲ. ಅನಕ್ಷರಸ್ಥ ಮಹಿಳೆಯರು ಸಾಂಪ್ರದಾಯಕ ಕೆಲಸಗಳನ್ನು ಬಿಟ್ಟು, ಇಂತಹ ವೃತ್ತಿಯನ್ನು ಪಡೆಯಲು ಸಾಧ್ಯವಿಲ್ಲ. ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ಯಾವ ರೀತಿಯ ಸ್ವತಂತ್ರ ಅಸ್ತಿತ್ವವಿರಲು ಸಾಧ್ಯ ? ಮೊಟ್ಟಮೊದಲು ಮೂಲಭೂತವಾಗಿ ಮಾಡಬೇಕಾದ ಕೆಲಸವೆಂದರೆ, ಮಹಿಳೆಯರಲ್ಲಿ ಅಕ್ಷರ ಜ್ಞಾನ ಹೆಚ್ಚಿಸುವುದು, ಸ್ತ್ರೀಯರ ಆತ್ಮಗೌರವವನ್ನು ಉಳಿಸಿಕೊಳ್ಳುವಂತಹ ಕೆಲಸಗಳಿಗೆ ಅವರಿಗೆ ತರಬೇತಿ ನೀಡುವುದು, ಮಹಿಳಾ ಸಂಘ-ಸಂಸ್ಥೆಗಳು, ಸರಕಾರ, ಖಾಸಗೀ ಸಂಸ್ಥೆಗಳು, ಇಂತಹ ಚಟುವಟಿಕೆಗಳಲ್ಲಿ ತೊಡಗುವುದು ಸ್ವಾಗತಾರ್ಹ.

ಅದೃಷ್ಟವಂತ ಮಧ್ಯಮ ಹಾಗೂ, ಮೇಲ್ವರ್ಗದ ಸ್ತ್ರೀಯರು ಕೆಳವರ್ಗದ, ನತದೃಷ್ಟ ಸಹೋದರಿಯರಿಗೆ ಸ್ಫೂರ್ತಿ ಹಾಗೂ ಜೀವಂತ ಉದಾಹರಣೆಯಾಗಬೇಕು. ಪುರುಷರಂತೆ ಮಹಿಳಾ ವಿಜ್ಞಾನಿಗಳು, ಕಲಾವಿದರು, ಸಾಹಿತಿಗಳು ಚಲನ ಚಿತ್ರ ನಿರ್ದೇಶಕರು, ಸಂಶೋಧಕರು ಇಲ್ಲದಿರುವುದು ಚಾರಿತ್ರಿಕ ಸತ್ಯವೇ ಸರಿ. ಇದು ಪುರುಷ ಪ್ರಧಾನ ಸಮಾಜದ ಅನಿವಾರ್ಯ ಪರಿಣಾಮವೇ ಹೊರತು ಮಹಿಳೆಯರ ತಪ್ಪಲ್ಲ. ನಮ್ಮಲ್ಲಿನ ಪ್ರಜ್ಞಾವಂತ ಮಹಿಳೆಯರು ಈ ವ್ಯವಸ್ಥೆಯನ್ನು ಬದಲಾಯಿಸಲು ಪ್ರಯತ್ನಿಸಬಹುದು. "ನಾನು ಮೆಚ್ಚುವ ಮಹಿಳೆ ಅಮೇರಿಕಾದ ಛಾಯಾಗ್ರಾಹಕಿ ಎಲೆನ್ ಮಾರ್ಕ್. ಅವಳು ಸ್ತ್ರೀವಾದದ ಉಗ್ರ-ನಿಲುವುಗಳನ್ನು ತೆಗೆದುಕೊಳ್ಳಲಿಲ್ಲ. ಮೃದು ಸ್ವಭಾವದ, ಅಲಂಕಾರ ಪ್ರಿಯಳಾದ, ಆಭರಣಗಳನ್ನು ಮೋಹಿಸುವ, ಬಾಹ್ಯ ನೋಟದಲ್ಲಿ ಸ್ತ್ರೀತನದ ಎಲ್ಲಾ ಗುಣಗಳನ್ನು ಒಳಗೊಂಡಿದ್ದವಳು. ಆದರೆ ತನ್ನ ವೃತ್ತಿಯಲ್ಲಿ ಆಕೆ, ಪುರುಷರಿಗೆ ಸಮಾನವೆಂದು ಮಾತ್ರವಲ್ಲ, ಅವರಿಗಿಂತಲೂ ಮೇಲು ಎಂದು ಸಾಬೀತುಪಡಿಸಿದ್ದಾಳೆ. ಈ ಕಾರಣಗಳಿಂದಲೇ, ನಾನು ನನ್ನ ಚಿತ್ರವನ್ನು ಮಹಿಳಾ ಚಲನ ಚಿತ್ರೋತ್ಸವಕ್ಕೆ ಕಳಿಸಲು ಸಮ್ಮತಿಸಲಿಲ್ಲ. ನನ್ನ ದೃಷ್ಟಿಯಲ್ಲಿ ಇಂತಹ ಮಹಿಳಾ ಚಿತ್ರೋತ್ಸವ ಅಂಗವಿಕಲತೆಗಾಗಿ ಮೀಸಲಾದವು.

ನಾನು ಆಕರ್ಷಕಳಾಗಿ, ಮೋಹಕಳಾಗಿ ಕಾಣುವಂತೆ ಮಾಡುವ ಪ್ರಯತ್ನವನ್ನು ನಾನು ನಿಲ್ಲಿಸಲಾರೆ. ಆಕರ್ಷಕ ಪುರುಷರು ನನಗೆ ಆಕರ್ಷಕರಾಗಿರುವ ಭೋಗದ ವಸ್ತುಗಳಾಗಿರುವವರೆಗೆ ನಾನು ಅವರಿಗೆ ಭೋಗದ ವಸ್ತುವಾಗಿ ಪರಿಣಮಿಸುವುದರಲ್ಲಿ ನನ್ನ ಅಭ್ಯಂತರವೇನಿಲ್ಲ. ಇದು ಒಬ್ಬ ವ್ಯಕ್ತಿಯ ಜೀವನದ ಅಥವಾ ಅಂತ್ಯದ ಪರಮ ಉದ್ದೇಶವಾಗಿರದಿದ್ದರೆ, ಇಂತಹ ಧೋರಣೆಗಳು ತಪ್ಪೆಂದೆನಿಸುವುದಿಲ್ಲ.

ಇಂತವರು ಏಕಮುಖ ಹಾಗೂ ನೀರಸವಾದ ವ್ಯಕ್ತಿಗಳಾಗಿರುತ್ತಾರೆ. ಆದರೆ ಸ್ತ್ರೀವಾದಿಯಾಗರಬೇಕಾದರೆ ಈ ಎಲ್ಲಾ ಸಂತೋಷಗಳಿಂದ ವಂಚಿತೆಯಾಗಿಬೇಕೆಂದಲ್ಲ. ಜಾಗೃತ ಹಾಗೂ ವಿದ್ಯಾವಂತ ಮಹಿಳೆಯರು, ಸಮಾಜ ಅತ್ತೆಮಾವಂದಿರು, ಹಾಗೂ ಗಂಡಂದಿರು ಏನು ಹೇಳುತ್ತಾರೆಂಬುದರ ಬಗ್ಗೆ ಚಿಂತಿಸುವುದನ್ನು ನಿಲ್ಲಿಸಬೇಕಾಗುತ್ತದೆ. ನೀವು ಏನನ್ನು ಮಾಡುವಿರೊ ಆದರಲ್ಲಿ ಸರಿಯಾಗಿದ್ದರೆ, ಒಂದು ಹಂತದ ನಂತರ ಯಾರೂ ಏನನ್ನು ಹೇಳಲಾರರು. ನನಗೂ ಚೆನ್ನಾಗಿ ಗೊತ್ತಿದೆ, ಇದು ಕೇವಲ ಯಾರು ಏನು ಹೇಳುತ್ತಾರೆಂಬುದಷ್ಟೆ ಅಲ್ಲಿ ಸ್ತ್ರೀಯರು ಹೊರಗೆ ಹೋಗಿ ತಮಗಿಷ್ಟ ಬಂದುದನ್ನು ಆಯ್ಕೆ ಮಾಡಿಕೊಳ್ಳಲು, ಎದುರಾಗುವ ಸಮಸ್ಯೆಯೆಂದರೆ ಮಕ್ಕಳ ಪಾಲನೆ, ಪೋಷಣೆ ಹೆಚ್ಚಾಗಿ ದುಡಿಯುವ ಮಹಿಳೆಯರು ಮಕ್ಕಳನ್ನು ನೋಡಿಕೊಳ್ಳಲು ಆಯಾಗಳನ್ನು ನೇಮಿಸಿಕೊಳ್ಳ ಬಹುದಾದರೂ, ಇದು ತೃಪ್ತಿಕರವಾದ ಪರಿಹಾರವಲ್ಲ.

ದುಡಿಯುವ ಮಹಿಳೆಯಾಗಿ ನಾನು ಸಹ ಈ ರೀತಿಯ ಸಮಸ್ಯೆಯನ್ನು ಎದುರಿಸುತ್ತಿದ್ದೇನೆ. ಮಕ್ಕಳನ್ನು ಕಡೆಗಣಿಸುತ್ತಿರುವ ಭಾವನೆ ನನ್ನನ್ನು ಕಾಡಿದೆ. ನನ್ನ ಜೀವನದ ಪ್ರಮುಖ ಹಾಗೂ ಸೃಜನಾತ್ಮಕ ಆಯಾಮಗಳಾದ ವೃತ್ತಿ ಮತ್ತು ತಾಯ್ತನದ ನಡುವೆ ತುಯ್ದಾಡಿದ್ದೇನೆ. ಈ ಸಮಸ್ಯೆಗೆ ಸರಿಯಾದ ಉತ್ತರವನ್ನು ಕಂಡುಕೊಳ್ಳಲು ನನಗೆ ಸಾಧ್ಯವಾಗಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕುಟುಂಬದ ಸಮಸ್ಯೆಯೇ ನನಗೆ ಪ್ರತಿಬಂಧಕವಾಗದೇ, ಚಲನಚಿತ್ರ ಮಾಡಲು ಸಾಧ್ಯವಾಗಿರುವುದು, ನನಗೆ ಸಂಪೂರ್ಣ ಸಹಕಾರ ನೀಡುವ ನನ್ನ ಗಂಡನಿಂದಾಗಿ.

ಮಹಿಳೆಯರು ಚಿತ್ರನಿರ್ಮಾಪಕಿಯಾಗುವುದರಿಂದ, ಚಲನ ಚಿತ್ರ ಸಮಾಜದಲ್ಲ, ಹೊಸಶಕ್ತಿ ಹಾಗೂ ಸೂಕ್ಷ್ಮ ಹೊಳಪು, ಒಳನೋಟಗಳನ್ನು ತರಬಲ್ಲರು. ಮಹಿಳೆಯರ ಸಮಸ್ಯೆಗಳ ಬಗ್ಗೆ ಸಿನಿಮಾ ಮಾಡುವುದರ ಜೊತೆಯಲ್ಲಿ ಪುರುಷ ಪ್ರಧಾನವಾದ ಚಲನ ಚಿತ್ರ ಉದ್ಯಮದಲ್ಲಿ ವಿರಳವಾದ "ವಸ್ತು ಮತ್ತು ಸ್ಥಿತಿಯ ಬಗ್ಗೆ ಸ್ತ್ರೀಯರ ದೃಷ್ಟಿಕೋನವನ್ನು ಹಿಡಿದಿಡಬಲ್ಲೆ. ಸಾಮಾಜಿಕ, ಅಥವಾ ರಾಜಕೀಯ ಉದ್ದೇಶಗಳಿಗೆ ತಾತ್ಕಾಲಿಕ ಪರಿಣಾಮಗಳನ್ನು ಉಂಟು ಮಾಡುವ ನಿರ್ದಿಷ್ಟ ನಿಲುವು. ಘೋಷಣೆ ಉಗ್ರ ಸ್ವರೂಪದಲ್ಲಿ ವ್ಯಕ್ತವಾಗುವುದನ್ನು ನಾನು ಇಷ್ಟಪಡುವುದಿಲ್ಲ.

ಹೃದಯದ ತಂತಿಗಳನ್ನು ಮಿಡಿಯುವ, ಹೆಚ್ಚು ಸ್ತ್ರೀತ್ವದಿಂದ ಕೂಡಿದ ವಿಧಾನಗಳನ್ನು ನಾನು ಆಯ್ಕೆ ಮಾಡುತ್ತೇನೆ.

ಸಭ್ಯತೆ ಮೀರಿದ ಜಾಹಿರಾತು

ಇಂದಿನ ವಾಣಿಜ್ಯ ಲೋಕದಲ್ಲಿ, ಜಾಹಿರಾತುಗಳು ಎಷ್ಟರ ಮಟ್ಟಿಗೆ ಅಗ್ರಸ್ಥಾನವನ್ನು ಆಕ್ರಮಿಸಿದೆಯೋ, ಅಷ್ಟರಮಟ್ಟಿಗೇ, ಜಾಹಿರಾತುಗಳಲ್ಲಿ ಹೆಣ್ಣಿಗೆ ಪ್ರಮುಖ ಸ್ಥಾನ ಲಭಿಸಿ ಬಿಟ್ಟಿದೆ. ಅಲಂಕಾರ ದ್ರವ್ಯಗಳು, ವಸ್ತ್ರ, ಸಾಬೂನು, ವಾಹನಗಳು, ದಂತೋಜ್ವಲ ಪುಡಿ ಇತ್ಯಾದಿ ಬೇರಾವುದೇ ವಸ್ತುವೇ ಆಗಲಿ ಎಲ್ಲದರ ಜಾಹಿರಾತಿಗೂ ಹೆಣ್ಣೇ ಬೇಕು.

ಈ ಸಂಬಂಧದಲ್ಲಿ ಪ್ರಸಿದ್ಧ ಮಾಸ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಅತ್ಯಂತ ಕೀಳುಮಟ್ಟದ ಒಂದು ಜಾಹಿರಾತಿನ ಬಗ್ಗೆ ನಾನು ಹೇಳಲೇಬೇಕಾಗಿದೆ. ಆಲ್ವಿನ್ ಕಂಪೆನಿಯವರು ಕೈಗಡಿಯಾರಗಳಿಗೆ ನೀಡುತ್ತಿರುವ ಜಾಹಿರಾತು ಸಭ್ಯತೆಯ ಮಟ್ಟವನ್ನು ಮೀರಿದೆ. ಒಂದು ಕೈಗೆ ಗಡಿಯಾರವನ್ನು ಕಟ್ಟಿದ ಒಂದು ಹುಡುಗಿ ಅರೆಭಂಗಿಯಲ್ಲಿ ಮಲಗಿರುವ ಚಿತ್ರ, ಜೊತೆಗೆ ಹುಡುಗಿಯ ಮುಂಭಾಗದಲ್ಲಿ ಅರ್ಧ ಕಚ್ಚಿದ ಸೇಬಿನ ಹಣ್ಣು. ಈ ಚಿತ್ರದ ಮೂಲಕ ಆಲ್ವಿನ್ ಕಂಪೆನಿಯವರು ಗಡಿಯಾರಗಳ ಬಗ್ಗೆ ಏನನ್ನ ಹೇಳ ಬಯಸುತ್ತಿದ್ದರೂ ನನಗಂತೂ ಅರಿವಾಗಲಿಲ್ಲ. ಜಾಹಿರಾತಿನ ವಸ್ತುವಿಗೂ, ಜಾಹಿರಾತು ವೈಖರಿಗೂ ಯಾವ ಸಂಬಂಧವೂ ಇರುವಂತೆ ಕಾಣುವುದೇ ಇಲ್ಲ.

ಒಟ್ಟಾರೆಯಾಗಿ ನನ್ನ ಅಭಿಪ್ರಾಯ ಇಷ್ಟು. ಈ ರೀತಿಯ ಅಸಭ್ಯ ಜಾಹಿರಾತಿನ ಪ್ರಕಟನೆಯನ್ನು ಈ ಕೂಡಲೇ ನಿಲ್ಲಿಸಲಿ. ಇದಕ್ಕೆ ಬದಲಾಗಿ, ಆಲ್ವಿನ್ ಕಂಪೆನಿಯವರು, ತಮ್ಮ ವಸ್ತುವಿನ ಗುಣಮಟ್ಟದ ಬಗ್ಗೆಯಾಗಲಿ, ವಸ್ತುವಿನ ವೈಶಿಷ್ಟ್ಯದ ಬಗ್ಗೆಯಾಗಲಿ, ಅರಿವು ನೀಡುವಂಶಹ ಆಕರ್ಷಕ ಜಾಹಿರಾತುಗಳನ್ನು ನೀಡಲಿ.

— ಎನ್. ಕುಸುಮ

ನಿರಾಶೆ

ನೋವಿನ ಗೂಡಿನಲಿ
ನಿರಾಶೆಯ ಹಕ್ಕಿ
ಇಟ್ಟ ಒಂದೊಂದೆ
ಮೊಟ್ಟೆಗಳು
ನಿರ್ಲಿಪ್ತ
ಭ್ರೂಣವಾಗಿ
ಹೊರ ಬರುತ್ತಿವೆ.

ಪ್ರೇಮಾಸಿರ್ಸಿ

ಘರೇ ಬಾಯಿರೆ : ಅಪಾಯಕಾರಿ ಧೋರಣೆ

ಶ್ರೇಷ್ಠ ನಿರ್ದೇಶಕ ಸತ್ಯಜಿತ್ ರೇ ಅವರ ಇತ್ತೀಚಿನ ಚಿತ್ರ "ಘರೇ ಬಾಯಿರೆ" ಈಗಾಗಲೇ ಪತ್ರಿಕೆಗಳ ಮೂಲಕ ಸಾಕಷ್ಟು ಪ್ರಚಾರ ಪಡೆದಿದೆ. ಸಿನಿಮಾ ಮಾಧ್ಯಮದ ಮೂಲಕ ಭಾರತದ ಸಂಸ್ಕೃತಿಯನ್ನು ವಿಶ್ವದ ಮೂಲೆ ಮೂಲೆಗೊಯ್ಯುವ "ಭಾರತದ ಸಾಂಸ್ಕೃತಿಕ ರಾಯಭಾರಿ" ಎನಿಸಿದ ಸತ್ಯಜಿತ್ ರೇ ಅವರ "ಘರೇ ಬಾಯಿರೆ" (ಮನೆ ಮತ್ತು ಪ್ರಪಂಚ) ಚಿತ್ರ, ರವೀಂದ್ರನಾಥ ಟಾಗೋರ್‌ರ ಕಾದಂಬರಿಯನ್ನಾಧರಿಸಿದೆ.

ಟಾಗೋರ್ ಅವರ ಕಥೆಯನ್ನೇ ಆಧರಿಸಿ ಸತ್ಯಜಿತ್ ರೇ ಹಿಂದೆ ನಿರ್ದೇಶಿಸಿದ್ದ "ಚಾರುಲತಾ" ಚಿತ್ರದಲ್ಲಿ, ಬದಲಾಗುತ್ತಿರುವ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನದ ಶೋಧನೆ ನಡೆಸಿದ್ದರು. ಪುರುಷಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಸಂವೇದನಾಶೀಲ ಹೆಣ್ಣು ತನ್ನತನಕ್ಕಾಗಿ ಅರಸುವಲ್ಲಿ ಉಂಟಾಗಬಹುದಾದ ದ್ವಂದ್ವಗಳನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದರು. "ಮಹಾನಗರ್" ಚಿತ್ರದಲ್ಲೂ ಭಾರತೀಯ ಸಮಾಜದಲ್ಲಿನ ಹೆಣ್ಣಿನ ಸಮಸ್ಯೆಯ ಒಂದು ಆಯಾಮಕ್ಕೆ ಅಭಿವ್ಯಕ್ತಿ ನೀಡಿದ್ದರು. "ಘರೆ ಬಾಯಿರೆ" ಚಿತ್ರದಲ್ಲೂ ಹೆಣ್ತನದ ಬಗೆಗಿನ ಅನ್ವೇಷಣೆ ಮುಂದುವರಿಯುತ್ತದೆ. ಆದರೆ ಚಿತ್ರದ ಮುಖ್ಯ ಪಾತ್ರವಾದ ಬಿಮಲಾಳ ಅಂತರಂಗ ತೊಳಲಾಟಗಳ ಚಿತ್ರಣದಲ್ಲಿ, ಮನುಷ್ಯ ಹೃದಯಗಳ ಸ್ಪಂದನಗಳನ್ನು ಸೂಕ್ಷ್ಮವಾಗಿ ಗ್ರಹಿಸುವಲ್ಲಿ ವಿಫಲರಾಗಿರುವುದು ಒಟ್ಟಾರೆ ಚಿತ್ರದ ಸೋಲಾಗಿದೆ.

ಘರೆ ಬಾಯಿರೆ, ಗಂಡ, ಹೆಂಡತಿ ಮತ್ತು ಆಕೆಯ ಪ್ರೇಮಿಯ ಮಧ್ಯದ ತ್ರಿಕೋನ ಸಂಬಂಧದ ಪ್ರೇಮ ಕಥಾನಕ. ಈ ಚಿತ್ರಕ್ಕೆ ಈ ಶತಮಾನದ ಆದಿ ಭಾಗದಲ್ಲಿ (1905) ನಡೆಯುವ ವಿದ್ಯಮಾನಗಳ ಆಯಾಮವೂ ಇದೆ. ಆದರೆ ಘರೆ ಬಾಯಿರೆ ರಾಜಕೀಯ ಚಿತ್ರವೆನ್ನುವುದಕ್ಕಿಂತ ಪ್ರೇಮ ಕಥಾನಕವೆನ್ನುವುದು ಹೆಚ್ಚು ಪ್ರಸ್ತುತ ತ್ರಿಕೋನ ಸಂಬಂಧ ಮತ್ತು ಇದು ಹೇಗೆ ಅಂತ್ಯವಾಗುತ್ತದೆ ಎಂಬುದಕ್ಕೆ ಹೆಚ್ಚಿನ ಒತ್ತು ಕೊಡುವ ಉದ್ದೇಶ ನನ್ನದು ಎಂದು ರೇ ಅವರೇ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಬಿಮಲಾ (ಸ್ವಾತಿಲೇಖಾ ಚಟರ್ಜಿ) ಸಂಪ್ರದಾಯಸ್ಥ ಬಂಗಾಳಿ ಕುಟುಂಬದ ಗೃಹಿಣಿ. ಈಕೆಯ ಪತಿ ನಿಖಿಲೇಶ್ (ವಿಕ್ಟರ್ ಬ್ಯಾನರ್ಜಿ) ಆಧುನಿಕ ದೃಷ್ಟಿಕೋನವುಳ್ಳ ಉದಾರವಾದಿ. ಜಿಡ್ಡುಗಟ್ಟಿದ ಸಂಪ್ರದಾಯದ ಮೌಲ್ಯಗಳಿಂದ ತನ್ನ ಪತ್ನಿ ಹೊರಬಂದು ಆಧುನಿಕಳಾಗಬೇಕು, ಸ್ವಂತಿಕೆಯುಳ್ಳವಳಾಗಬೇಕು ಎಂದು ಬಯಸುವವ. ಈ ದಿಸೆಯಲ್ಲಿ ಆಕೆಗೆ ಇಂಗ್ಲಿಷ್ ಕಲಿಸುವುದಕ್ಕಾಗಿ ಅಧ್ಯಾಪಕಿಯೊಬ್ಬಳನ್ನೂ ನೇಮಿಸಿರುತ್ತಾನೆ. ಈ ಹಂತದಲ್ಲಿ ನಿಖಿಲೇಶ್‌ನ ಗೆಳೆಯ ಹಾಗೂ ಸ್ವದೇಶಿ ಚಳುವಳಿಯ ನಾಯಕ ಸಂದೀಪ್ ಮುಖರ್ಜಿ ಪ್ರವೇಶಿಸುತ್ತಾನೆ. ಪತಿಯ ಒತ್ತಾಯಕ್ಕೆ ಆತನನ್ನು ಭೇಟಿಯಾಗಲು ಬಿಮಲಾ ಮನಸಿಲ್ಲದೆ ಒಪ್ಪಿಕೊಳ್ಳುತ್ತಾಳೆ ಕಥೆಯ ಬೆಳವಣಿಗೆ ದೃಷ್ಟಿಯಿಂದ ಮುಖ್ಯವಾಗುವ ಈ ಭೇಟಿಗಾಗಿ, ಬಂಗಾಳಿ ಮೇಲ್ವರ್ಗದ ಮಹಿಳೆಯರ ಜನಾನಾದೊಳಗಿನಿಂದ ಪತಿಯೊಡನೆ ಬಿಮಲಾ ಹೊರಬರುವ ದೃಶ್ಯವನ್ನು ದೀರ್ಘವಾಗಿ ಚಿತ್ರೀಕರಿಸಲಾಗಿದೆ. ಇಲ್ಲಿಂದ ಬಿಮಲಾಳ ಬದುಕಿನ ಗತಿ ಬದಲಾಗುತ್ತದೆ. ಗಂಭೀರ ಪ್ರವೃತ್ತಿಯ ನಿಖಿಲೇಶನ ಸ್ವಭಾವಕ್ಕೆ ವಿರುದ್ಧವಾದ ಸಂದೀಪನ ಮೋಹಕತೆಗೆ ಮಾರುಹೋಗುತ್ತಾಳೆ. ತನ್ನನ್ನೇ ಆತನಿಗೆ ಸಮರ್ಪಿಸಿಕೊಳ್ಳುವ ಬಿಮಲಾ ಆತನಿಗೆ ಆರ್ಥಿಕ ನೆರವೂ ನೀಡುತ್ತಾಳೆ. ಸಂದೀಪನ ಹೊರ ವ್ಯಕ್ತಿತ್ವದ ಪ್ರಭಾವಕ್ಕೊಳಗಾಗುವ ಬಿಮಲಾ ಆತನ ಅಂತರ್ಯದ ಜಾಳುತನ ಗ್ರಹಿಸುವ ಸ್ಥಿತಿಗೆ ಬರುವಲ್ಲಿ ಬಹಳ ತಡವಾಗಿರುತ್ತದೆ. ಸಂದೀಪ ಬಿತ್ತಿದ ಕ್ರಾಂತಿಬೀಜ ಕೋಮುಗಲಭೆಯಾಗಿ ಕವಲೊಡೆದಿರುತ್ತದೆ, ಇದರಿಂದ ತಪ್ಪಿಸಿಕೊಂಡು ಓಡುವ ಸಂದೀಪನ ಕ್ರಾಂತಿ ವಿಚಾರಗಳ ಟೊಳ್ಳುತನ, ಉದ್ರಿಕ್ತ ಗುಂಪನ್ನೆದುರಿಸಲು ಕತ್ತಲಲ್ಲಿ ಕರಗಿ ಹೋಗುವ ನಿಖಿಲೇಶನ ವ್ಯಕ್ತಿತ್ವದ ಗಟ್ಟಿತನ ಪ್ರತಿಪಾದಿತವಾಗುತ್ತದೆ. ಸಂದೀಪ ಮರಳಿ ಜೀವಂತವಾಗಿ ಹಿಂದಿರುಗುವುದಿಲ್ಲ. ಬಿಮಲಾ ವಿಧವೆಯಾಗುತ್ತಾಳೆ.

ಈ ಶತಮಾನದ ಆದಿಭಾಗದಲ್ಲಿ ಮಹಿಳಾ ವಿಮೋಚನೆಗಾಗಿ ನಡೆದ ಪ್ರಯತ್ನಗಳ ಅಂಶವನ್ನು ಈ ಚಿತ್ರ ಒಳಗೊಂಡಿದೆ ಎಂದು ಪರಿಗಣಿಸುವುದಾದರೆ ಇದು ಬೀರುವ ಒಟ್ಟು ಪರಿಣಾಮ ಬಹಳ ನೇತ್ಯಾತ್ಮಕವಾದದ್ದು ಮೊದಲನೆಯದಾಗಿ ಮಹಿಳಾ ವಿಮೋಚನೆಯ ವಾದವನ್ನು ಲೈಂಗಿಕ ಸಂಬಂಧಗಳ ಮೂಲಕ ಪ್ರತಿಪಾದಿಸಲು ಯತ್ನಿಸುವುದು, ಮಹಿಳಾ ವಿಮೋಚನಾ ಹೋರಾಟದಲ್ಲಿ ಹೆಣ್ಣಿನ ಲೈಂಗಿಕ ಬದುಕಿನ ಆಯ್ಕೆ ಬಹಳ ಮುಖ್ಯ ಪ್ರಶ್ನೆ

ಯಾದರೂ, ಸಾಮಾಜಿಕ, ಆರ್ಥಿಕ ಒಟ್ಟು ಸಾಂಸ್ಕೃತಿಕ ಸಂದರ್ಭದ ಆಯಾಮಗಳಲ್ಲಿ ಆಗಬೇಕಿರುವ ಬದಲಾವಣೆ ಗುರುತಿಸದೆ ಹೋಗುವುದು ಮಹಿಳಾ ಹೋರಾಟದ ಅರ್ಥೈಸುವಿಕೆಯನ್ನು ಅಪೂರ್ಣಗೊಳಿಸುತ್ತದೆ. ಚಿತ್ರದಲ್ಲಿ ಬಿಮಲಾಳ ಬದುಕಿನಲ್ಲಾಗುವ ಬದಲಾವಣೆಗಳು ಸಹಜವಾಗಿ ಒಡಮೂಡುವುದಿಲ್ಲ.

ಟಾಗೋರರ ಕಾದಂಬರಿ, ನಿಖಿಲೇಶನ ವಿಧಿ ಏನಾಗುತ್ತದೆ ಎಂಬುದನ್ನು ಹೇಳುವುದಿಲ್ಲ. ಆದರೆ ಚಿತ್ರದಲ್ಲಿ ಬಿಮಲಾಳನ್ನು ಬಿಳಿಸೀರೆಯ, ವಿಧವೆಯ ಚಿತ್ರದಲ್ಲಿ ತೀರಾ ಹತ್ತಿರದಿಂದ ತೋರುವುದು ಅಹಿತಕಾರಿ ಪರಿಣಾಮ ಉಂಟುಮಾಡುತ್ತದೆ. ಇದ್ದಕ್ಕಿದ್ದಂತೆ ಬಂದೆರಗುವ ಈ ಅಂತ್ಯದ ಭೀಕರತೆ ಬರೀ ಕಥೆಯ ಅಂತ್ಯವನ್ನಷ್ಟೇ ಸೂಚಿಸದೆ ಪರೋಕ್ಷವಾಗಿ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಯಥಾಸ್ಥಿತಿ ಮೌಲ್ಯಗಳ ದೃಢೀಕರಣವೂ ಆಗಿದೆ. ಮನೆಯ ಸಂಪ್ರದಾಯದ ಎಲ್ಲೆಗಳನ್ನು ಮೀರಿ ಹೊರ ಜಗತ್ತಿಗೆ ಪ್ರವೇಶಿಸಿ, ಅನುಭವಗಳನ್ನು ಶೋಧಿಸಿ ತನ್ನ ತನ ಗುರುತಿಸಿಕೊಳ್ಳಲೆತ್ನಿಸುವ ಹೆಣ್ಣು ಕಡೆಗೆ ಹೊಂದಬೇಕಿರುವ ಸ್ಥಿತಿಯ ಬಗ್ಗೆ ಸಂದೇಶ ಸಾರುವಂತೆ ಬಿಮಲಾಳ ವೈಧವ್ಯವನ್ನು ಚಿತ್ರಿಸಲಾಗಿದೆ.

"ತನ್ನ ತಪ್ಪಿಗಾಗಿ ತನಗೆ ಸರಿಯಾಗಿ ಶಿಕ್ಷೆಯಾಗುವುದು" ಎಂದು ಪಶ್ಚಾತ್ತಾಪದಿಂದ ನೊಂದ ಬಿಮಲಾ ಹೇಳುವ ಮಾತುಗಳ ಮೂಲಕವೂ ಈ ಪರಿಣಾಮಕ್ಕೆ ಪ್ರೇಕ್ಷಕರನ್ನು ಸಿದ್ಧಗೊಳಿಸಲಾಗುತ್ತದೆ. ಲೌಕಿಕ ಜಗತ್ತಿನ ವಿವಿಧ ಅನುಭವಗಳು ಹೆಣ್ಣಿನ ವ್ಯಕ್ತಿತ್ವ ಬೆಳೆಸುವುದಿಲ್ಲ ಬದಲಿಗೆ ಪಶ್ಚಾತ್ತಾಪದ ಬೆಂಕಿಯಲ್ಲಿ ಬೇಯುವ ಉರಿಗೆ ಆಕೆಯನ್ನು ತಳ್ಳುತ್ತದೆ. ವೈಧವ್ಯದ ಬಿಳೀ ಸೀರೆಯಲ್ಲಿ ಮತ್ತೆ ಸಂಪ್ರದಾಯದ ಬೇಲಿಗೇ ಬಂಧಿಸುತ್ತದೆ. ಸಾಮಾನ್ಯ ಪ್ರೇಕ್ಷಕ ಇಂತಹ ಚಿತ್ರಗಳ ಮೂಲಕ ನೇರವಾಗಿ ಜೀವನ ಮೌಲ್ಯಗಳನ್ನೇ ಗ್ರಹಿಸುವುದರಿಂದ, ಹೆಣ್ಣಿನ ಬಗ್ಗೆ ಇದು ರೂಪಿಸುವ ಧೋರಣೆ ಒಂದು ಸಮಾಜದ ಬೆಳವಣಿಗೆಯಲ್ಲಿ ಅಪಾಯಕಾರಿ.

ಸಿ. ಜಿ. ಎಂ.

ಸಿನಿಮಾ

ನಮ್ಮ ಆಫೀಸಿನಲ್ಲಿರುವ ಸತೀಶ್
ಜತೆ ಸಿನಿಮಾಕ್ಕೆ ಹೋಗಿದ್ದು ಬರುತ್ತೇನೆ
ಎಂದು ತಿಳಿಸಿದಾಗ
ನನ್ನ ಗಂಡ :
'ಆ ಏನಂದೇ' ಎಂದ
ರಭಸಕ್ಕೆ ಗೋಡೆ ಮೇಲಿದ್ದ
ಲೆನಿನ್ ಫೋಟೋ
ಧಡಾರನೆ ನೆಲಕ್ಕೆ ಬಿತ್ತು, ಮುಖ ಅಡಿಯಾಗಿ.

—ಸುಚೇತನ ಸ್ವರೂಪ

ಉದ್ಯೋಗಾವಕಾಶದಿಂದ ವಂಚಿತರಾಗುತ್ತಿರುವ ಮಹಿಳೆಯರು

ಭಾರತೀಯ ಮಹಿಳೆಯರ ರಾಷ್ಟ್ರೀಯ ಒಕ್ಕೂಟವು ಗುರ್ತಿಸಿರುವಂತೆ ಔದ್ಯೋಗಿಕ ಮಾರುಕಟ್ಟೆಗಳಲ್ಲಿ ಪ್ರಮುಖವಾಗಿ ನಗರ ಪ್ರದೇಶಗಳಲ್ಲಿ ಮಹಿಳೆಯರ ಉದ್ಯೋಗ ಅವಕಾಶವು ಬೆಚ್ಚಿ ಬೀಳುವ ಪರಿಯಲ್ಲಿ ಸಂಕುಚಿತಗೊಳ್ಳುತ್ತಿದೆ.

ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗಾಪೇಕ್ಷೆ ಮಹಿಳೆಯರ ಸಂಖ್ಯೆ ತೀವ್ರಗೊಳ್ಳುತ್ತಾ ಹೋಗುತ್ತಿದ್ದರೆ, ಉದ್ಯೋಗ ಪಡೆದವರ ಸಂಖ್ಯೆ ಕೆಳಮುಖವಾಗುತ್ತಾ ಹೋಗುತ್ತಿದೆ.

1982ರಲ್ಲಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ಉದ್ಯೋಗಾಪೇಕ್ಷೆ ಮಹಿಳೆಯರ ಮೊತ್ತ ಶೇ 17.5 ಕ್ಕೆ ಏರಿದ್ದರೆ, ಉದ್ಯೋಗ ಒದಗಿಸಲ್ಪಟ್ಟವರ ಸಂಖ್ಯೆ ಶೇ 10.9ಕ್ಕೆ ಇಳಿದುಬಿಟ್ಟದ್ದುದನ್ನು ಭಾರತೀಯ ಮಹಿಳಾ ಒಕ್ಕೂಟವು ತನ್ನ ಪ್ರಕಟಣೆಯಲ್ಲಿ ತೋರಿಸಿತು.

ನಗರ ಪ್ರದೇಶಗಳಲ್ಲಿನ ಮಹಿಳೆಯರನ್ನು ಗಾಬರಿ ಹುಟ್ಟಿಸುವ ರೀತಿಯಲ್ಲಿ ಉದ್ಯೋಗಗಳಿಂದ ತೆಗೆದು ಹಾಕಲಾಗುತ್ತಿದೆ. ಸಾಂಪ್ರದಾಯಿಕವಾಗಿ ಮಹಿಳೆಯರಿಗೆ ಮೀಸಲಾದ ಕೈಗಾರಿಕೆಗಳಲ್ಲಿನ ಮಹಿಳಾ ಉದ್ಯೋಗಾವಕಾಶದ ಅಧಃಪತನವನ್ನು, ಉದ್ಯೋಗದಳಿತದ ಅಧ್ಯಯನವು ಬಯಲು ಮಾಡಿದೆ.

1951 ರಿಂದ, ಮುಂಬೈನ ಹತ್ತಿಗಿರಣಿ ಕಾರ್ಖಾನೆಯಲ್ಲಿ ಪ್ರಮಾಣಕ್ಕನುಗುಣವಾಗಿರ ಬೇಕಾಗಿದ್ದ ಮಹಿಳಾ ಉದ್ಯೋಗವು ಕ್ರಮೇಣ ಕಡಿತಗೊಂಡಿದೆಯೆಂಬುದನ್ನು ಪತ್ರಿಕಾ ವರದಿಯು ಹೇಳುತ್ತದೆ.

ಮುಂಬೈ ಗಿರಣಿ ಕಾರ್ಖಾನೆಯಲ್ಲಿ 1982 – 83ರಲ್ಲಿ ನಲವತ್ತು ಸಾವಿರ ಪುರುಷ ಕಾರ್ಮಿಕರ ಮೊತ್ತಕ್ಕೆ ಪ್ರತಿಯಾಗಿ ಸ್ತ್ರೀ ಕಾರ್ಮಿಕರ ಮೊತ್ತವು ಕೇವಲ ಐದು ಸಾವಿರ ಮಾತ್ರವಾಗಿದ್ದು, 83ರಲ್ಲಿ ನಡೆದ ಮುಷ್ಕರದ ನಂತರ ಕಾರ್ಖಾನೆಯು ಮಹಿಳೆಯರನ್ನು ಮತ್ತೆ ಕೆಲಸಕ್ಕೆ ಹಿಂತೆಗೆದ-ಕೊಳ್ಳಲು ನಿರಾಕರಿಸಿದ ಕಾರಣ ಅಲ್ಲಿನ ಮಹಿಳಾ ಉದ್ಯೋಗಿಗಳ ಸಂಖ್ಯೆ ಎರಡು ಸಾವಿರದ ಐನೂರಕ್ಕೆ ಇಳಿಮುಖವಾಯಿತು.

ಹೊಸತಂತ್ರ ಜ್ಞಾನದ ಬಳಕೆ ಮತ್ತು ಕಾರ್ಮಿಕ ನಾಯಕರಿಂದ ಕಾರ್ಮಿಕರಿಗೆ ನೀಡಲ್ಪಡಬೇಕಾಗಿದ್ದ ನಿಯಮಬದ್ಧ ಅನುಕೂಲಗಳ ನಿರಾಕರಣೆ, ಇವು ಸೆಣಬು ಕಾರ್ಖಾನೆಯಲ್ಲಿ ಮಹಿಳೆಯರನ್ನು ಹಿಂದಟ್ಟುವ ಮುಖ್ಯ ಕಾರಣಗಳಾದವು. ಇದು ಉದ್ಯೋಗಾಡಳಿತದ ಅಧ್ಯಯನವು ಕೊಟ್ಟಿರುವ ಹೇಳಿಕೆ.

125.8 ಸಾವಿರ ಮಹಿಳೆಯರು ಉದ್ಯೋಗ ಪ್ರವೃತ್ತರಾಗಿದ್ದ 1956ರ ಇಸವಿಯಲ್ಲಿ ಗಣಿ ಕೆಲಸಗಳಲ್ಲಿ ಮಹಿಳಾ ಉದ್ಯೋಗವು ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಇಳಿಮುಖವಾಗಿತ್ತು.

ಅಲ್ಲಿಂದ 1971ರಲ್ಲಿ, ಅದೇ ಉದ್ಯೋಗ ಪ್ರವೃತ್ತ ಮಹಿಳೆಯರ ಸಂಖ್ಯೆಯು 72.2 ಸಾವಿರಕ್ಕೆ ಉರುಳಿ. ಅಂದಿನ ನಿರುದ್ಯೋಗಿಗಳ ಬಿಚ್ಚುಗಣ್ಣಿನ ಆಶಾವಾದವನ್ನು ಕಲಕಿಬಿಟ್ಟಿತ್ತು.

1952ರ ಗಣಿ ಕಾಯಿದೆಯ ಪ್ರಕಾರ, ಗಣಿ ಕೆಲಸಗಳಿಗೆ ಮಹಿಳೆಯರನ್ನು ನಿಷೇಧಿಸಲಾಗಿತ್ತು. ನಾಗಾಲೋಟದಲ್ಲಿ ಸಾಗುತ್ತಿರುವ ಮಹಿಳಾ ನಿರುದ್ಯೋಗದ ಸಂಖ್ಯೆಯನ್ನು ಹೆಚ್ಚಿಸಿದೆ.

ಉದ್ಯೋಗ ತಜ್ಞರ ಸಮಿತಿಯ ಅಧ್ಯಯನ ಮತ್ತು ವರದಿಯ ಪ್ರಕಾರ ಕೊಳಚೆ ಮತ್ತು ನಗರ ಪ್ರದೇಶ ಈ ಎರಡರಲ್ಲಿಯೂ ಅಧಿಕಪಾಲು ಮಹಿಳಾ ನಿರುದ್ಯೋಗಿಗಳದ್ದೇ ಎಂದು ಪತ್ರಿಕಾವರದಿಯು ಹೇಳುತ್ತದೆ.

ಇನ್ನೂ ಮರೆಯಲ್ಲೇ ಅವಿತಿರುವ ಮಹಿಳಾ ನಿರುದ್ಯೋಗದ ಬಹುತೇಕ ಭಾಗವನ್ನು ಬಯಲು ಮಾಡುವಲ್ಲಿ ಪ್ರಸ್ತುತ ವರದಿಯು ವಿಫಲವಾಗಿರುವ ಕಾರಣ ಇದೂ ಸಹ ನಿಖರವಾದುದಲ್ಲವೆಂಬುದನ್ನು ಸಮಿತಿಯು ಗುರ್ತಿಸಿದೆ.

ಲಿಂಗಭೇಧ ಪ್ರಮುಖವಾದ ಕಾರ್ಮಿಕ ಮಾರುಕಟ್ಟೆಯು ಮಹಿಳೆಯರ ಕೂಲಿಯನ್ನು ಕಡಿಮೆಮಾಡಿದಷ್ಟೇ ಅಲ್ಲ, ತಮಗೆ ದಕ್ಕಬೇಕಾಗಿದ್ದ ಬಡ್ತಿಯನ್ನೂ ಕೂಲಿಯ ಮೊತ್ತವನ್ನು ಕಾಪಾಡಿಕೊಳ್ಳುವ ಪ್ರಯುಕ್ತ ಕೂಲಿದರದ ಮೊತ್ತವನ್ನು ದುಡಿಮೆಯ ಮಟ್ಟಕ್ಕಿಂತಾ ಅತಿ ಕೆಳ ಮಟ್ಟಕ್ಕೆ ಕಡಿತಗೊಳಿಸುವುದರ ವಿರುದ್ಧ ಮಹಿಳಾ ಕಾರ್ಮಿಕರು ನಡೆಸುವ ಒಗ್ಗಟ್ಟಿನ ಹೋರಾಟವನ್ನೂ ಸಹ ತಡೆಗಟ್ಟಿತು.

ಪುರುಷನಿಗೆ ಸ್ತ್ರೀಯು ಯಾವಾಗ ಬೇಕಾಗುವಳು, ಯಾವ ಸ್ಥಿತಿಯಲ್ಲಿ, ಎಂತಹ ಸಂಬಂಧದಲ್ಲಿ ಹೆಚ್ಚು ಬೇಕಾಗುವಳು-ಎಂಬ ಮಾತನ್ನು ಗಂಭೀರವಾಗಿ ಯೋಚಿಸಿದರೆ ಸ್ತ್ರೀಯ ಮಹತ್ವವನ್ನು ತಿಳಿಯಲು ಒಂದು ದಾರಿಯನ್ನು ಹುಡುಕಿದಂತಾಗುತ್ತದೆ.

—ಶರಚ್ಚಂದ್ರ ಚಟ್ಟೋಪಾಧ್ಯಾಯ

ಜಾತಿಯ ಮತ್ತು ಸ್ತ್ರೀಯರ ಪ್ರತ್ಯೇಕತೆಗಳು ನಮ್ಮ ಜೀವನದ ಧೋಗತಿಗೆ ಮೂಲ ಕಾರಣವೆಂದು ಸಂಪೂರ್ಣವಾಗಿ ಮನವರಿಕೆಯಾಗಿದೆ. ಈ ಎರಡು ಪ್ರತ್ಯೇಕತೆಗಳು ಎಲ್ಲಾ ಸಾಹಸ ಹಾಗೂ ಉತ್ಸಾಹಗಳನ್ನು ಕೊಲೆ ಮಾಡುವಷ್ಟು ಭಯಂಕರವಾಗಿವೆ.

ರಾಮ ಮನೋಹರ ಲೋಹಿಯಾ

ಸುದ್ದಿ ಸಂಕಲನ

ಸಿಮನ್ ಡಿ ಬುವಾ ನಿಧನ

● ಸ್ತ್ರೀವಾದಿ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ಸಲ್ಲಿಸಿದ ಫ್ರಾನ್ಸ್‌ನ ಕಾದಂಬರಿಗಾರ್ತಿ ಹಾಗೂ ತತ್ವಜ್ಞಾನಿ ಸಿಮನ್ ಡಿ. ಬುವಾ ಇತ್ತೀಚೆಗೆ ಫ್ರಾನ್ಸ್‌ನ ಆಸ್ಪತ್ರೆಯಲ್ಲಿ ನಿಧನರಾದರು. ಹೆಣ್ಣಿನ ದಿನನಿತ್ಯದ ಸಾಮಾನ್ಯ ಅನುಭವಗಳನ್ನು ಸಾಮಾಜಿಕ, ಜೀವ ವಿಜ್ಞಾನ, ಆರ್ಥಿಕ ಹಾಗೂ ಸಾಂಸ್ಕೃತಿಕ ಚೌಕಟ್ಟುಗಳಲ್ಲಿ ವಿಶ್ಲೇಷಿಸಿ 'ಹೊಸ ಪ್ರಜ್ಞೆ'ಯ ಮೂಡುವಿಕೆಗೆ ಕಾರಣವಾದ ಈಕೆಯ "ದಿ ಸೆಕೆಂಡ್ ಸೆಕ್ಸ್" ಎಂಬ ಗ್ರಂಥ ವಿಶ್ವದಾದ್ಯಂತ ಮನ್ನಣೆ ಪಡೆದಿದೆ. ಅಸ್ತಿತ್ವವಾದದ ಪ್ರತಿಪಾದಕ ಜೀನ್ ಪಾಲ್ ಸಾರ್ತ್ರ್ ಮತ್ತು ಸಿಮನ್ ಡಿ. ಬುವಾ, ವಿವಾಹ ವ್ಯವಸ್ಥೆಯನ್ನು ಧಿಕ್ಕರಿಸಿ ಜೀವಮಾನವಿಡೀ ಸಂಗಾತಿಗಳಾಗಿ ಬದುಕಿದರು. ಸಾರ್ತ್ರೆಯ ಬದುಕಿನ ಕಡೆಯ ಗಳಿಗೆಗಳನ್ನು ದಾಖಲಿಸುವ "ಫೇರ್‌ವೆಲ್ ಟು ಸಾರ್ತ್ರ್", ಸಿಮನ್ ಡಿ. ಬುವಾರ ಇತ್ತೀಚಿನ ಕೃತಿ.

ಮುಸ್ಲಿಂ ಮಹಿಳಾ ಶಾಸನ

● ಮುಸ್ಲಿಂ ಮಹಿಳಾ ಮಸೂದೆ (ವಿಚ್ಛೇದನದ ಬಗ್ಗೆ ಹಕ್ಕಿನ ರಕ್ಷಣೆ) ಯನ್ನು, ಪ್ರಬಲ ವಿರೋಧಗಳ ಮಧ್ಯೆ ಮೇ 6 ರಂದು ಲೋಕಸಭೆ ಅಂಗೀಕರಿಸಿದೆ.

ಷಾಬಾನು ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪನ್ನು ಇದು ನಿಷ್ಫಲಗೊಳಿಸಿದೆ. ಮೊದಲೇ ಸಾಮಾಜಿಕ ಬದುಕಿನಿಂದ ವಂಚಿತಳಾಗಿ, ಬುರ್ಖಾದೊಳಗೆ ಬೆಂದ ಕನಸುಗಳಲ್ಲಿ ಬದುಕುತ್ತಿರುವ ಮುಸ್ಲಿಂ ಮಹಿಳೆಯರ ಬದುಕನ್ನು ಮತ್ತಷ್ಟು ಅಭದ್ರತೆಗೆ ದೂಡಿದೆ ಈ ಶಾಸನ.

ಆಯ್ಕೆ ಸಮಿತಿಯಲ್ಲಿ ಪ್ರಾತಿನಿಧ್ಯ

● ಇನ್ನು ಮುಂದೆ ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತಹ ಕೇಂದ್ರ ಸರ್ಕಾರದ ಎಲ್ಲಾ ಸಮಿತಿ ಮತ್ತು ಮಂಡಳಿಗಳಲ್ಲಿ ಮಹಿಳಾ ಅಧಿಕಾರಿಯೊಬ್ಬರು ಇರುತ್ತಾರೆ. ಅಂತರ ರಾಷ್ಟ್ರೀಯ ಮಹಿಳಾ ದಶಕದ ಅಂತ್ಯದ ಸಂದರ್ಭದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಂವಿಧಾನ, ಕಾನೂನುಗಳು ಏನೇ ಹೇಳಿದರೂ, ದಿನನಿತ್ಯದ ಬದುಕಿನಲ್ಲಿ ಹಲವಾರು ಬಗೆಯ ತಾರತಮ್ಯ ನೀತಿಯನ್ನೆದುರಿಸಬೇಕಿರುವ ಮಹಿಳೆ, ಸರ್ಕಾರದ ಈ ನಿರ್ಧಾರಕ್ಕೆ ಕೇಂದ್ರ ಸಿಬ್ಬಂದಿ ಮತ್ತು ತರಬೇತಿ ಖಾತೆ ರಾಜ್ಯ ಸಚಿವ ಪಿ. ಚಿದಂಬರಂ ಅವರನ್ನು ಅಭಿನಂದಿಸಬೇಕಿದೆ. ಇದರಿಂದ ಭಾರತ ಸರಕಾರದ ಎಲ್ಲಾ ಆಯ್ಕೆ ಮಂಡಳಿಗಳಲ್ಲೂ ಮಹಿಳೆಯ ಪ್ರಾತಿನಿಧ್ಯವಿರುತ್ತದೆ."

ಭಾರತ ಒಳಗೊಂಡಂತೆ, ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವಿಶ್ವಸಂಸ್ಥೆ ನಡೆಸಿದ ಇತ್ತೀಚಿನ ಸಮೀಕ್ಷೆಯ ಪ್ರಕಾರ, ಮಹಿಳೆಯರು ಕೇವಲ ಶೇಕಡ 6ರಷ್ಟು ಸರಕಾರಿ ಉದ್ಯೋಗ ಹೊಂದಿದ್ದಾರೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರಕಾರವೂ ಉದಾಹರಣೆ ಅನುಸರಿಸಲಿ ಎಂದು ಆಶಿಸೋಣವೆ ?

ಅವಿವಾಹಿತೆಗೆ ಹೆರಿಗೆ ರಜಾ

● ಪ್ರತಿಯೊಬ್ಬ ಹೆಣ್ಣಿಗೂ ತಾಯ್ತನದ ಹಕ್ಕಿರುವುದರಿಂದ ದುಡಿಯುವ ಮಹಿಳೆ ವಿವಾಹಿತೆಯಾಗಿರಲಿ, ಅವಿವಾಹಿತೆಯಾಗಿರಲಿ ಆಕೆಗೆ ಹೆರಿಗೆ ರಜೆ ಸೌಲಭ್ಯ ಕಲ್ಪಿಸಲಾಗಿದೆ.

ಗುಜರಾತಿನ ಟೆಲಿಫೋನ್ ಕೇಂದ್ರದಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದ ಆಶಾಭುಜ್ ಎಂಬುವವರಿಗೆ ವಿವಾಹದ ಸರ್ಟಿಫಿಕೇಟ್ ಕೊಡಲಿಲ್ಲವೆಂದು ಹೆರಿಗೆ ರಜೆ ನಿರಾಕರಿಸಿದ್ದರಿಂದ ಈ ವಿವಾದ ಆರಂಭವಾಗಿತ್ತು.

ಈ ಬಗ್ಗೆ ಮಹಿಳಾ ಕ್ಷೇಮಾಭಿವೃದ್ಧಿ ರಾಜ್ಯ ಸಚಿವೆ ಮಾರ್ಗರೆಟ್ ಆಳ್ವ ಅವರು ಸಿಬ್ಬಂದಿ ಖಾತೆ ರಾಜ್ಯ ಸಚಿವ ಪಿ. ಚಿದಂಬರಂ ಅವರಿಗೆ ಪತ್ರ ಬರೆದಿದ್ದರು. ಇದಕ್ಕೆ ಉತ್ತರಿಸಿರುವ ಚಿದಂಬರಂ ಅವರು, "ಸರಕಾರಿ ಉದ್ಯೋಗದಲ್ಲಿರುವ ಅವಿವಾಹಿತೆ ಮಹಿಳೆಯರಿಗೆ ಹೆರಿಗೆ ರಜಾ ಸೌಲಭ್ಯ ನಿರಾಕರಿಸಬಾರದೆಂದು ಒಪ್ಪುತ್ತೇನೆ.

ತಾಯ್ತನ ಮಹಿಳೆಯ ಹಕ್ಕು, ತಾಯಿ ಮತ್ತು ಮಗುವಿನ ಕ್ಷೇಮಾಭಿವೃದ್ಧಿ ನಮ್ಮ ಮುಖ್ಯ ಕಾಳಜಿಯಾಗಬೇಕು. ಅವಿವಾಹಿತ ಮಹಿಳೆಯರಿಗೆ ಹೆರಿಗೆ ರಜೆ ನೀಡಬಾರದೆಂದು ಎಲ್ಲ ಟೆಲಿ ಸಂಪರ್ಕ ಕೇಂದ್ರಗಳಿಗೂ ಕಳಿಸಿರುವ ಸುತ್ತೋಲೆ ಹಿಂತೆಗೆದುಕೊಳ್ಳಬೇಕೆಂದು ಈಗಾಗಲೇ ಕೋರಿದ್ದೇವೆ" ಎಂದಿದ್ದಾರೆ.